MYSORE PANCHAYAT RAJ BILL 1964.

(Continued)

(Motion to consider.)

Mr. DEPUTY SPEAKER.—There are so many members who are desired of speaking on this Bill we will have to pass this Bill today because the Members are also anxious to discuss the white paper the Sharavathi project. We will therefore reduce the time to be given to each speaker.

Sri V. S. PATIL (Belgaum-1).—Sir, this is one of the most important Bills which is going to affect every individual in the State and it is an attempt by the Government in the right direction.

Sir, before I comment upon the various provisions made in this Bill, I should like to say one point as an introduction to the present Bill.

The Government of India even during pre-Independence days had conceived the idea of rural development. After Independence during last 10 or 11 years, the Central Government has started development blocks. They financed them in the first five years and continued them with some share from the State Governments and after 10 years the difficulty has arisen. It is just like a child born without anybody to look after it. The responsibility for it is being taken neither by the father nor the mother and foster parents have to be found out. That is why neither the Central Government nor the State Government want to continue this scheme of rural development and they want to foist it on the shoulders of the rural people. That is the main reason for the origin of the present Bill. The State Government as well as the Central Government have raised loans not only in this country but also from foreign countries in order to make a start for this rural development and now they are feeling the difficulty to continue it because they are at the end of their resources. This is one of the main reasons for creating some bodies which will shoulder the responsibility of maintaining this child and continue it. For that purpose they have been rather forced by the Central Government to give some powers to the people and force them to increase the resources to meet the expenditure for this development work in rural areas. Such a child cannot be a bad one. We have got a very eminent example in our puranas of such unexpected child and that is the birth of Sakuntala. After her birth neither the father nor the mother wanted to take the respousibility of fostering the child and it was handed over to a third person. But when that child came of age, it gave birth to Bharata. Even though this Bill wants to throw the burden upon the people absolving the State and Central Government. We expect that a strong Bharata will emerge from this attempt. With this expectation I would like to support the Bill, but at the same time I have to warn the Government that they should give real power to the people. Let as not allow them to create shady bodies with controls in the hands of Government which will come in the way of the actual working of these bodies.

(SRI V. S. PATIL)

It is stated in the Statement of Objects and Reasons that 'there was necessity to establish a strong body at the district level which should be made the prime democrateic local body in the State with not only control and supervision over the Taluka Boards and Panchayats in the district but with wide functions and powers to take up and execute all developments works and plan schemes up to the district level'. This is seems to be their idea but when we look to the sections we find that even the Zilla Parishad is not at all independent or autonomous. All its servants are Governments servants. That body has simply to pass some resolutions and if the Executive Officer feels they can be excuted, then only the execution will take place. It is merely semblance of democracy and the real power is vested in the Governments itself.. Even the Deputy Commissioner who has nothing to do with the actual working of this body has been given the power to interfere even in the day to-day working of these bodies. He is the controlling officer and he can do and nndo things. Above all, the Government can even suspended or order whatever they like. This is much more deregatory than what we had enjoyed in the district local boards in the pre-re-organisation of states. The power of those district boards were vast and there was absolutely no interference uuless they committed some irregularities in passing the budget etc. Here the budget of the Panchayat, the taluk and the district have to be approved by the Government or by their agents. This is derogatory to this bodies. This is not transfer of power. It is really strange that since Independence we are centralising power in the hands of Government. It is merely a hypocracy that is being practised by the Government; it is merely a guise to deprive the people by taxing them more and at the same time getting more powers through their own servants. That is why these provisions require to be radically changed if full democratic freedom is to be given to these institutions. All these three tiers are quite essential. The present Zilla Council is nothing; it is merely a waste of time and energy of the officers as well as of the members. I rarely attended the quarterly meetings held during the last three or four years because the Deputy Commissioner dictates everything and the resolutions are passed because almost all of them are officials and very few of them are non-officials. Instead of attending them. it is better to boycot them. I had great hopes that there will be some improvement in this but I find more absolute and autocratic powers being given to the bureaucrats. So we are not going to support these provisions which centre round the officialdom. Ultimately, they have created a fourth tier viz. the state Council for Panchayati Raj which sounds to be a very good name. So also the name Panchayat Raj is very good. Everybody is enamoured by this name. But what is there in this Bill? They deprive the powers in the taluk board, in the district board and every thing of important has been wiped out. The power given to Government Officers is so vast that no honest person, no person with some self-respect and with some

democratic conviction will be prepared to serve on these bodies except our friends on the other side who bow down to everything. We are not going to accept this. I think the Hon. Minister incharge has travelled the whole of India and seen how these institutions are working. The Bill incorporates the audit business. I do wolcome it because if a man mis-uses and misappropriates the money, there must be audit to find this out and recover the amounts from the Concerned persons. When that safeguard is there, why should the Government officers intervene in their day-to-day affairs Sir, I do not understand the attitude of this Government. Since it is going to the Joint Select Committee, I hope, there will be some Member of the erstwhile Bombay area in the Committee so that they may try for the removal of such clauses as deprive these bodies of real powers.

Then, Sir, about finances. Now, the main stay of the finance is in the shape of land revenue. 97 per cent of the land revenue is to be given to these local bodies. The present land revenue is about 4½ crores. But, the Hon. Minister for Revenue said that it would be double after the revision of land revenue and so it may come to 9 crores. But the distribution of this revenue that is proposed in this Bill is defective. Sir, in some taluks and districts because the land is fertile and because of irrigation facilities, the land revenue is more and people of those places pay more land revenue but people in other placess pay less. But, in the name of equity, why should those people who pay more are to get less? I submit that the land revenue paid in any district must be given to that district only and if there is any deficit in regard to other districts, Government must give subvention out of their own funds. It is no use reducing the amount from a district which is paying heavy taxs and giving to another. Then, Sir, many duties and functions are to be entrusted to these bodies and how these bodies can meet the huge Expenditure? So, all the expenditure that Government were incurring in respect of these functions will not be there Government will be responsible for maintainance of law and order only. Hence I suggest that all the money spent by the Government now in respect of these functions should be given to these bodies. Take for example, the primary education. The Government is spending about 16 crores every year. So, when you entrust this work to these bodies, that money should also be allotted to them. Similarly, secondary education. You cannot ask these bodies to run all these by raising taxes of their own. Similarly, the works of the P.W.D. The maintainance charges incurred by Government now in respect of tanks, roads etc. must be transferred to them. So, all the funds that are now spent by Government in respect of the works to be entrusted to these bodies must be transferred to them if Government wants that these bodies should thrive and do their duty properly so that our expectation that a strong, united Bharat will be created after ten years.

† ಶ್ರೀ ಎಂ. ಆರ್. ಪಟ್ಟಣಶೆಟ್ಟಿ (ಗುಳೇದಗುಡ್ಡ).–ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ಪಂಚಾಯಿತಿ ರಾಜ್ಯ ಮಸೂದೆಯನ್ನು ಈ ಸಭೆಯ ಮುಂದೆ ಸಂಬಂಧಪಟ್ಟ ಮಂತ್ರಿಗಳು ತಂದಿರುವುದರಿಂದ ಮೊದಲು ಅವರಿಗೆ ವಂದಿಸುತ್ತೇನೆ. ಈಗಾಗಲೇ ಈ ಮಸೂದೆಯ ವಿಷಯದಲ್ಲಿ ನನ್ನ

(ಶ್ರೀ ಎಂ. ಆರ್. ಪಟ್ಟಣಶೆಟ್ಟಿ)

ಸ್ನೇಹಿತರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಸಹ ಈಗ ಕೆಲವು ಮಾತುಗಳನ್ನು ಈ ಮಸೂದೆಯ ಬಗ್ಗೆ ಹೇಳಬಯಸುತ್ತೇನೆ. ಪಂಚಾಯತಿಗಳಿಗೂ ಮತ್ತು ತಾಲ್ಲೂಕು ಬೋರ್ಡುಗಳಿಗೂ ನೇರವಾದ ಸಂಬಂಧ ಇರಬೇಕೆಂದು ನಾನು ಹೇಳುತ್ತೇನೆ. ಇನ್ನು ಈ ಮಸೂದೆಯಲ್ಲಿ ಇನ್‌ಡೈರೆಕ್ಟ್ ಎಲೆಕ್ಷನ್ ಎಂದು ಇಟ್ಟಿದ್ದಾರೆ. ಇದು ಸರ್ವಥಾ ನ್ಯಾಯವಾದುದಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರನೇಕರೂ ಸಹ ಆ ರೀತಿಯಾಗಿಯೇ ಹೇಳಿದ್ದಾರೆ, ಏಕೆಂದರೆ ಇದರಿಂದ ಅಪ್ರತ್ಯಕ್ಷವಾದ ಚುನಾವಣೆಗಳು ಎಂದು ಏನಿವೆಯೋ ಅವು ನಮ್ಮೆಲ್ಲರ ಅನುಭವದಲ್ಲಿ ಬಂದಿರುವ ಹಾಗೆ ಅಂತಹ ಚುನಾವಣೆಗಳಲ್ಲಿ ಅನೇಕ ಪುಡಾರಿಗಳು ಮತ್ತು ಧನವಂತರುಗಳು ಸೇರಿಕೊಂಡು ಇಂತಹ ಚುನಾವಣೆಯಲ್ಲಿರತಕ್ಕ ವರ್ಚಸ್ಸನ್ನು ಕೆಡಿಸಿ ಅವರ ಒಂದು ಪ್ರಭಾವದಿಂದ ಅವರೇ ಆರಿಸಿಬರಬೇಕೆಂದು ಹೇಳುತ್ತಿರುವುದು ನಮಗೆಲ್ಲರಿಗೂ ಚೆನ್ನಾಗಿ ಕಂಡುಬಂದಿದೆ. ಈ ಒಂದು ದೃಷ್ಟಿಯಿಂದ ಇನ್‌ಡೈರೆಕ್ಟ್ ಸರ್ವಥಾ ಮಾಡಕೂಡದು ಎಂದು ನನ್ನ ಅಭಿಪ್ರಾಯ. ಇನ್ನು ತ್ರಿಟೈರ್ ಇರಬೇಕೋ, ಟು ಟೈರ್ ಇರಬೇಕೋ ಎಂಬ ಬಗ್ಗೆ ಅನೇಕರು ಸಮ್ಮಿಶ್ರ ಅಭಿಪ್ರಾಯಗಳನ್ನು ಇಲ್ಲಿ ಸೂಚಿಸಿದ್ದಾರೆ. ತ್ರಿ ಟೈರ್ ಇರಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಏಕೆಂದರೆ ಈಗ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳು ಎರಡೂ ಇರುವುದರಿಂದ ಏನಾದರೂ ಕಲಹಗಳು ತಾಲ್ಲೂಕು ಬೋರ್ಡಿನಲ್ಲಿ ಉದ್ಭವವಾದರೆ ಅಂಥಾದ್ದನ್ನು ತೀರಿಸಬೇಕಾದರೆ ಅವರು ಸರ್ಕಾರದ ಕಡೆಗೇ ಬರಬೇಕಾಗಿದೆ. ಇದು ಆಗಬಾರದು ಎಂಬುದೇ ನನ್ನ ಅಭಿಪ್ರಾಯ. ಈ ದೃಷ್ಟಿಯಿಂದಾದರೂ ಜಿಲ್ಲಾ ಪರಿಷತ್ತು ಇರಲೇಬೇಕು. ಇದಕ್ಕೆ ಬೇಕಾದಷ್ಟು ಪವರ್ಸ್ ಇರಬೇಕೆಂದು ನಾನು ಹೇಳುತ್ತೇನೆ. ತ್ರಿ ಟೈರ್ ಆಗುವುದರಿಂದ ಆಡಳಿತಕ್ಕೆ ಹೆಚ್ಚು ಸುಲಭ ಮಾಡಿಕೊಟ್ಟ ಹಾಗಾಗುತ್ತದೆಂದು ನನ್ನ ಅಭಿಪ್ರಾಯ.

1-30 P. M.

ಇನ್ನು ಆರ್ಥಿಕ ವಿಚಾರದಲ್ಲಿ ಹೇಳುವುದಾದರೆ ಇದು ಒಂದು ದೊಡ್ಡ ಪ್ರಶ್ನೆಯಾಗಿದೆ. ಈಗ ನಮ್ಮ ಲ್ಯಾಂಡ್ ರೆವಿನ್ಯೂ ಬೇರೆ ನಾಳೆ ರಿವಿಜನ್ ಆಗುತ್ತದೆ. ಈಗಿನ ಕಂದಾಯ ಮತ್ತು ರಿವಿಜನ್ ಆಗತಕ್ಕಂಥ ಕಂದಾಯ ಎರಡೂ ಸೇರಿದರೆ ಬಹಳ ಜಾಸ್ತಿ ಆಗುತ್ತದೆ. ಆ ಮೇಲೆ ಲ್ಯಾಂಡ್ ರೆವಿನ್ಯೂ ಮೇಲೆ 40 ಪರ್ಸೆಂಟ್ ಸೆಸ್ ಹಾಕತಕ್ಕಂಥ ಅಧಿಕಾರವನ್ನು ಬೇರೆ ಇವರಿಗೆ ಕೊಟ್ಟಿದೆ. ಇದೆಲ್ಲಾ ಸೇರಿದರೆ ಒಂದಕ್ಕೆ ಎರಡರಷ್ಟಾಗುತ್ತದೆ ಎನ್ನುವ ವಿಚಾರವನ್ನು ಎಲ್ಲರೂ ತಿಳಿದುಕೊಳ್ಳಬೇಕು. ಆವೊತ್ತು ಕಂದಾಯ ಒಬ್ಬ ರೈತನಿಗೆ ನಾಲ್ಕು ಪಟ್ಟು ಆಗುತ್ತದೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಈ ಪಂಚಾಯಿತಿಗಳ ವ್ಯವಸ್ಥೆಯಿಂದ ರೈತನಿಗೆ ಒಂದು ದೊಡ್ಡ ಹೊರೆ ಆಗುತ್ತದೆ, ಎಂದು ನನ್ನ ಅಭಿಪ್ರಾಯ. ಇದರಿಂದ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಸ್ವಲ್ಪ ಆತಂಕವುಂಟಾಗುತ ದೆ. ರೈತರ ಮೇಲೆ ವಿಶೇಷವಾಗಿ ಕರವನ್ನು ಹೇರಬಾರದು. ಕೆಲವು ಮಟ್ಟಿಗೆ ಕರವನ್ನು ಅವರ ಮೇಲೆ ಹೊರಿಸಿದರೂ ಕೂಡ ಅದನ್ನು ನೇರವಾಗಿ ಅವರಿಗೇ ಕೊಡತಕದ್ದು ಯೋಗ್ಯ ಇದೆ. ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ಆರ್ಥಿಕ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿರುವುದರಿಂದ ಅವುಗಳ ಆಡಳಿತ ಸುಗಮವಾಗಿ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ ಎನ್ನುವ ಅಭಿಪ್ರಾಯ ಕಂಡು ಬಂದಿದೆ. ಪಂಚಾಯಿತಿಗಳಿಗಾಗಲೀ, ತಾಲ್ಲೂಕು ಬೋರ್ಡುಗಳಿಗಾಗಲೀ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಟ್ಟರೆ ಅವು ಎಷ್ಟರಮಟ್ಟಿಗೆ ತಮ್ಮ ಕೆಲಸ ಕಾರ್ಯಗಳನ್ನು ಸುಲಲಿತವಾಗಿ ಸಾಗಿಸುತ್ತವೆ ಎನ್ನುವ ಅನುಭವ ನಮಗೆ ಇದೆ. ಈ ದೃಷ್ಟಿಯಿಂದ ಜನಗಳ ಮೇಲೆ ಕಂದಾಯವಾಗಲೀ, ಸೆಸ್ಸುಗಳಾಗಲೀ ಏರಿದರೂ ಕೂಡ ಅದು ನೇರವಾಗಿ ಪಂಚಾಯಿತಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಮುಟ್ಟಬೇಕು ಎಂದು ನನ್ನ ಅಭಿಪ್ರಾಯ.

ಇನ್ನೊಂದು ಏನೆಂದರೆ ಈ ಕಂದಾಯವನ್ನು ಹಾಕುವ ವಿಚಾರವೊಳಗೆ ಹೇಗೆ ಹಾಕಬಹುದು. ಜನಸಂಖ್ಯೆಯ ಆಧಾರದ ಮೇಲೆ ಕಂದಾಯವನ್ನು ಹಾಕಬಹುದೇ ಎನ್ನುವುದನ್ನು ವಿಚಾರ ಮಾಡಬೇಕು. ಜನಸಂಖ್ಯೆಯ ಆಧಾರದ ಮೇಲೆ ಕಂದಾಯವನ್ನು ಹಾಕುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಯಾವ ಪಂಚಾಯಿತಿಯಾಗಲೀ, ಯಾವ ತಾಲ್ಲೂಕು ಬೋರ್ಡ್ ಆಗಲೀ ಅಥವಾ ಜಿಲ್ಲಾ ಪರಿಷತ್ತಾಗಲೀ ಆಯಾ ಏರಿಯಾದಲ್ಲಿ ಜನತೆ ಎಷ್ಟು ತೆರಿಗೆಯನ್ನು ಕೊಡುತ್ತಾರೆಯೋ ಅದೆಲ್ಲವೂ ಅಲ್ಲಲ್ಲೇ ವಿನಿಯೋಗವಾದರೆ ಆದರಿಂದ ಹೆಚ್ಚು ಉಪಯೋಗವಾಗುತ್ತದೆ. ಈಗ ಹಳ್ಳಿಗಾಡಿನಲ್ಲಿ ಆಗಾಗ್ಯೆ ಬರಗಾಲ ಬರುತ್ತಿದೆ. ಅವರ ದೆಶೆಯಿಂದ ಅಲ್ಲಿ ರೈತರು ಕೊಡತಕ್ಕಂಥ ಕಂದಾಯ ಏನಿದೆಯೋ ಅದನ್ನು ನಾಳೆ ಸೂಟಿ ಬಿಡಿ

ಎಂದು ಸರ್ಕಾರದವರನ್ನು ಅವರು ಕೇಳಬಹುದು. ಈ ರೀತಿ ಮಾಡುವುದಾದರೆ ಅವರು ಕಂದಾಯವನ್ನು ಸೂಟಿ ಬಿಡಿ ಎಂದು ಕೇಳುವುದಕ್ಕೆ ಬರುವುದಿಲ್ಲ. ಆಯಾ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಆಯಾ ಪ್ರದೇಶದ ಕಂದಾಯವನ್ನು ಕೊಡುವುದಾದರೆ ಬರಗಾಲ ಬಿದ್ದಾಗ ಸರ್ಕಾರಕ್ಕೆ ಅಷ್ಟು ಹೆಚ್ಚು ತಲೆನೋವು ಬರುವುದಿಲ್ಲ. ಅದು ಏನಿದ್ದರೂ ತಾಲ್ಲೂಕು ಬೋರ್ಡು ಪಂಚಾಯಿತಿಗಳಿಗೆ ಬರುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಸಹ ಆಯಾಯ ಪಂಚಾಯಿತಿಯ ಮತ್ತು ತಾಲ್ಲೂಕು ಬೋರ್ಡಿನ ಏರಿಯಾದಲ್ಲಿ ಏನು ಕಂದಾಯ ಬರುತ್ತದೆಯೋ ಅದನ್ನೆಲ್ಲಾ ಅವರಿಗೇ ಕೊಡುವುದು ಯೋಗ್ಯ ಇದೆ.

ಇನ್ನ ಅನೇಕ ಜನ ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡುಗಳಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಶಾಸಕರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಈ ಎರಡು ಸಂಸ್ಥೆಗಳಲ್ಲಿಯೂ ಶಾಸಕರಿಗೆ ಪ್ರಾತಿನಿಧ್ಯ ಇರಬೇಕೆಂದು ನಾನು ಹೇಳುತ್ತೇನೆ. ಈಗ ತಾಲ್ಲೂಕು ಬೋರ್ಡಿಗೆ ಹೆಚ್ಚಿನ ಮಹತ್ವ ಇರುವುದರಿಂದ ತಾಲ್ಲೂಕಿನ ಅಭಿವೃದ್ಧಿ ಕಾರ್ಯದ ಚಟುವಟಿಕೆಗಳನ್ನು ಕಂಡುಹಿಡಿಯುವುದರಲ್ಲಿಯೇ ತಾಲ್ಲೂಕು ಬೋರ್ಡಿನವರು ಯಾವಾಗಲೂ ನಿರತರಾಗಿರುತ್ತಾರೆ. ಆದ್ದರಿಂದ ಒಂದು ಜಿಲ್ಲಾ ದೃಷ್ಟಿಯಿಂದ, ಒಂದು ಸ್ಟೇಟ್ ದೃಷ್ಟಿಯಿಂದ ಆಡಳಿತವನ್ನು ನಡೆಸಬೇಕಾದರೆ ಜಿಲ್ಲಾ ಪರಿಷತ್ತು ಇರಬೇಕು ಎಂದು ನನ್ನ ಅಭಿಪ್ರಾಯ ಈ ದೃಷ್ಟಿಯಿಂದ ಈಗ ಏನು 3 ಟೈರ್ಸ್ ಮಾಡಿದ್ದಾರೆಯೋ ಇದು ಇರಬೇಕು.

ಇನ್ನು ಈ ಸಂಸ್ಥೆಗಳಲ್ಲಿ ಹಣವನ್ನು ಕೊಡುವ ವಿಚಾರದಲ್ಲಿ 34 ಪರ್ಸೆಂಟ್ ಹಣವನ್ನು ಪಂಚಾಯಿತಿಗಳಿಗೂ 39 ಪರ್ಸೆಂಟ್ ಹಣವನ್ನು ತಾಲ್ಲೂಕು ಬೋರ್ಡುಗಳಿಗೂ, ಜಿಲ್ಲಾ ಪರಿಷತ್ತಿಗೆ 24 ಪರ್ಸೆಂಟ್ ಹಣವನ್ನು ಕೊಡಬೇಕೆಂತಲೂ ಹೇಳಿದ್ದಾರೆ. ಇದರಲ್ಲಿ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಎಂದು ನನ್ನ ಅಭಿಪ್ರಾಯ. ಆ ರೀತಿ ಪಂಚಾಯಿತಿಗಳಿಗೆ ಹೆಚ್ಚಿನ ಹಣವನ್ನು ಕೊಡುವುದಾದರೆ ಅದರಿಂದ ಜನತೆಗೆ ಹೆಚ್ಚಿನ ಉಪಯೋಗವಾಗುತ್ತದೆ. ತಾಲ್ಲೂಕು ಬೋರ್ಡಿಗೆ ಸ್ವಲ್ಪ ಕಡಿಮೆ ಮಾಡಿ ಪಂಚಾಯಿತಿಗೆ ಹೆಚ್ಚು ಹಣವನ್ನು ಕೊಡುವುದು ಅವಶ್ಯ ಇದೆ ಎಂದು ನಾನು ಹೇಳುತ್ತೇನೆ. ನಮ್ಮ ನೆರೆಯ ಸಂಸ್ಥಾನದಲ್ಲಿ ಯಾವ ಪಂಚಾಯಿತಿಯು ಉತ್ತಮವಾದ ಕೆಲಸವನ್ನ ಮಾಡುತ್ತದೆಯೋ ಅಂಥಾ ಪಂಚಾಯಿತಿಗಳಿಗೆ ಬಹುಮಾನವನ್ನು ಕೊಡುವ ಪದ್ಧತಿ ಇದೆಯೆಂದು ನಾನು ಕೇಳಿದ್ದೇನೆ. ಈ ದೃಷ್ಟಿಯಿಂದ ನಮ್ಮ ಸಂಸ್ಥಾನದಲ್ಲಿಯೂ ಕೂಡ ಯಾವ ಯಾವ ಪಂಚಾಯಿ ಗಳು ಉತ್ತಮವಾದ ಕೆಲಸವನ್ನು ಮಾಡುತ್ತವೆಯೋ ಅಂಥಾ ಪಂಚಾಯಿತಿಗಳಿಗೆ ಸರ್ಕಾರದವರು ಬಹುಮಾನವನ್ನು ಕೊಟ್ಟರೆ ಈ ದೃಷ್ಟಿಯಿಂದ ಅವರು ಹೆಚ್ಚು ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ವಿಚಾರವನ್ನು ಸರ್ಕಾರದವರು ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಈ ಮಸೂದೆ ಪಾಸ್ ಆದಮೇಲೆ ಈ ಕಾನೂನು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಲ್ಲಿ ಇದನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಹಾಗೆ ಮಾಡದೆ ಈ ಮಸೂದೆಯನ್ನು ಒಂದೇ ಕಾಲಕ್ಕೆ ಒಂದೇ ದಿನ ಇಡೀ ದೇಶದಲ್ಲೆಲ್ಲಾ ಜಾರಿಗೆ ತರುವುದು ಸೂಕ್ತ ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಪಂಚಾಯಿತಿಗಳಲ್ಲಿ ಅನೇಕ ಪಂಚಾಯಿತಿಗಳಲ್ಲಿ 3-4 ಪಂಚಾಯಿತಿಗಳಿಗೆ ಒಬ್ಬ ಸೆಕ್ರೆಟರಿಯನ್ನು ನೇಮಕ ಮಾಡಿ ಅಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ 3-4 ಪಂಚಾಯಿತಿಗಳಿಗೆ ಒಬ್ಬರು ಕಾರ್ಯದರ್ಶಿ ಇದ್ದರೆ ಅದು ಅಷ್ಟು ಚೆನ್ನಾಗಿರುವುದಿಲ್ಲ. ಈ ದೃಷ್ಟಿಯಿಂದ ಇನ್ನು ಮುಂದೆ ಮಾತ್ರ ಪ್ರತಿಯೊಂದು ಪಂಚಾಯಿತಿಗೂ ಒಬ್ಬೊಬ್ಬ ಕಾರ್ಯದರ್ಶಿ ಇದ್ದರೆ ಅವರು ಅದರ ಆಡಳಿತವನ್ನು ಸುಲಲಿತವಾಗಿ ಅನುಕೂಲವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ (ಷಹಪುರ).—ಸ್ವಾಮಿ ಅಧ್ಯಕ್ಷರೇ, ಈ ದಿನ ಈ ನಮ್ಮ ಬೃಹತ್ ಭವನದಲ್ಲಿ ಮಾನ್ಯ ಮಂತ್ರಿಗಳು ತಂದಿರತಕ್ಕಂಥ ಮೈಸೂರು ರಾಜ್ಯದ ಪಂಚಾಯಿತಿ ರಾಜ್ಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ಇದರಲ್ಲಿರತಕ್ಕ ಕೆಲವು ಒಳ್ಳೆಯ ಉದ್ದೇಶಗಳಿಗಾಗಿ ಸ್ವಾಗತಿಸುತ್ತಾ ಇದರಲ್ಲಿ ಅಳವಡಿಸಿರತಕ್ಕಂಥ ಕೆಲವು ಅನಾಗರಿಕ ವಿಷಯಗಳಿಗಾಗಿ ನಾನು ವಿರೋಧ ಮಾಡುತ್ತಾ ಈ ವಿಧೇಯಕದ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ಈ ಸರ್ವತಂತ್ರ ಸ್ವಾತಂತ್ರ್ಯ ಪ್ರಜಾರಾಜ್ಯದಲ್ಲಿ ನಮ್ಮ ಮಾನ್ಯ ಮಂತ್ರಿಗಳು ಈ ಬೃಹತ್ ವಿಧೇಯಕವನ್ನು ತಂದಿರುವುದು ಸ್ತುತ್ಯಾರ್ಹವಾದದ್ದು. ಇದರಲ್ಲಿ ಪಂಚಾಯಿತಿ ರಾಜ್ಯದಲ್ಲಿ ಗ್ರಾಮಪಂಚಾಯಿತಿಯದು ಇಷ್ಟರವರೆಗೂ ನಡೆಸಿಕೊಂಡು ಬಂದಿರತಕ್ಕ ಅನುಭವಗಳನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದರೆ ವಿಹಂಗಮ ದೃಷ್ಟಿಯಿಂದ ಇದು ನಡೆಸಿಕೊಂಡು ಬಂದಿರತಕ್ಕ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಈಗ ತಂದಿರತಕ್ಕಂಥ ಮಸೂದೆಯಲ್ಲಿರತಕ್ಕ ಕೆಲವು ಉತ್ತಮವಾದ ವಿಚಾರಗಳನ್ನು ನಾವು ತತ್ವಶಃ ಸ್ವಾಗತಿಸಬೇಕಾಗಿದೆ.

(ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ)

ಸ್ವಾಮಿ, ಸರ್ಕಾರದವರು ಈ ಸಭೆಯ ಮುಂದೆ ತಂದಿರತಕ್ಕಂಥ ಪಂಚಾಯಿತಿ ರಾಜ್ಯಕ್ಕೆ ಸಂಬಂಧಪಟ್ಟಂಥ ಕರಡು ಮಸೂದೆಯಲ್ಲಿ ಮೊಟ್ಟಮೊದಲು ಚಾಪ್ಟರ್ (2) ಕಲಮು (3)ರಲ್ಲಿ ಡಿಕ್ಲರೇಷನ್ ಆಫ್ ವಿಲೇಜ್ ಎಂದು ಹೇಳಿದ್ದಾರೆ, ಇದನ್ನು ನಾವು ಸ್ವಲ್ಪ ವಿಚಾರಮಾಡಬೇಕಾಗಿದೆ.

ನಾವು ಸ್ವರಾಜ್ಯ ಸಂಪಾದಿಸಿ ಎಷ್ಟೋ ವರ್ಷಗಳಾದುವು. ಆ ಮೇಲೆ ನಮ್ಮ ಕರ್ಣಾಟಕ ಭಾಷೆ ರಾಜಭಾಷೆ ಎಂದು ತಿಳಿದು ನಾಮಕರಣ ಮಾಡಿದೆವು. ಇಷ್ಟಾದರೂ ಕೂಡ, ಜನರ ನಡೆ ನುಡಿ ನಮ್ಮ ಕರ್ಣಾಟಕ ಭಾಷೆ. ಕನ್ನಡ ಭಾಷೆ ಎನ್ನುವುದನ್ನು ನಾವು ಬಹಳ ಹುರುಪಿನಿಂದ ಹೇಳುತ್ತಿರುವಾಗ ಇದರಲ್ಲಿ ಡಿಕ್ಲರೇಷನ್ ಆಫ್ ವಿಲೇಜಸ್ ಎನ್ನುವುದು ಸ್ವಲ್ಪ ಅಪ್ರಾಸಂಗಿಕ. ಅದನ್ನು ವಿರೋಧಿಸುತ್ತೇನೆ. ಚಾಪ್ಟರ್ 2, ಕಲಂ 3ರಲ್ಲಿ ಡಿಕ್ಲರೇಷನ್ ಆಫ್ ವಿಲೇಜ್ ಎಂದು ಇರುವುದನ್ನು ಡಿಕ್ಲರೇಷನ್ ಆಫ್ ಗ್ರಾಮ ಎಂದು ಹೇಳುವುದು ವಿಹಿತವೆಂದು ನನ್ನ ಸಲಹೆ.

ವಿಲೇಜ್ ಪಂಚಾಯಿತಿ ಎನ್ನುವುದಕ್ಕೆ ಪಂಚಾಯಿತಿ ಎಂದು ನಾಮಕರಣ ಕೊಟ್ಟು 1,500 ಕ್ಕಿಂತ ಹೆಚ್ಚು ಇದ್ದು 5 ಸಾವಿರದವರೆಗೂ ಜನಸಂಖ್ಯೆ ಬರತಕ್ಕವುಗಳನ್ನು ಇದರಲ್ಲಿ ಸೇರಿಸಬೇಕು. 200, 300, 400 ಹೀಗೆ ಜನಸಂಖ್ಯೆ ಇರತಕ್ಕ ಮೂರು ನಾಲ್ಕು ಹಳ್ಳಿಗಳನ್ನು ಕೂಡಿ ಗ್ರೂಪ್ ಪಂಚಾಯಿತಿ ಎಂದು ಕರೆಯುವುದಕ್ಕೆ ಬದಲಾಗಿ ಗ್ರಾಮ ಪಂಚಾಯಿತಿ ಎಂದು ಕರೆಯುವುದು ವಿಹಿತವೆಂದು ನನ್ನ ಭಾವನೆ.

ಇನ್ನು ತಾಲ್ಲೂಕು ಬೋರ್ಡ್‌ಗಳ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಆರನೆ ಚಾಪ್ಟರ್‌ನಲ್ಲಿ ತಾಲ್ಲೂಕು ಬೋರ್ಡುಗಳ ವಿಷಯ ಹೇಳಿದ್ದಾರೆ? ನಮ್ಮ ಭಾಷೆ ಕನ್ನಡವಾಗಿದ್ದರೂ, ನಾವು ಕರ್ಣಾಟಕದಲ್ಲಿ ವಾಸವಾಗಿದ್ದರೂ ಜಿಲ್ಲಾ ಪರಿಷತ್ತು ಎಂದು ಜಿಲ್ಲಾ ಮಂಡಳಿಗೆ ಹೆಸರನ್ನು ಕೊಟ್ಟವರು ಅದೇ ದೃಷ್ಟಿಯಿಂದ ತಾಲ್ಲೂಕಿನಲ್ಲಿ ತಾಲ್ಲೂಕು ಬೋರ್ಡ್ ಎನ್ನುವುದರ ಬದಲು ತಾಲ್ಲೂಕು ಅಭಿವೃದ್ಧಿ ಮಂಡಳಿ ಎನ್ನುವ ನಾಮಕರಣವನ್ನು ಸರ್ಕಾರದವರು ಈ ಆಕ್ಟ್‌ನಲ್ಲಿ ಮಾಡಬೇಕು ಎಂದು ನನ್ನ ಸದಿಚ್ಛೆಯ ಸಲಹೆ. ಈ ವಿಧೇಯಕದಲ್ಲಿ ತಾಲ್ಲೂಕು ಬೋರ್ಡ್ ಎನ್ನುವುದನ್ನು ಸಾವಿರಾರು ಸಲ ನೋಡಬಹುದು. ತಾಲ್ಲೂಕು ಬೋರ್ಡ್ ಎನ್ನುವುದಕ್ಕೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಎಂದು ಕರೆಯುವುದರಲ್ಲಿ ಏನು ತೊಂದರೆ ಇದೆ? ತಾಲ್ಲೂಕು ಅಭಿವೃದ್ಧಿ ಮಂಡಳಿ ಎನ್ನುವುದು ವಿಹಿತವಾದುದು. ಹಾಗೆ ಈ ಕಾನೂನಿನಲ್ಲಿ ಸೇರಿಸಬೇಕೆಂದು ನನ್ನ ಸದಿಚ್ಛೆಯ ಸಲಹೆ.

ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಆಯ್ಕೆ ಮಾಡುವಾಗ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಚುನಾವಣೆಗಳನ್ನು ಸೂಚಿಸುತ್ತಿದ್ದೀರಿ. 21 ಸದಸ್ಯ ಬಲವಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ 11 ಸ್ಥಾನಗಳಿಗೆ ನೇರವಾಗಿ ಮತ್ತು 9 ಸ್ಥಾನಗಳಿಗೆ ಅಪ್ರತ್ಯಕ್ಷವಾಗಿ ಆಯ್ಕೆಯಾಗಬೇಕೆಂದಿರುತ್ತದೆ. ಹೀಗಿರುವುದರಿಂದ ಮಹಾ ದುರ್ವ್ಯವಹಾರಗಳನ್ನು ಮಹಾ ದುರ್ನೀತಿಗಳನ್ನು ಎಲ್ಲರೂ ಮನಗಂಡಿದ್ದೇವೆ. ಇದು ಎಲ್ಲರ ಅನುಭವದ ಮಾತಾಗಿದೆ. ಅಪ್ರತ್ಯಕ್ಷ ಚುನಾವಣೆಗಳಿಗೆ ನಮ್ಮ ಸ್ವತಂತ್ರ ಭಾರತದಲ್ಲಿ ಅವಕಾಶ ಇರಬಾರದು. ಆದುದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಪ್ರತ್ಯಕ್ಷ ಚುನಾವಣೆಗಳನ್ನು ನಡೆಸುವಂತೆ ಮಾಡಬೇಕು ಎಂದು ನನ್ನ ಸಲಹೆ ಇದೆ.

ಜಿಲ್ಲಾ ಪರಿಷತ್ತಿನೊಳಗೆ ಕೂಡ ಒಂದು ವಿಹಂಗಮ ದೃಷ್ಟಿಯಿಂದ ನೋಡುವುದಾದರೆ ಪ್ರತ್ಯಕ್ಷ ಚುನಾವಣೆಗಳಿಗೆ ಇದರಲ್ಲಿ ಒಂದು ಸ್ಥಾನವನ್ನು ಕೊಟ್ಟಿದ್ದೀರಿ. ಒಂದು ತಾಲ್ಲೂಕಿನಲ್ಲಿ 25 ಸಾವಿರದಿಂದ 50 ಸಾವಿರ ಪ್ರಜಾಸಂಖ್ಯೆಯವರೆಗೂ ಒಂದು ಸ್ಥಾನ ಎಂದು ಇದರಲ್ಲಿದೆ, ಒಂದು ತಾಲ್ಲೂಕಿನಲ್ಲಿ ಒಂದೂವರೆ ಲಕ್ಷ ಪ್ರಜಾಸಂಖ್ಯೆ ಇದ್ದರೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರು ತಮ್ಮ ಮನಸ್ಸಿಗೆ ಬಂದಂತೆ ಮೂರು ಸ್ಥಾನ ಮಾಡಬಹುದು ಅಥವಾ ಆರು ಸ್ಥಾನಗಳನ್ನಾದರೂ ಮಾಡಬಹುದು. ಅವರಿಗೆ ಮನಬಂದಂತೆ ನಡೆಯತಕ್ಕ ಅವಕಾಶ ಇದರಲ್ಲಿದೆ. ಒಂದು ತಾಲ್ಲೂಕಿಗೆ ಎರಡು ಸ್ಥಾನಗಳನ್ನು ಕೊಡುವುದು ಉತ್ತಮವಾಗಿ ಕಾಣುತ್ತದೆ. ಒಂದು ತಾಲ್ಲೂಕಿಗೆ ಮೂರು ಸ್ಥಾನಗಳನ್ನು ಕೊಟ್ಟರೆ 10 ತಾಲ್ಲೂಕುಗಳಿಂದ 30 ಜನರೂ, ಅಸೆಂಬ್ಲಿ, ಕೌನ್ಸಿಲ್ ಮತ್ತು ಪಾರ್ಲಿಮೆಂಟ್ ಸದಸ್ಯರೂ ಸೇರಿ ಬಹಳ ಜನಗಳಾಗಿ ಒಂದು ಚಿಕ್ಕ ಅಸೆಂಬ್ಲಿ ಆಗುತ್ತದೆ. ಆದ್ದರಿಂದ ಒಂದು ತಾಲ್ಲೂಕಿಗೆ ಒಂದೆರಡು ಸ್ಥಾನಗಳನ್ನು ಕೊಡುವಂತೆ ಈ ಕರಡಿನಲ್ಲಿ ಸೇರಿಸಬೇಕೆಂದು ನನ್ನ ಸಲಹೆ ಇದೆ.

ಗೌರವ ಧನದ ಬಗ್ಗೆ ಸ್ವಲ್ಪ ವಿಚಾರಿಸಬೇಕೆಂದು ನನ್ನ ಕೋರಿಕೆ ಇದೆ.

ನ್ಯಾಯ ಪಂಚಾಯಿತಿಗಳ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಇದು ನಮ್ಮ ಭಾರತದ ಜನಕ್ಕೂ, ಭಾರತದ ನಾಗರಿಕರಿಗೂ 50 ವರ್ಷಗಳ ಮೇಲೆ ಬಂದರೆ ಒಳಿತು ಎಂದು ನನ್ನ ಭಾವನೆ. ಹಳ್ಳಿಯ ಜನರಲ್ಲಿ ನೂರಕ್ಕೆ 99 ಜನರು ಶಿಕ್ಷಣವಂತರಾದಮೇಲೆ ಇದು ಬಂದರೆ ಯೋಗ್ಯ, ಇಲ್ಲವಾದರೆ ಈ ನ್ಯಾಯ ಪಂಚಾಯಿತಿಗಳಿಂದ ಹಳ್ಳಿಗಳಿಗೆ ಅನೀತಿ, ಅಧರ್ಮ ಅನ್ಯಾಯಗಳೆಲ್ಲವೂ ಅಂಟಿಕೊಂಡು

ಇದು ಪಂಡಾರಿಗಳ ರಾಜ್ಯವಾದೀತು. ಇದಕ್ಕೆ ಆಸ್ಪದ ಕೊಡದಂತೆ ಈ ಬಿಲ್‌ನಲ್ಲಿ ನ್ಯಾಯ ಪಂಚಾಯಿತಿಗಳನ್ನು ತೆಗೆದು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಹಣಕಾಸಿನ ಬಗ್ಗೆ ಹೇಳಬೇಕಾದರೆ ಮಾನ್ಯ ಶ್ರೀ ಜಿ. ರಾಮೇಗೌಡರು ಸಲಹೆ ಕೊಡುತ್ತ ಜನಸಂಖ್ಯೆಯ ಪ್ರಮಾಣದಿಂದ ಅಳೆದು ದೇಶದಲ್ಲಿರುವ ಎಲ್ಲ ಗ್ರಾಮ ಪಂಚಾಯಿತಿಗಳಿಗೂ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೂ, ಜಿಲ್ಲಾ ಪರಿಷತ್ತುಗಳಿಗೂ ಹಣವನ್ನು ಹಂಚಬಾರದು, ಆಯಾ ತಾಲ್ಲೂಕಿನಲ್ಲಿ ಎಷ್ಟು ಭೂಕಂದಾಯ ಸರ್ಕಾರಕ್ಕೆ ಕೊಡುತ್ತಾರೆಯೋ ಅದಷ್ಟನ್ನೂ ಈ ಸಂಸ್ಥೆಗಳಿಗೆ ಕೊಡಬೇಕು. ಈ ದೃಷ್ಟಿಯಿಂದ ನಮ್ಮ ಈ ಪಂಚಾಯಿತಿ ರಾಜ್ಯದ ಬಿಲ್ ಏನಿದೆ ಅದು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋಗಿ ಉತ್ತಮವಾಗಿ ಪರಿಶೀಲನೆಯಾಗಿ ಜನರ ಏಳಿಗೆ ಮತ್ತು ಕಲ್ಯಾಣವಾಗುವಂತೆ ಬರಲಿ ಎಂದು ಹಾರೈಸಿ ನನಗೆ ಒಂದೆರಡು ಮಾತನಾಡಲು ಅವಕಾಶ ಕೊಟ್ಟದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, **ನಮ್ಮ** ಮುಂದಿರುವ ಮೈಸೂರು ಪಂಚಾಯಿತಿ ರಾಜ್ಯ ವಿಧೇಯಕವನ್ನು ಅನುಮೋದಿಸುತ್ತೇನೆ. ಇದರ ವಿಚಾರವಾಗಿ ಮಾತನಾಡುತ್ತ ಶ್ರೀಮಾನ್ ಶಿವಪ್ಪನವರು ಈ ವಿಧೇಯಕವನ್ನು ಅವಸರವಾಗಿ ತಂದಿದ್ದಾರೆಂದು ಹೇಳಿದರು. ಮುನ್ನೂರು ಪುಟಗಳಿರುವ ಈ ವಿಧೇಯಕವನ್ನು ದೈಹಿಕ ಮತ್ತು ಮಾನಸಿಕ ಶ್ರಮಪಟ್ಟು ಇಷ್ಟು ಜಾಗ್ರತೆ ಸಿದ್ಧ ಮಾಡಿದುದಕ್ಕಾಗಿ ಸರಕಾರವನ್ನು ಅಭಿನಂದಿಸಬೇಕಾಗುತ್ತದೆ. ಈ ಮಸೂದೆಯಲ್ಲಿ ಪ್ರೈಮರಿ ವಿದ್ಯಾಭ್ಯಾಸ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಜಿಲ್ಲಾ ಪರಿಷತ್ತಿಗೆ ವಹಿಸಬೇಕೆಂದಿದೆ. ಈ ಶಾಲೆಗಳಲ್ಲಿ ಹೆಚ್ಚುಮಂದಿ ಹೆಣ್ಣುಮಕ್ಕಳು ಉಪಾಧ್ಯಾಯಿನಿಯರಾಗಿದ್ದಾರೆ. ಅವರ ಸಂಬಳ ಮತ್ತು ಬಡ್ತಿಗಳನ್ನು ನಿಗದಿ ಮಾಡುವ ಅಧಿಕಾರ ಮತ್ತು ಅವರನ್ನು ವರ್ಗಮಾಡುವ ಅಧಿಕಾರ, ಗ್ರಾಮ ಸೇವಿಕೆಯರಾಗಿ ಕೆಲಸ ಮಾಡುವ ಹೆಣ್ಣುಮಕ್ಕಳ ಮೇಲಿನ ಅಧಿಕಾರ ಇವೆಲ್ಲವೂ ಹೆಣ್ಣುಮಕ್ಕಳ ಕೈಲೇ ಇರಬೇಕೆಂದು ನನ್ನ ಸಲಹೆ. ಮದರಾಸಿನಲ್ಲಿ ಮಹಿಳೆಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿ ಅದಕ್ಕೆ ಮುಖ್ಯಾಧಿಕಾರಿಯಾಗಿ ಒಬ್ಬರು ಮಹಿಳಾ ಐ.ಎ.ಎಸ್. ಅಧಿಕಾರಿ ಇದ್ದಾರೆ. ಅವರ ಕೈಕೆಳಗೆ ಬೇರೆ ಅಧಿಕಾರಿಗಳೂ ಇದ್ದಾರೆ. ಹಾಗೆಯೇ ಇಲ್ಲಿಯೂ ಮಾಡಿ ಆ ಇಲಾಖೆಗೆ ಈ ಅಧಿಕಾರವನ್ನು ವಹಿಸಬೇಕೆಂದು ನನ್ನ ಸಲಹೆ. ಏಕೆಂದರೆ ಈಗಿರುವ ವ್ಯವಸ್ಥೆಯಲ್ಲಿ ಉಪಾಧ್ಯಾಯಿಣಿಯರು ತಮ್ಮ ಸಂಬಳಸಾರಿಗೆ, ವರ್ಗ ಇವುಗಳ ಬಗ್ಗೆ ತಿರುಗಬೇಕಾಗಿದೆ, ಅವರ ಕಷ್ಟವನ್ನು ನೋಡಿ ನಾನು ಈ ಸಲಹೆಯನ್ನು ಮಾಡುತ್ತಿದ್ದೇನೆ, ಇದನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮೂರು ಹಂತಗಳಲ್ಲಿಯೂ ನೇರವಾದ ಚುನಾವಣೆ ನಡೆಯುವುದು ಉತ್ತಮ. ಹೆಣ್ಣುಮಕ್ಕಳೆಂದರೆ ನಮ್ಮ ದೇಶದಲ್ಲಿ ಅಪಾರ ಅಭಿಮಾನವಿದೆ. ಅವರಿಗಾಗಿ ಎರಡು ಸ್ಥಾನಗಳನ್ನಿಟ್ಟಿದ್ದಾರೆ; ಇದಕ್ಕಾಗಿ ಸರಕಾರವನ್ನು ಅಭಿನಂದಿಸಬೇಕಾಗಿದೆ. ಶಾಸನಸಭಾ ಸದಸ್ಯರಿಗೆ ಅವಕಾಶವಿಲ್ಲ, ಅವರಿಗೆ ಕೊಟ್ಟರೆ ಬೇರೆಯವರಿಗೆ ಸಿಕ್ಕುವುದಿಲ್ಲವೆಂಬ ಅನುಮಾನವಿದೆಯೆಂದು ಕಾಣುತ್ತದೆ. ಅದಕ್ಕೆ ಆಧಾರವಿಲ್ಲ. ಆದುದರಿಂದ ಆಯಾ ಸ್ಥಳಗಳ ಜನರ ಕಷ್ಟಸುಖಗಳನ್ನು ತಿಳಿದುಕೊಂಡು ಅವರಿಗೆ ಸಹಾಯ ಮಾಡುವುದಕ್ಕೆ ಅವಕಾಶವಾಗುವಂತೆ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳಿಗೆ ಸ್ಥಾನಗಳಿರಬೇಕಲ್ಲದೆ ಅವರಿಗೆ ಓಟಿಂಗ್ ಅಧಿಕಾರವೂ ಇರಬೇಕು.

ನ್ಯಾಯ ಪಂಚಾಯಿತಿ ವಿಚಾರವನ್ನು ಅನೇಕರು ಮಾತನಾಡಿದ್ದಾರೆ. ಬಹು ಹಿಂದಿನ ಕಾಲದಿಂದಲೂ ಹಳ್ಳಿಗಳಲ್ಲಿ ಮುಖಂಡರು ಸೇರಿ ತಮ್ಮ ತಮ್ಮ ಹಳ್ಳಿಯ ನ್ಯಾಯಗಳನ್ನು ತೀರ್ಮಾನ ಮಾಡಿಕೊಳ್ಳುತ್ತಿದ್ದರು. ಈ ಮಸೂದೆಯಲ್ಲಿ ಮೂರು ನಾಲ್ಕು ಪಂಚಾಯಿತಿಗಳನ್ನು ಸೇರಿಸಿ ಒಂದು ನ್ಯಾಯ ಪಂಚಾಯಿತಿ ಮಾಡಬಹುದೆಂದಿದೆ. ಆದರೆ ವರದಿಯಲ್ಲಿ ಒಂದೊಂದು ಪಂಚಾಯಿತಿಗೆ ಒಂದೊಂದು ನ್ಯಾಯ ಪಂಚಾಯಿತಿ ಇರಬೇಕೆಂದಿದೆ. ಪಂಚಾಯಿತರಿಗೇನೂ ಪ್ರಯಾಣ ಭತ್ಯ ಮತ್ತು ದಿನಭತ್ಯ ಕೊಡುವುದಿಲ್ಲ. ಹಳ್ಳಿಗಳಲ್ಲಿ ಕೋರ್ಟುಗಳಿರುವುದಿಲ್ಲ. ಆದರೂ ಇದನ್ನು ಸದ್ಯಕ್ಕೆ ಕೈಬಿಡುವುದು ಒಳ್ಳೆಯದು.

ಪಂಚಾಯಿತಿಗಳಿಗೆ ವಾರ್ಷಿಕ ವರಮಾನವಿರುತ್ತದೆ, ಅದರ ಮೇಲೆ ಸ್ಥಳೀಯ ಖಾಸಗಿ ಹೈಸ್ಕೂಲುಗಳಿಗೆ ಗ್ರಾಂಟು ಕೊಡುವುದಕ್ಕೆ, ಧನ ಸಹಾಯ ಕೊಡುವುದಕ್ಕೆ ಅಧಿಕಾರವಿರಬೇಕು. ತಾಲ್ಲೂಕು ಬೋರ್ಡು ಬರೀ ಒಂದು ಪೋಸ್ಟ್ ಆಫೀಸು ಇದ್ದ ಹಾಗಿದೆ. ಇದಕ್ಕೆ ಅಧಿಕಾರ ಕೊಡುವುದು ಒಳ್ಳೆಯದು. ಹೀಗಿಲ್ಲದಿದ್ದರೆ ಅಲ್ಲಿರತಕ್ಕ ಎಕ್ಸ್‌ಟೆನ್‌ಷನ್ ಅಧಿಕಾರಿಗಳು ಅವರಿಗೆ ಸಹಕಾರವನ್ನು ಕೊಡುವುದಿಲ್ಲ. ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೂ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೂ ಸಂಭಾವನೆ ಇದೆ ಆದರೆ ಪಂಚಾಯಿತಿ ಅಧ್ಯಕ್ಷರಿಗೆ ಸಂಭಾವನೆ ಕೊಡುವುದಿಲ್ಲ. ಇವರಿಗೇಕೆ ಕೊಡುವುದಿಲ್ಲ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅವರಿಗೆ ಹತ್ತು ಸಾವಿರ ರೂಪಾಯಿವರೆಗೆ ಖರ್ಚು ಮಾಡುವುದಕ್ಕೆ ಅಧಿಕಾರವಿದೆ, ಅದರಲ್ಲೇ ಮಾಡಿಕೊಳ್ಳಬೇಕು. (ನಗು)

ಶ್ರೀಮತಿ ರತ್ನಮ್ಮ ಮಾಧವರಾವ್.—ಸೆಸ್ ವಿಧಿಸುವುದಕ್ಕೆ ಅವಕಾಶವಿದೆ, ಆದರೆ ಹೊಸ ಸೆಸ್ ಯಾವುದನ್ನೂ ಹಾಕಬಾರದೆಂದು ನನ್ನ ಸಲಹೆ.

ಈ ಕಾನೂನು ಜಾರಿಗೆ ಬರಬೇಕಾದರೆ ಐದು ಕೋಟಿ ರೂಪಾಯಿ ಬೇಕಾಗುವುದೆಂದು ಈ ಮಸೂದೆಯ ಕೊನೆಯಲ್ಲಿ ತಿಳಿಸಿದೆ. ಈ ಹಣವನ್ನು ಎಲ್ಲಿಂದ ತರುವುದು ಎಂಬುದನ್ನು ನಮೂದು ಮಾಡಿಲ್ಲ. ಶಾಸನ ಸಭಾಸದಸ್ಯರೂ ಮಂತ್ರಿಗಳೂ ತಮಗೆ ಬರುವ ಸಂಭಾವನೆಯನ್ನು ಬಿಟ್ಟು ಕೊಟ್ಟರೂ ಕೂಡ ಐದು ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಹೇಗೆ ಒದಗಿಸುವುದು ? ತಜ್ಞರು ಸೇರಿ ಇದನ್ನು ಕೂಲಂಕಷವಾಗಿ ಆಲೋಚನೆ ಮಾಡಿ ಇದನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೇನು ಮಾಡಬೇಕೆಂಬ ಬಗ್ಗೆ ಸಲಹೆ ಮಾಡಬೇಕು. ಇದು ಮೂರು ಚಕ್ರದ ಗಾಡಿ ತಾರು ರಸ್ತೆಯಲ್ಲಿ ಓಡಾಡುತ್ತಿರುವ ಹಾಗಿದೆ ಎಂದು ಒಬ್ಬರು ಸದಸ್ಯರು ಟೀಕೆ ಮಾಡಿದರು. ಎಷ್ಟೇ ಚಕ್ರವಾದರೂ ರಥವನ್ನು ನಡೆಸುವ ಸಾರಥಿ ಸರಿಯಾಗಿದ್ದರೆ ರಥ ಸರಿಯಾಗಿ ಓಡುತ್ತದೆ, ಉರುಳುವುದಿಲ್ಲ. ಈ ಮಸೂದೆಯನ್ನು ನಾನು ಓದಿದಾಗ, ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿ, ಈ ಮೂರು ಸಂಸ್ಥೆಗಳೂ ಸ್ಥಾಪನೆಯಾದ ಮೇಲೆ ಸರಕಾರದ ಎಲ್ಲ ಕೆಲಸಕಾರ್ಯಗಳೂ ಇವಕ್ಕೆ ಸೇರುತ್ತವೆ, ಇನ್ನುಳಿಯುವುದು ಪೋಲೀಸ್ ಇಲಾಖೆ ಒಂದೇ, ಶ್ರೀಮಾನ್ ಆರ್. ಎಂ. ಪಾಟೀಲರೊಬ್ಬರೇ ಉಳಿಯುತ್ತಾರೆ, ಹಾಗಾದರೆ ಸರಕಾರಕ್ಕೆ ಕೆಲಸ ಮತ್ತು ಅಧಿಕಾರ ಏನು ಉಳಿಯುತ್ತದೆ ಎಂಬ ಭಾವನೆ ಬಂತು. ಅಧ್ಯಕ್ಷರುಗಳಿಗೆ ಐನೂರು ರೂಪಾಯಿನಂತೆ ಸಂಬಳ ಬೇರೆ ಕೊಡಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಮಳೆಬೆಳೆಗಳು ಸರಿಯಾಗಿಲ್ಲದೆ ಇರುವಾಗ, ಆಹಾರ ಕೊರತೆ ದೇಶದಲ್ಲಿರುವಾಗ, ಮೂರು ಚಕ್ರಗಳು ಬೇಡ, ತಾಲ್ಲೂಕು ಬೋರ್ಡಿಗೇ ಹೆಚ್ಚು ಅಧಿಕಾರ ಕೊಟ್ಟರೆ ಸಾಕು, ಇದೇ ಒಳ್ಳೆಯದು ಎನಿಸುತ್ತದೆ. ತಜ್ಞರು ಇದನ್ನು ಆಲೋಚನೆ ಮಾಡಬೇಕು. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳು.

†ಶ್ರೀ ಜಿ. ಎನ್. ದೇಸಾಯಿ (ಹಾನಗಲ್).—ಸನ್ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿ ಹಳ್ಳಿಗರ ಕೈಲಿ ಹೆಚ್ಚಿನ ಅಧಿಕಾರ ಹೋದಲ್ಲಿ ಸ್ಥಳೀಯ ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಯುತ್ತವೆ, ಅದರಿಂದ ಹಳ್ಳಿಗಳ ಅಭಿವೃದ್ಧಿ ಯೋಗ್ಯರೀತಿ ಆಗುತ್ತದೆ. ಕೇವಲ ಹಳ್ಳಿಗಳಿಂದ ಕೂಡಿದ ರಾಷ್ಟ್ರ ನಮ್ಮದು. ಇಲ್ಲಿ ಶೇಕಡ 80 ರಷ್ಟು ಜನರು ಹಳ್ಳಿಗಳಲ್ಲಿರುತ್ತಾರೆ. ಈ ಕಾರಣ ಹಳ್ಳಿಗಳ ಅಭಿವೃದ್ಧಿ ಮೊದಲು ಆಗುವುದು ಅವಶ್ಯಕ. ಇದನ್ನು ನಮ್ಮ ಮುಖಂಡರು ಮೇಲಿಂದ ಮೇಲೆ ಹೇಳುತ್ತ ಬಂದಿದ್ದಾರೆ. ಹಳ್ಳಿಗರ ಕೈಲಿ ಅಧಿಕಾರ ಕೊಡದೆ, ದೊಡ್ಡ ದೊಡ್ಡ ಅಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳ ಕೈಲಿ ಅಧಿಕಾರವಿದ್ದು, ರಾಜ್ಯಮಟ್ಟದಲ್ಲಿ ಅಧಿಕಾರ ಕೇಂದ್ರೀಕೃತವಾದಲ್ಲಿ ಹಳ್ಳಿಗರು ತೀವ್ರಗತಿಯಲ್ಲಿ ತಮ್ಮ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಮನಗಂಡು ಈಗ ನಮ್ಮ ಪಂಚಾಯಿತಿ ರಾಜ್ಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿ ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ಅನು ಮಾಡಿಕೊಟ್ಟಿದ್ದಾರೆ. ಇದು ಒಳ್ಳೆಯ ಕಾರ್ಯ, ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಹೀಗೆ ಅಭಿನಂದಿಸುತ್ತಾ, ಇದರಲ್ಲಿರುವ ಕೆಲವು ಕಲಮುಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

ಮೊದಲನೆಯದಾಗಿ ಗ್ರಾಮ ಮಟ್ಟದಲ್ಲಿ ಪಂಚಾಯಿತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತು ಹೀಗೆ ಮಾಡಿರುವುದು ಯೋಗ್ಯವೆಂದು ಕಾಣುತ್ತದೆ. ಕೆಲವರು ಹಣದ ಕೊರತೆಯಾಗುತ್ತದೆ, ಅನಾನುಕೂಲವಾಗುತ್ತದೆ, ಜಿಲ್ಲಾ ಪರಿಷತ್ತನ್ನು ಕೈಬಿಟ್ಟು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡು ಎರಡಿದ್ದರೆ ಸಾಕು ಎಂದು ಸಲಹೆ ಕೊಟ್ಟಿದ್ದಾರೆ. ಆದರೆ ನನಗೆ ಅದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಪಂಚಾಯಿತಿ ಏನಾದರೂ ತಪ್ಪು ಮಾಡಿದರೆ ಅದನ್ನು ತೋರಿಸಿ ಸರಿಪಡಿಸಲು ತಾಲ್ಲೂಕು ಬೋರ್ಡಿರುತ್ತದೆ, ಅದರಂತೆ ತಾಲ್ಲೂಕು ಬೋರ್ಡು ಏನಾದರೂ ತಪ್ಪು ಮಾಡಿದರೆ, ಯೋಗ್ಯ ಕಾರ್ಯ ನಡೆಸದಿದ್ದರೆ ಅದರ ಮೇಲ್ವಿಚಾರಣೆ ನಡೆಸಲು ಜಿಲ್ಲಾ ಪರಿಷತ್ ಇರುವುದು ಅಗತ್ಯ. ಹಾಗಿಲ್ಲದಿದ್ದರೆ ಅಧಿಕಾರಿಗಳ ಮೇಲೆ ಅವಲಂಬಿಸಬೇಕಾಗುತ್ತದೆ. ಇದನ್ನು ತಿಳಿದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ ಮಾಡಿರುವುದು ಬಹಳ ಯೋಗ್ಯ, ಇದು ಇರಬೇಕೆಂದು ನನ್ನ ಅಭಿಪ್ರಾಯ.

2-00 P.M.

ಇನ್ನು ಎರಡನೇಯದಾಗಿ ಈ ಮಸೂದೆಯ ಪ್ರಕಾರ ತಾಲ್ಲೂಕ್ ಬೋರ್ಡಿಗೆ ಎಲ್ಲ ಸದಸ್ಯರನ್ನು ಆರಿಸುವುದಕ್ಕೆ ಡೈರೆಕ್ಟ್ ಇಲೆಕ್ಷನ್ ಇಡದೆ ಕೆಲವು ಜಾಗಗಳನ್ನು ಇನ್‌ಡೈರೆಕ್ಟ್ ಇಲೆಕ್ಷನಿನಿಂದ ತುಂಬುವ

ವ್ಯವಸ್ಥೆ ಇದರಲ್ಲಿ ಇದೆ. ಇದು ಸರಿಯಾದದು ಅಲ್ಲ ಎಂದು ನನಗೆ ಅನಿಸುತ್ತದೆ. ಇನ್‌ಡೈರೆಕ್ಟ್ ಇಲೆಕ್ಷನ್ನಿಂದ ಮಾಲ್ ಪ್ರಾಕ್ಟೀಸ್ ಮತ್ತು ಕರಪ್ಷನ್ ಹೆಚ್ಚಾಗುವುದು ಖಂಡಿತ. ಇದನ್ನು ಅನೇಕ ಸದಸ್ಯರು ಹೇಳಿದ್ದಾರೆ. ಆದುದರಿಂದ ಡೈರೆಕ್ಟ್ ಇಲೆಕ್ಷನ್ ಇರುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಬೇಕಾದರೆ ಇಲೆಕ್ಟೆಡ್ ಮೆಂಬರ್ಸ್ ಜೊತೆಗೆ ಕೆಲವು ಪಂಚಾಯಿತಿ, ಪ್ರತಿನಿಧಿಗಳನ್ನು ಕೋ-ಆಪ್ಟ್ ಮಾಡಿ ತೆಗೆದುಕೊಳ್ಳುವ ವ್ಯವಸ್ಥೆ ಈ ವಿಧೇಯಕದಲ್ಲಿ ಮಾಡಿ ಕೊಡುವುದು ಒಳ್ಳೆಯದು. ಆ ರೀತಿ ಅನುಕೂಲ ಮಾಡಿಕೊಡಬೇಕು.

ತಾಲ್ಲೂಕ್ ಬೋರ್ಡಿನಲ್ಲಾಗಲಿ ಜಿಲ್ಲಾ ಪರಿಷತ್ತಿನಲ್ಲಾಗಲಿ ಶಾಸನ ಸಭೆಯ ಸದಸ್ಯರಿಗೆ ಸ್ಥಾನ ಈಗ ಕೊಟ್ಟಿಲ್ಲ. ಅವರಿಗೆ ಒಂದೇ ಸ್ಥಾನ ಇರುವುದು ಅವಶ್ಯಕವಾದುದು ಎಂದು ನನಗೆ ಅನಿಸುತ್ತದೆ. ಒಂದು ತಾಲ್ಲೂಕಿನ ಪ್ರತಿನಿಧಿಯಾಗಿ ಎಂ. ಎಲ್. ಎ. ಇರುತ್ತಾನೆ. ತನ್ನ ತಾಲ್ಲೂಕಿನಲ್ಲಿ ಯಾವ ಯಾವ ಕಾರ್ಯ ನಡೆಯಬೇಕು ಯಾವ ರೀತಿ ಅಭಿವೃದ್ಧಿ ಕಾರ್ಯ ನಡೆಸಬೇಕು ಅಂದರೆ ತಾಲ್ಲೂಕಿಗೆ ಒಳ್ಳೆಯದಾಗುತ್ತದೆ ಎಂಬುದು ಲೇಜಿಸ್ಲೇಟರ್ಸ್‌ರಿಗೆ ಗೊತ್ತಿರುತ್ತದೆ. ಕಾರಣ ಅವರು ತಾಲ್ಲೂಕ್ ಬೋರ್ಡಿನಲ್ಲಿದ್ದರೆ ಸಂಪರ್ಕ ಬೆಳಸಿ ಸಲಹೆ ಕೊಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ತಾಲ್ಲೂಕಿನ ಅವರ ಸಂಪರ್ಕ ತಪ್ಪುತ್ತದೆ. ಅದುದರಿಂದ ತಾಲ್ಲೂಕ್ ಬೋರ್ಡಿನಲ್ಲಿ ಲೆಜಿಸ್ಲೇಟರ್ಸ್ ಇರುವುದು ಆವಶ್ಯಕವೆಂದು ನನಗೆ ಅನಿಸುತ್ತದೆ. ಒಂದು ವೇಳೆ ಅವರಿಗೆ ಜಿಲ್ಲಾ ಪರಿಷತ್ತಿನಲ್ಲಿ ಸ್ಥಾನ ಕೊಡುವುದನ್ನು ಬಿಡಬಹುದು ಆದರೆ ತಾಲ್ಲೂಕ್ ಮಟ್ಟದಲ್ಲಿ ಅವರು ಇರುವುದು ಆವಶ್ಯಕ ಎಂದು ನನಗೆ ಅನಿಸುತ್ತದೆ.

ಪಂಚಾಯಿತಿ, ತಾಲ್ಲೂಕ ಬೋರ್ಡು ಮತ್ತು ಜಿಲ್ಲಾ ಪರಿಷತ್ತಿಗೆ ಲ್ಯಾಂಡ್ ರೆವೆನ್ಯೂದಿಂದ ಒಂದು ಭಾಗ ಕೊಡಬೇಕೆಂಬುದು ಕ್ಲಾಜ 190 ಮತ್ತು 194, 264ರಲ್ಲಿ ಹೇಳಿದೆ. ಒಟ್ಟು ಕಂದಾಯದಲ್ಲಿ ಪಂಚಾಯತಿಗಳಿಗೆ, ತಾಲ್ಲೂಕ್ ಬೋರ್ಡಿಗೆ, ಜಿಲ್ಲಾ ಪರಿಷತ್ತಿಗೆ ಶೇಕಡ 34, 39 ಮತ್ತು 24 ರಷ್ಟು ಹೋಗುತ್ತದೆ. ಈ ರೀತಿ ಕೊಡುವುದು ಯೋಗ್ಯವಾಗಿದೆ. ಇದರಲ್ಲಿ ಒಂದು ವಿಷಯ ಏನಾಗಿದೆ ಎಂದರೆ ಇಡೀ ರಾಜ್ಯದ ಮಟ್ಟದಲ್ಲಿ ಇದನ್ನು ಲೆಕ್ಕ ಹಾಕಿ ಒಂದೊಂದು ತಾಲ್ಲೂಕಿಗೆ, ಜಿಲ್ಲಾ ಪರಿಷತ್ತಿಗೆ ಹಾಗೂ ಗ್ರಾಮ ಪಂಚಾಯತಿಗೆ ಅವುಗಳ ಪಾಪ್ಯೂಲೇಶನ್ ಬೇಸಿಸ್ ಮೇಲೆ ಹಂಚಬೇಕು ಎಂದು ಇದೆ. ಪಾಪ್ಯೂಲೇಶನ್ ಬೇಸಿಸ್ ಮೇಲೆ ಹಂಚತಕ್ಕದ್ದು ಯೋಗ್ಯವಲ್ಲ. ಪ್ರತಿಯೊಂದು ಗ್ರಾಮದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ರೆವನ್ಯೂ ಬರುತ್ತದೆಯೋ ಅದಕ್ಕೆ ಅನುಗುಣವಾಗಿ ಹಂಚಬೇಕು. ಯಾಕಂದರೆ ಪಾಪ್ಯೂಲೆಶನ್ ಬೇಸಿಸ್ ಮೇಲೆ ಹಂಚಿದರೆ ಕೆಲವು ಕಡೆ ಅನ್ಯಾಯವಾಗುವ ಸಂಭವ ಇದೆ. ಉದಾಹರಣೆ ಹೇಳುವುದಾದರೆ ಮಲೆನಾಡು ಪ್ರದೇಶದಲ್ಲಿ ಸಣ್ಣ ಹಳ್ಳಿಗಳು ಇರುತ್ತವೆ. ಅಲ್ಲಿ ಜನ ಸಂಖ್ಯೆ ಕಡಿಮೆ ಇರುತ್ತದೆ. ಆದರೆ ಲ್ಯಾಂಡ್ ರೆವೆನ್ಯೂ ಬಹಳ ಇರುತ್ತದೆ. ಪಾಪ್ಯೂಲೇಶನ್ ಬೇಸಿಸ್ ಮೇಲೆ ಕೊಡುವುದಾದರೆ ಅವರಿಗೆ ಕಡಿಮೆ ಸಿಕ್ಕುತ್ತದೆ. ಹೆಚ್ಚು ಕಂದಾಯ ಕೊಡುತ್ತಿದ್ದರೂ ಕೂಡ ಕಡಿಮೆ ಹಣ ಹಂಚುವುದರಿಂದ ಅಭಿವೃದ್ಧಿ ಕಾರ್ಯ ಕಡಿಮೆಯಾಗ ಬಹುದು. ಈ ಕಾರಣದಿಂದ ಪ್ರತಿಯೊಂದು ಊರಿನಲ್ಲಿ ಕಂದಾಯ ಎಷ್ಟು ವಸೂಲಾಗುತ್ತದೆಯೋ ಅದರ ಆಧಾರದ ಮೇಲೆ ಪರ್ಸೆಂಟೇಜ್ ಲೆಕ್ಕಾ ಹಾಕಿ ಆ ಪಂಚಾಯಿತಿಗೆ ಕೊಡುವುದು ಯೋಗ್ಯ. ಇದಕ್ಕೆ ಅನುಸಾರವಾಗಿ ತಾಲ್ಲೂಕ ಬೋರ್ಡು ಜಿಲ್ಲಾ ಪರಿಷತ್ತಿಗೂ ಸಹ ಹಾಗೆಯೇ ಕೊಡಬೇಕು. ಆದರೆ ಕೆಲವು ಪಂಚಾಯಿತಿಗಳ ಉತ್ಪನ್ನವು ಕಡಮೆ ಇರುತ್ತದೆ. ಅವಕ್ಕೆ ಶೇಕಡ 15ರಷ್ಟು ಇಟ್ಟ ರಿಜರ್ವದಿಂದ ಕೊಟ್ಟರೆ ಸರಿಯಾಗುತ್ತದೆ.

ಕ್ಲಾಜು 264ರಲ್ಲಿ ಒಂದು ರೂಪಾಯಿಗೆ 40 ಪೈಸೆ ಲೋಕಲ್ ಸೆಸ್ ವಸೂಲ್ಮಾಡುವ ಅಧಿಕಾರ ಇದೆ. ಇದಲ್ಲದೆ ಜಿಲ್ಲಾ ಪರಿಷತ್ತು ಒಂದು ರೂಪಾಯಿಯಲ್ಲಿ 20 ಪೈಸೆ ವರೆಗೂ ಹಾಗೂ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಯವರು ಶೇಕಡ ಇದರಂತೆ ಲೋಕಲ್ ಸೆಸ್ ವಸೂಲ್ಮಾಡುವುದಕ್ಕೆ ಅಧಿಕಾರ ಕೊಟ್ಟಿದೆ. ಈ ಹಣ ಹಳ್ಳಿಗಳಲ್ಲಿ ರೈತರ ಕಡೆಯಿಂದ ವಸೂಲು ಆಗುತ್ತದೆ ಈಗ ಲ್ಯಾಂಡ್ ರೆವೆನ್ಯೂ ಸೆಟಲ್‌ಮೆಂಟ್ ಆಗುವುದು ಇದೆ. ಈಗ ಇರತಕ್ಕ ಕಂದಾಯದ ಎರಡು ಮೂರು ಪಟ್ಟು ಕಂದಾಯ ಆಗುವುದು ಇದೆ. ಲ್ಯಾಂಡ್ ರೆವೆನ್ಯೂ ಸೆಟಲ್‌ಮೆಂಟ್ ಆದ ನಂತರ ಆಗುವ ಕಂದಾಯದ ಮೇಲೆ ಲೋಕಲ್ ಸೆಸ್ ಶೇಕಡ 40ರಷ್ಟು ಮತ್ತು ಅಭಿವೃದ್ಧಿ ಸಂಸ್ಥೆಗಳು ಶೇಕಡ 60ರಷ್ಟು ವಸೂಲ್ಮಾಡುವುದು ಎಂದರೆ ಅದು ಏಳೆಂಟು ಪಟ್ಟು ಹೆಚ್ಚಾಗುತ್ತದೆ. ಇದು ರೈತರಿಗೆ ಭಾರವಾಗುತ್ತದೆ, ಅದರಲ್ಲಿಯೂ ನಮ್ಮ ಉತ್ತರ ಕರ್ನಾಟಕದಲ್ಲಿ ಈಗ ನೂರಕ್ಕೆ 28 ಪರ್ಸೆಂಟು ಇದೆ. ಮೊದಲು 9 ಪೈಸಾ ಇದ್ದುದು ಹೆಲ್ತ್ ಸೆಸ್ ಈಗ ಕೂಡಿ 28 ಪೈಸಾ ಒಟ್ಟು ಲೋಕಲ್ ಸೆಸ್ ಒಂದು ರೂಪಾಯಿ ಆಗಿದೆ. ಇದಕ್ಕೂ ಹೆಚ್ಚಿಗೆ ಲೋಕಲ್ ಸೆಸ್ ಹಾಕುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನ್ಯಾಯ ಪಂಚಾಯತಿ ಬಗ್ಗೆ ಎರಡು ಮಾತು ಹೇಳಲು ಬಯಸುತ್ತೇನೆ. ಹಳ್ಳಿಯಲ್ಲಿ ನ್ಯಾಯ ಪಂಚಾಯತಿ ಊರಿನ ನ್ಯಾಯ ತೀರಿಸಬೇಕು, ಕೋರ್ಟು ಕಚೇರಿಗೆ ಹೋದರೆ ಜನರಿಗೆ

(ಶ್ರೀ ಜಿ. ಎಸ್. ದೇಸಾಯಿ)

ತೊಂದರೆಯಾಗುತ್ತದೆ ಎಂದು ನ್ಯಾಯ ಪಂಚಾಯತಿ ಮಾಡಿರುವುದು ಬಹಳ ಯೋಗ್ಯವಾಗಿದೆ. ಆದರೆ ಇದರಲ್ಲಿ ಕೆಲವು ದೋಷಗಳು ಇವೆ. ನಮ್ಮ ಹಳ್ಳಿಗಳಲ್ಲಿ ಜನರು ಅಷ್ಟು ಸುಶಿಕ್ಷಿತರಾಗಿಲ್ಲ ಅಷ್ಟು ಸುಧಾರಿಸಿದ ಜನ ಇಲ್ಲ. ಅನೇಕ ಪಂಗಡಗಳು ಇರುವುದರಿಂದ ಹಳ್ಳಿಯಲ್ಲಿ ವಾತಾವರಣ ಅಷ್ಟು ಸರಿಯಾ ಗಿದೆ ಇಲ್ಲ. ಹಳ್ಳಿಗಳಲ್ಲಿ ವಾತಾವರಣ ಹೇಗೆ ಇದೆ ಎಂಬುದನ್ನು ಅನೇಕ ಸದಸ್ಯರು ಹೇಳಿದ್ದಾರೆ. ನ್ಯಾಯ ಪಂಚಾಯತಿ ರಚನೆಯಿಂದ ಹಳ್ಳಿಗಳಲ್ಲಿ ದ್ವೇಷಾಸೂಯೆಗಳು ಜಾಸ್ತಿಯಾಗುತ್ತದೆ. ಜನರಲ್ಲಿ ಗೂಂಡತನ ಜಾಸ್ತಿಯಾಗುತ್ತದೆ. ಇಂಥ ವೇಳೆಯಲ್ಲಿ ಅವರ ಕೈಯಲ್ಲಿ ದೊಡ್ಡ ಅಧಿಕಾರ ಕೊಡುವುದು ಯೋಗ್ಯವಲ್ಲ ಎಂದು ನನಗೆ ಅನಿಸುತ್ತದೆ, 287 ಕಲಮಿನಲ್ಲಿ ಹೇಳಿರುವ ಪ್ರಕಾರ ಎಲ್ಲ ಕಡೆ ಮಾಡುತ್ತೇವೆ ಆದರೆ ಮೊದಲು ಎಲ್ಲಿ ಶಕ್ಯವಿದೆಯೋ ಅಲ್ಲಿ ಮಾಡುತ್ತೇವೆ ಎಂದು ಹೇಳಿದೆ. ಆ ಪ್ರಕಾರ ಮಾಡಿದರೆ ನನ್ನ ಅಭ್ಯಂತರವಿಲ್ಲ. ಪ್ರಾಯೋಗಿಕವಾಗಿ ಕೆಲವು ಕಡೆ ನ್ಯಾಯ ಪಂಚಾಯತಿ ಮಾಡಬಹುದು. ಇವುಗಳ ಸ್ಥಾಪನೆಯ ಬಗ್ಗೆ ಇನ್ನೊಂದು ಸಲಹೆ ಇದೆ. ಈ ಕಾನೂನು ಪ್ರಕಾರ ನ್ಯಾಯ ದಾನ ಕೊಡುವವರಿಗೆ ಎಜ್ಯುಕೇಶನಲ್ ಕ್ವಾಲಿಫಿಕೇಶನ್ಸ್ ಏನೂ ಇಟ್ಟಿಲ್ಲ. ಏಬಲ್ ಟು ರೀಡ್ ಅಂಡ ರೈಟ್ ಎಂದು ಇರುವುದು ಅಷ್ಟು ಸರಿಯಾದುದು ಆಗಿಲ್ಲ. ಅವರಿಗೆ ಎಜ್ಯುಕೇಶನಲ್ ಕ್ವಾಲಿಫಿಕೇಶನ್ಸ್ ಇರುವುದು ಅವಶ್ಯಕ. ಕಡಿಮೆಯೆಂದರೂ ಮುಲ್ಕೀ ಪರೀಕ್ಷೆ ಅಥವಾ ಸ್ಕೂಲ್ ಫೈನಲ್ ಪರೀಕ್ಷೆ ಪಾಸಾಗಿರಬೇಕು ಎಂದು ಇಟ್ಟರೆ ಅದು ಹೆಚ್ಚಲ್ಲ. ಇದರಿಂದ ಕೆಲಸ ಮಾಡಲು ಸುಲಭ ವಾಗುತ್ತದೆ. ಸ್ವಲ್ಪ ಕಾಯದೆ ಜ್ಞಾನ ಇರುವುದು ಯೋಗ್ಯ. ಆದುದರಿಂದ ಈ ವಿಚಾರದಲ್ಲಿ ದುಡುಕಬಾರದು. ಸಾವಧಾನವಾಗಿ ಮುಂದುವರಿಯಬೇಕು ಎಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಇಲೆಕ್ಷನ್ ಇರುವುದರಿಂದ ಅದರ ಪರಿಣಾಮ ಬಹಳ ಕೆಟ್ಟದಾಗುತ್ತದೆ. ಇಲೆಕ್ಷನ್ನಿನಲ್ಲಿ ಆರಿಸಿ ಬರುವುದು ಅಂದರೆ ಓಟರ್ ಮರ್ಜಿ ಹಿಡಿಯಬೇಕಾಗುತ್ತದೆ. ಓಟು ಕೊಟ್ಟವರು ಅವರ ಮೇಲೆ ಒತ್ತಡ ತರುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ನ್ಯಾಯ ದಾನ ಸರಿಯಾಗಿ ನಡೆಯುವುದಿಲ್ಲ. ಆದುದರಿಂದ ನ್ಯಾಯ ಪಂಚಾಯತಿಗೆ ಸದಸ್ಯರನ್ನು ನಾಮಿನೇಶನ್ ಮಾಡಿ ಯೋಗ್ಯರಾದವರನ್ನು ತರಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಜಿ. ದೇವಯ್ಯ (ಮಂಡ್ಯ).—ಸ್ವಾಮಿ, ಈ ಮಸೂದೆಯ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕೆ ಮೊದಲು ಅಧ್ಯಕ್ಷರನ್ನು ವಂದಿಸುತ್ತೇನೆ. ಪಂಚಾಯತಿ ರಾಜ್ಯ ಬಿಲ್ಲಿನ ಮೇಲೆ ಈ ಸಭೆಯಲ್ಲಿ ಸುಮಾರು ಮೂರು ದಿವಸದಿಂದಲೂ ಚರ್ಚೆ ನಡೆಯುತ್ತಿದ್ದು ಅನೇಕ ಸ್ನೇಹಿತರು ಮಾತನಾಡಿ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಈಗ ನನ್ನ ಅಭಿಪ್ರಾಯ ಹೇಳಲು ಬಯಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ನಮ್ಮ ದೇಶಕ್ಕೆ ಪ್ರಜಾ ರಾಜ್ಯ ಬಂದ ಮೇಲೆ ದೇಶದಲ್ಲಿ ಯಾರೂ ಬಡವರು ಇರಬಾರದು ಎಲ್ಲರಿಗೂ ಅನ್ನ ಬಟ್ಟೆ ವಸತಿ ಅನುಕೂಲ ಇರಬೇಕು ಎಂಬ ಅಭಿಪ್ರಾಯದಿಂದ ಸರಕಾರ ದುಡಿಯುತ್ತಿದೆ, ಜನರೂ ದುಡಿಯುತ್ತಿದ್ದಾರೆ ಎಂದು ನನ್ನ ಅರ್ಥ. ಈ ಪಂಚಾಯತಿಯಾಗಲಿ, ತಾಲ್ಲೂಕ ಬೋರ್ಡ್ ಆಗಲಿ ಡಿಸ್ಟ್ರಿಕ್ಟ್ ಕೌನ್ಸಿಲ್ ಆಗಲಿ ಇವುಗಳ ವ್ಯವಸ್ಥೆ ಮಾಡಿದರೆ ಒಂದಕ್ಕೆ ಎರಡರಷ್ಟು ಖರ್ಚು ಜಾಸ್ತಿಯಾಗುತ್ತದೆ. ಬರೀ ಜಗಳ ಜಾಸ್ತಿಯಾಗು ತ್ತದೆ. ಮಾತಿಗಿಂತ ಜಗಳ ಓಡಾಟದ ಕೆಲಸ ಜಾಸ್ತಿಯಾಗುತ್ತದೆ. ಈಗ ಇರುವ ಜಗಳಗಳಲ್ಲಿ ಅರ್ಧದಷ್ಟು ಕಡಿಮೆ ಮಾಡಿದರೆ ಕೆಲಸ ಹೆಚ್ಚು ಆಗುತ್ತದೆ. ಇದನ್ನು ಕೇಂದ್ರ ಸರಕಾರ ನಮ್ಮ ರಾಜ್ಯ ಸರಕಾರ ಅದರಲ್ಲಿಯೂ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆ ಯವರು ಯೋಚನೆ ಮಾಡಬೇಕು. ಈಗ ಪಂಚಾಯತಿ ಬೇಕಾಗಿಲ್ಲ, ತಾಲ್ಲೂಕ ಬೋರ್ಡು ಬೇಕಾಗಿಲ್ಲ ಡಿಸ್ಟ್ರಿಕ್ಟ್ ಕೌನ್ಸಿಲ್ ಬೇಕಾಗಿಲ್ಲ. ಈ ವ್ಯವಸ್ಥೆಯಿಂದ ಹಣ ವೆಚ್ಚವಾಗುತ್ತದೆ. ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ 19 ಡಿಸ್ಟ್ರಿಕ್ಟಗಳು ಸೇರಿವೆ.

ಪೂರ್ಣವಾಗಿ ವರ್ಷವಾದರೂ ಆಗಲಿ, ಒಂದು ಯೋಜನೆ ಹಂಚಿಕೊಂಡು, ಈ ನಮ್ಮ ರಾಜ್ಯದ 19 ಡಿಸ್ಟ್ರಿಕ್ಟಿನೊಳಗೆ ಪ್ರತಿಯೊಂದು ಹಳ್ಳಿಯೊಳಗೂ ಎಷ್ಟು ಜನ ಬಡವರಿದ್ದಾರೆ, ಅವರಿಗೆ ಮನೆ ಇದೆಯೋ, ಜಮೀನು ಇದೆಯೋ, ಅವರಿಗೆ ಏನೇನು ಕೆಲಸ ಮಾಡಿಕೊಡಬೇಕು ಎಂದು ನೋಡಿ ಅವರ ಕುಂದುಕೊರತೆಗಳನ್ನು ಹೋಗಲಾಡಿಸಿ. ಕುಂಬಾರ ವೃತ್ತಿ ಮಾಡಿಕೊಂಡು ಎಷ್ಟು ಜನರಿದ್ದಾರೆ. ಆಚಾರರು ಅಂದರೆ ಅಕ್ಕಸಾಲಿಗರು ಕೆಲಸವಿಲ್ಲದೆ ಎಷ್ಟು ಜನರಿದ್ದಾರೆ, ಈಡಿಗರು ಎಕ್ಸೈಜ್ ಬಾಬು ಬಿಟ್ಟು ಅವರು ಏನು ತೊಂದರೆ ಪಡುತ್ತಾ ಇದ್ದಾರೆ, ಹೀಗೆ ಅನೇಕ ಕೋಮಿನವರು ಹಳ್ಳಿಯೊಳಗೆ ಏನೇನು ತಾಪತ್ರಯ ಪಡುತ್ತಿದ್ದಾರೋ, ಅವರಿಗೆ ಯಾವುದಾದರೂ ಕಸಬಿನಲ್ಲೋ, ಉಪಕಸಬಿನಲ್ಲೋ ಅಥವಾ ಯಾವುದಾದರೂ ತರಹ ಕೈಗಾರಿಕೆಯಲ್ಲಿಯೋ, ಇಲ್ಲ ವ್ಯವಸಾಯದಲ್ಲೋ ಕೆಲಸವು ಜಾಸ್ತಿಯಾಗಿ ಒದಗಿಸಬೇಕು. ಪ್ರತಿಯೊಂದು ಊರಿನಲ್ಲಿಯೂ ಮನೆ ಇಲ್ಲದವರಿಗೆ ಮನೆ

ಕೊಡಿ, ಭೂಮಿ ಇಲ್ಲದವರಿಗೆ ಭೂಮಿ ಕೊಡಿ, ಕೆಲಸವಿಲ್ಲದವರಿಗೆ ಉಪಕಸುಬು ಮಾಡಿಕೊಡಿ, ನಾಲ್ಕೈದು ವರ್ಷದಲ್ಲಿ ಡಿಸ್ಟ್ರಿಕ್ಟ್ ಅವುಳಿ, ತಾಲ್ಲೂಕಾ ಮಳೆ 50-50 ಗ್ರಾಮಗಳನ್ನು ತೆಗೆದುಕೊಂಡು ಆ ಗ್ರಾಮಗಳಲ್ಲಿರುವ ಜನರ ದರಿದ್ರಾವಸ್ಥೆಯನ್ನು ಹೋಗಲಾಡಿಸಿ. ಆವಾಗ ಎಲ್ಲ "ರಾಜ್ಯವೂ" ಬಂದಂತೆಯೇ. ಈ ಪಂಚಾಯತ್ ರಾಜ್, ತಾಲ್ಲೂಕು ಬೋರ್ಡು, ಡಿಸ್ಟ್ರಿಕ್ಟ್ ಕೌನ್ಸಿಲ್ಲು ಇತಕ್ಕೋಸ್ಕರ ಬರುತ್ತವೆಂದರೆ ಓಟುದಾರರನ್ನು ಕೊಂಡುಕೊಳ್ಳುವುದಕ್ಕೆ, ಇನ್ನು ಯಾವ ಉದ್ದೇಶವೂ ಇಲ್ಲ. ಕಾಂಗ್ರೆಸ್ ಸಂಸ್ಥೆಯೇ ಆಗಲಿ, ಯಾವ ಇನ್ನೊಂದು ರಾಜಕೀಯ ಸಂಸ್ಥೆಯೇ ಆಗಲಿ ತಾಲ್ಲೂಕು ಬೋರ್ಡು ಮುಂತಾದ ಸ್ಥಳೀಯ ಸಂಸ್ಥೆಗಳನ್ನು ತಮ್ಮ ತಮ್ಮ ಕಡೆ ಜನಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರ ಅನೇಕ ವರ್ಷಗಳಿಂದಲೂ ಉಪಯೋಗಿಸಿಕೊಂಡು ಬಂದಿವೆ. ತಮ್ಮ ತಮ್ಮ ಪಕ್ಷಗಳಿಗೆ ಪ್ರತಿಯೊಂದರಲ್ಲಿಯೂ ಮೆಜಾರಿಟಿ ಬಂದು ಅಧಿಕಾರ ಪಡೆಯೋಣವೆನ್ನುವುದೇ ಉದ್ದೇಶ. ನಾನು ಅನೇಕ ಜನರನ್ನು ನೋಡಿದ್ದೇನೆ. ಯಾರ ಹೆಸರಿನಲ್ಲಿಯೋ ಹಸು, ಎತ್ತು, ಎಮ್ಮೆ, ಟಗರು ಇರುತ್ತದೆ, ಅದು ತಮ್ಮದೆಂದು ತೋರಿಸಿಬಿಟ್ಟು ದುಡ್ಡು ಒಳಗೆ ಹಾಕಿಕೊಂಡವನನ್ನು ನನ್ನ ಕಣ್ಣಿನಿಂದ ನೋಡಿದ್ದೇನೆ. ಇದು ಮಾಡುವುದಕ್ಕೆ ಏತಕ್ಕೆ ಅವಕಾಶವಿರಬೇಕು. ಆದರಿಂದ ನಾನು ಈ ಪಂಚಾಯತ್ ರಾಜ್ ಮಸೂದೆಯಲ್ಲಿ ನಿಯೋಜಿತವಾಗಿರುವ ಗ್ರಾಮಪಂಚಾಯ್ತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತು, ಮೂರನ್ನೂ ಒಪ್ಪುವುದಿಲ್ಲ. ದಯೆಯಿಟ್ಟು ಶ್ರೀ ರಾಮಕೃಷ್ಣ ಹೆಗ್ಡೆಯವರು ನಾನು ಮೊದಲೇ ಹೇಳಿದಂಥ ಪಂಚವಾರ್ಷಿಕ ಯೋಜನೆ ಮಾಡಿ, 5 ವರ್ಷದೊಳಗೆ ಕೊನೆಗೆ ಚುನಾಯಿಸಿದ ಒಂದೊಂದು ತಾಲ್ಲೂಕಿನಲ್ಲಾದರೂ ಬಡತನ ಇಲ್ಲದಂತೆ ಮಾಡಬೇಕು. ಶ್ರೀಮತಿ ರತ್ನಮ್ಮನವರು ಹೇಳಿದಹಾಗೆ, ಈ ಜಿಲ್ಲಾ ಪರಿಷತ್ತಿನ ಆಡಳಿತಕ್ಕೆ ಪೋಲೀಸು ಇಲಾಖೆ ಒಂದು ಸೇರಿಲ್ಲ. ತಾವು ಯಾರಾದರೂ ನನ್ನ ಜೊತೆಯಲ್ಲಿ ಮಂಡ್ಯ ಜಿಲ್ಲೆಗೆ ಬನ್ನಿ. ಸುಮಾರು 4 ವರ್ಷದಿಂದ ತಾಲ್ಲೂಕು ಬೋರ್ಡಿನಿಂದ ನೀರಾವರಿ ಕೆಲಸ ಮಾಡಿಸಿದ್ದೇವೆಂದು ಹೇಳುತ್ತಾರೆ. ಹಾಗಾದರೆ ಮಂಡ್ಯದಲ್ಲಿ ಎಷ್ಟು ನೀರಾವರಿಯಾಗಿದೆ, ವಿಶ್ವೇಶ್ವರ ನಾಲೆಯಿಂದ ಬಸರಾಳ್ ಅಥವ ಹೆಬ್ಬಾಲದ ಭಾಗದಲ್ಲಿ ಒಂದು ಎಕರೆ ನೀರಾವರಿಯಾಗಿಲ್ಲ. ನಾನು ಹೇಳುವುದರಲ್ಲಿ ತಪ್ಪು ಇದ್ದರೆ, ನೀವು ಏನು ಶಿಕ್ಷೆ ಕೊಟ್ಟರೂ ಅನುಭವಿಸಲು ಸಿದ್ಧ. ಒಂದು ಕೆರೆ ಕಟ್ಟಿದ್ದಾರಾ, ಒಂದು ಪಿಕಪ್ ಕಟ್ಟಿದ್ದಾರಾ, ಒಂದು ಸೇತುವೆ ಕಟ್ಟಿದ್ದಾರಾ? ಕಂಟ್ರಾಕ್ಟುದಾರರುಗಳಿಗೋಸ್ಕರ ಈ ಕೆಲಸಗಳನ್ನು ಮಂಜೂರು ಮಾಡುತ್ತಾರೆ. ಅವರ ದಾಕ್ಷಿಣ್ಯಕ್ಕೆ ದುಡ್ಡನ್ನು ಹಾಕುತ್ತಾರೆ. ಪಂಚಾಯತ್ ರಾಜ್ ಮಾಡಬೇಕೆಂದು ಹೊರಟಿದ್ದೀರಿ. ಇಷ್ಟೊಂದು ಎಲ್ಲಾ ಪಂಚಾಯ್ತಿಗಳು ಇದ್ದರೂ, ನಮ್ಮಲ್ಲಿ ಎರಡು ವರ್ಷವಾದರೂ ಒಂದು ರೆಜಲ್ಯೂಷನ್ ಮಾಡಿಲ್ಲ. ಪಂಚಾಯ್ತಿಯಲ್ಲಿ ದಡ್ಡೇ ಇರುವುದಿಲ್ಲ. ಏನಾದರೂ ಅವರ ಒಪ್ಪಿಗೆ ಅಷ್ಟು ಅಗತ್ಯವಾಗಿ ಬೇಕಾದರೆ, ಕೂತುಕೊಂಡ ಕಡೆಯೇ ಮೆಂಬರುಗಳ ರುಜು ತೆಗೆದುಕೊಳ್ಳುತ್ತಾರೆ. ಇವು ಸಾಮಾನ್ಯವಾಗಿ ಜನಗಳನ್ನು, ಓಟುದಾರರನ್ನು ಕೊಂಡುಕೊಳ್ಳುವ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುವುದರಿಂದ, ನಾನು ಈ ಮೂರು ಸಂಸ್ಥೆಗಳ ರಚನೆಗೂ ಒಪ್ಪುವುದಿಲ್ಲ. ಇದೂ ಅಲ್ಲದೆ ತಾಲ್ಲೂಕು ಬೋರ್ಡುಗಳ ಕೆಲವು ಸ್ಥಾನಗಳಿಗೆ ಗ್ರಾಮಪಂಚಾಯ್ತಿಗಳಿಂದ ಅಪ್ರತ್ಯಕ್ಷ ಚುನಾವಣೆ ನಡೆಸುವ ಕ್ರಮ ಇದರಲ್ಲಿದೆ. ಪ್ರತ್ಯಕ್ಷ ಚುನಾವಣೆಗಳಲ್ಲಿಯೇ ಎಷ್ಟೋ ಅನಾಹುತಗಳು ನಡೆಯುತ್ತವೆ. ಈ ಅಪ್ರತ್ಯಕ್ಷ ಚುನಾವಣೆ ಇಟ್ಟರೆ ಬಡವರಿಗೆ ತಾಲ್ಲೂಕು ಬೋರ್ಡುಗಳ ಸ್ಥಾನಕ್ಕೆ ನಿಂತುಕೊಳ್ಳುವುದಕ್ಕೆ ಆಗುವುದೇ ಇಲ್ಲ. ದುಡ್ಡು ಜೇಬಿನಲ್ಲಿಟ್ಟುಕೊಂಡು ಇಂಥ ಚುನಾವಣೆಗೆ ನಿಲ್ಲಲು ಸಿದ್ಧವಾಗಿರಬೇಕು; ನಮ್ಮಂಥ ಬಡವರಿಗೆ ಇದರಲ್ಲಿ ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲ. ಅಪ್ರತ್ಯಕ್ಷ ಚುನಾವಣೆ ಬಿಟ್ಟು ನೇರವಾಗಿ ಚುನಾವಣೆ ಮಾಡಬೇಕು. ನಾನು ಇದೇ ಸಭೆಯೊಳಗೆ ಹಿಂದೂ ಹೇಳಿದ್ದೇನೆ. ಮುನಿಸಿಪಾಲಿಟಿಯೊಳಗೆ ಕೌನ್ಸಿಲರುಗಳಿಂದ ಚುನಾಯಿತರಾಗುವ ಅಧ್ಯಕ್ಷರು ಬೇಕಾಗಿಲ್ಲ, ಅವರು ಜನಗಳಿಂದ ನೇರವಾಗಿ ಚುನಾವಣೆಯಾಗಬೇಕು, ಆವಾಗ ಜನಪ್ರೀತಿ ಗಳಿಸಿರುವವರು ಚುನಾಯಿತರಾಗಿ, ಆ ಸ್ಥಾನದಲ್ಲಿ ಶಕ್ತಿಯುತವಾಗಿ ಕೆಲಸ ಮಾಡಲು ಅವಕಾಶವಾಗುತ್ತದೆ. ಬಡವರಾಗಿ, ದುಡ್ಡಿಲ್ಲದವರಾದರೆ, ಜನಗಳಲ್ಲಿ ಎಷ್ಟೇ ಪ್ರಖ್ಯಾತರಾಗಿದ್ದರೂ, ಮನೆಯಲ್ಲಿಯೇ ಇರಬೇಕಾಗುತ್ತದೆ ಇಂಥ ಅಪ್ರತ್ಯಕ್ಷ ಚುನಾವಣೆಗಳಲ್ಲಿ ದುಡ್ಡು ಖರ್ಚು ಮಾಡುವವರಿಗೇ ಸ್ಥಾನ ಸರ್ಕಾರ ಈ ಪದ್ಧತಿಯ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕು.

ಈವಾಗ ತಾಲ್ಲೂಕು ಬೋರ್ಡಿಗೆ ಸೊಸೈಟಿಗಳು ಸೇರಿವೆ. ಈ ಸೊಸೈಟಿಗಳಲ್ಲಿರುವ ಸದಸ್ಯರು ಅಮಾನಿ ಕೆಲಸ ಮಾಡುತ್ತಾರೆ. ನಮ್ಮ ಮಂಡ್ಯ ರೈತರ ಸೊಸೈಟಿಯೊಳಗೆ ಮೊನ್ನೆ 12 ಲಕ್ಷ ರೂಪಾಯಿಗೆ ಒಂದು ಕಂಟ್ರಾಕ್ಟ್ ಕೊಟ್ಟರು. ಅದಕ್ಕೆ ಎಷ್ಟು ಜನ ಟೆಂಡರ್ ಕೊಟ್ಟಿದ್ದರು? 12 ಲಕ್ಷ ರೂಪಾಯಿಯ ಒಂದು ಕಂಟ್ರಾಕ್ಟನ್ನು ಅಮಾನಿಯಾಗಿ ಮಾಡಿಸಿರುವಾಗ, ಇದು ಯಾವ ರೀತಿಯಿಂದ ನಡೆದಿರಬಹುದೆಂದು ತಾವೇ ಊಹಿಸಿಕೊಳ್ಳಬೇಕು. ಇದಕ್ಕೆ ಏಕೆ ಟೆಂಡರ್ ಕರೆಯಬಾರದಾಗಿತ್ತು? ಈ ಸೊಸೈಟಿಯಲ್ಲಿ ಅನೇಕ ವಾಹನಗಳಿವೆ, ಲಾರಿಗಳನ್ನೂ ಇಟ್ಟುಕೊಂಡಿದ್ದಾರೆ. ಅವುಗಳನ್ನು ಚೆಕ್ ಮಾಡುವವರು ಯಾರು? ಈ ಕಂಟ್ರಾಕ್ಟುದಾರರು ಸೊಸೈಟಿ ಆಡಳಿತಗಾರರ

(ಶ್ರೀ ಜೆ. ದೇವಯ್ಯ)

ಒಂದು ಗುಂಪು ಮಾಡಿಕೊಂಡಿದ್ದಾರೆ. ಈ ಸಕ್ಕರೆ ಕಂಪೆನಿ ಬಗ್ಗೆ ಎರಡು ಪ್ರಶ್ನೆ ಈ ಸಭೆಯಲ್ಲಿ ಕೇಳಿದ್ದೆವು. ಕಂಪೆನಿಗೂ ತಮಗೂ ಸಂಬಂಧವಿಲ್ಲವೆಂದು ಸರ್ಕಾರ ಉತ್ತರ ಕೊಟ್ಟಿತು. ಸೊಸೈಟಿಯ ಹಣ ಅಪವ್ಯಯ ಮಾಡುತ್ತಿರುವವರ ಮೇಲೆ ಏನೂ ಹತೋಟಿ ಇಲ್ಲದಿರುವಾಗ, ಈ ಮಸೂದೆ ಏತಕ್ಕೋಸ್ಕರ, ಈ ಸೊಸೈಟಿಯಿಂದ ಜನಕ್ಕೆ ಏನು ಉಪಕಾರವಿದೆ ? ಈ ಸೊಸೈಟಿ ನಡೆಸುವ ಜನಕ್ಕೆ ಯಾವ ರೀತಿ ಸಂಪಾದನೆ ಇದೆಯೆಂದು ಸರ್ಕಾರಕ್ಕೆ ಗೊತ್ತಿರಬಹುದು. ಸೊಸೈಟಿಗೆ ವ್ಯಾಪಾರ ನಡೆದರೆ ಶೇಕಡ 6½ ಕಮಿಷನ್ ಬಂದು ಅಪಾರ ಲಾಭ ಬರುತ್ತದೆ. ಅದನ್ನು ಯಾವ ತರಹ ಖರ್ಚು ಮಾಡುತ್ತಾರೆ ಅನ್ನುವುದನ್ನು ನೋಡುವವರು ಯಾರು ? ಲಕ್ಷಾಂತರ ರೂಪಾಯಿ ಸಂಪಾದನೆ ಇದೆ. ಸರ್ಕಾರಕ್ಕೆ ಸೊಸೈಟಿ ಮೇಲೆ ಅಧಿಕಾರವಿಲ್ಲವೆಂದ ಮೇಲೆ, ಅದನ್ನು ಎಷ್ಟು ವರ್ಷಕ್ಕೊಂದು ಸಾರಿ ಆಡಿಟ್ ಮಾಡುತ್ತಾರೆ. ಈ ತಾಲ್ಲೂಕು ಬೋರ್ಡು ಖರ್ಚು ವೆಚ್ಚವನ್ನೂ ಯಾರು ಆಡಿಟ್ ಮಾಡುತ್ತಾರೆ ? ಇದನ್ನೆಲ್ಲಾ ತಾವು ಸರ್ಕಾರದವರು ಆಲೋಚನೆ ಮಾಡಬೇಕು. ಈ ಒಂದು ಬಿಲ್ಲನ್ನು ತರುವಾಗ ಜನಗಳಿಗೆ ಏನು ನ್ಯಾಯವಾಗುತ್ತದೆ, ಏನು ಅನ್ಯಾಯವಾಗುತ್ತದೆ ಅನ್ನುವುದನ್ನು ಸಾವಕಾಶವಾಗಿ ಯೋಚಿಸಬೇಕು. ಜನಗಳಿಗೆ ಅನುಕೂಲವಾಗಲಿ ಅನ್ನುವ ದೃಷ್ಟಿಯಿಂದ ಮಸೂದೆಯನ್ನು ತರಬೇಕು ; ಸುಮ್ಮನೆ ಜನ ಕೊಂದುಕೊಳ್ಳುವುದಕ್ಕೋಸ್ಕರ, ಗ್ರೂಪ್ ಮಾಡಿಕೊಳ್ಳುವುದಕ್ಕೋಸ್ಕರ, ತಮ್ಮ ಪಕ್ಷದಲ್ಲಿ ಒಗ್ಗಟ್ಟು ತರುವುದಕ್ಕೋಸ್ಕರ, ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೋಸ್ಕರ ಇಂಥ ಬಿಲ್ಲನ್ನು ತಂದಿರುವುದು ಸರಿಯಲ್ಲವೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಪಂಚಾಯ್ತಿ ನ್ಯಾಯಾಲಯಗಳನ್ನು ಮಾಡಬೇಕೆಂಬ ಉದ್ದೇಶವಿದೆ. ಒಂದು ನ್ಯಾಯ ಸಿಗಬೇಕಾಗಿದ್ದರೆ ಪಂಚಾಯ್ತಿ ಎಷ್ಟರಮಟ್ಟಿಗಿರಬೇಕು ! ಈಗ ಅನೇಕ ಕಡೆ ಹಳ್ಳಿಗಳಲ್ಲಿ ಪಂಚಾಯ್ತಿ ಮಾಡುತ್ತೇವೆ. ಅದರ ಕಷ್ಟ ಸುಖ ಸರ್ಕಾರಕ್ಕೆ ಗೊತ್ತಿಲ್ಲ. ಈ ಸ್ಥಿತಿ ಕಾನೂನು ರೀತ್ಯ ಅಧಿಕಾರವಿಲ್ಲದೇನೇ ಇದೆ. ಇನ್ನು ಪಂಚಾಯ್ತಿ ಮಾಡುವವರಿಗೆ ಅಧಿಕಾರ ಸ್ಥಾನವನ್ನೂ ಕೊಟ್ಟುಬಿಟ್ಟರೆ, ಹಳ್ಳಿಯ ಬಡವರಿಗೆ ಕಿರುಕುಳ ಕೊಡುತ್ತಾರೆ, ಅವರು ಹೇಳಿದ ಹಾಗೆ ಕೇಳಿಕೊಂಡಿರದಿದ್ದರೆ ಬಲಿ ಹಾಕುತ್ತಾರೆ. ಈ ನ್ಯಾಯಾಲಯದ ಮೆಂಬರುಗಳ ಜೀತ, ಸೇವೆ ಮಾಡಿಕೊಂಡಿರಬೇಕು, ಈ ನ್ಯಾಯಾಲಯದ ಸ್ಥಾನಗಳು ಬಲಿಷ್ಠರ ಕೈಗೆ ಸಿಕ್ಕಿ ಹಳ್ಳಿಯವರು ಅವರಿಗೆ ಬಲಿಯಾಗಿ ಹೋಗುತ್ತಾರೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಪಂಚಾಯ್ತಿಗೆ ನ್ಯಾಯಾಲಯ ಕೊಟ್ಟುಬಿಟ್ಟರೆ ಗ್ರಾಮಸ್ಥರು ಬದುಕುವುದೇ ಕಷ್ಟವಾಗುತ್ತದೆ. ಅಧಿಕಾರವಿರುವವರು ಗ್ರಾಮವಾಸಿಗಳನ್ನು ಪಾತಾಳಕ್ಕೆ ತುಳಿಯುತ್ತಾರೆ ಬಡವರು ಅವರ ಜೀತ ಗೇಯ್ದುಕೊಂಡು ಬದುಕು ಸಾಗಿಸಬೇಕು. ಇಂಥ ಪೂರ್ಣವಾದ ಅಧಿಕಾರ ಹಳ್ಳಿಗಾಡಿನವರಿಗೆ ಕೊಟ್ಟರೆ, ಬಡವರು ಹಳ್ಳಿಯಲ್ಲಿ ವಾಸಮಾಡುವುದಕ್ಕೆ ಸಾಧ್ಯವೆ ಅನ್ನುವುದನ್ನು ಸರಕಾರ ಪರಿಶೀಲನೆ ಮಾಡಬೇಕೆಂದು ಪ್ರಾರ್ಥಿಸಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಕರಿಲಿಂಗಣ್ಣವರ್ (ಗೋಕಾಕ್).—ಅಧ್ಯಕ್ಷರೇ, ಈ ದಿವಸ ಪಂಚಾಯ್ತಿ ರಾಜ್ಯಾಡಳಿತದ ಬಿಲ್ಲು ಏನು ಇಟ್ಟಿದ್ದಾರೆ ಇದು ಸ್ವಾಗತ ಮಾಡುವಂತಹ ಬಿಲ್ಲು. ಇದನ್ನು ತಂದಂತಹ ಶ್ರೀಮಾನ್ ಹೆಗ್ಗಡೆಯವರು ದಿಟ್ಟತನದ ಹೆಜ್ಜೆಯನ್ನಿಟ್ಟು ಅಧಿಕಾರ ವಿಕೇಂದ್ರೀಕರಣ ಮತ್ತು ಹಳ್ಳಿಗಳಲ್ಲಿಯ ಜನರು ತಮ್ಮ ತಮ್ಮ ಕೆಲಸಗಳನ್ನು ತಾವು ತಾವೇ ಮಾಡಿಕೊಳ್ಳುವಂತಹ ಒಂದು ಸ್ವಾಗತಾರ್ಹ ಬಿಲ್ಲನ್ನು ತಂದದ್ದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಈ ಬಿಲ್ಲಿನೊಳಗೆ ಕೆಲವೊಂದು ಸೂಚನೆಗಳನ್ನು ಹೇಳಲು ಇಚ್ಛಿಸುತ್ತೇನೆ. ಇನ್‌ಡೈರೆಕ್ಟ್ ಎಲೆಕ್ಷನ್ ಏನಿದೆ ಇದು ಇರಬಾರದು. ಡೈರೆಕ್ಟಾಗಿ ಎಲೆಕ್ಷನ್ ಆಗಬೇಕು ಇದಕ್ಕೆ ಕಾರಣವೇನೆಂದರೆ ಇನ್‌ಡೈರೆಕ್ಟ್ ಎಲೆಕ್ಷನ್ ಆದರೆ ದುಡ್ಡು ಇದ್ದವರ ಕೈವಾಡ ನಡೆಯುತ್ತದೆ ಆದ್ದರಿಂದ ಡೈರೆಕ್ಟ್ ಎಲೆಕ್ಷನ್ ಯೋಗ್ಯವಾಗುತ್ತದೆ ಎಂಬುದು ನನ್ನ ಸಲಹೆ. ಎರಡನೆಯದಾಗಿ ಜಿಲ್ಲಾ ಪರಿಷತ್ತಿನೊಳಗೆ ಎಂ.ಎಲ್.ಎ., ಎಂ.ಎಲ್.ಸಿ.ಗಳು ಇರಬಾರದು ಎನ್ನುವಂತಹ ಒಂದು ಪರಿಸ್ಥಿತಿ ಇದೆ. ಆ ರೀತಿ ಆಗಬಾರದು ಅವರು ಜರೂರಾಗಿ ಅಲ್ಲಿ ಇರಬೇಕು. ಏಕೆಂದರೆ ಅವರು ಆ ಭಾಗದ ಎಲ್ಲಾ ಕೆಲಸಗಳನ್ನೂ ಮಾಡುವಂತಹ ಜವಾಬ್ದಾರಿ ಅವರ ಮೇಲೆ ಇರುತ್ತದೆ. ಅದರ ಸಲುವಾಗಿ ಅವರು ತಾಲ್ಲೂಕು ಮತ್ತು ಜಿಲ್ಲಾ ಪರಿಷತ್ತಿನೊಳಗೆ ಇರಲೇಬೇಕೆಂದು ನನ್ನದು ಒಂದು ಸಲಹೆ.

ಜಿಲ್ಲಾ ಪರಿಷತ್ತಿಗೆ ಸಾಕಾದಷ್ಟು ಅಧಿಕಾರಗಳನ್ನು ಕೊಟ್ಟಿದ್ದೀರಿ. ಪ್ರಾಥಮಿಕ ಶಿಕ್ಷಣವನ್ನು ಮಾಧ್ಯಮಿಕ ಶಿಕ್ಷಣವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿರುವುದು ಯೋಗ್ಯವಲ್ಲ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನೂ ತಾಲ್ಲೂಕು ಬೋರ್ಡಿಗೇ ಕೊಡಬೇಕೆಂದು ನನ್ನ ಸಲಹೆ.

ಆರ್ಥಿಕ ಪರಿಸ್ಥಿತಿಯ ಸಲುವಾಗಿ ಒಂದು ಮಾತನ್ನು ಹೇಳುತ್ತೇನೆ. ಜನಸಂಖ್ಯೆಯ ಮೇಲೆ ಹಂಚಬೇಕೆಂದು ಏನು ಮಾಡಿದ್ದೀರಿ ಇದು ಯೋಗ್ಯವಾಗಲಾರದು. ಏಕೆಂದರೆ ಅಲ್ಲಿ ಬರತಕ್ಕ ಹಣ, ಕಂದಾಯ ಏನು ಇದೆ ಅವನ್ನು ಆಯಾಯಾ ಭಾಗಕ್ಕೆ ಕೊಟ್ಟರೆ ಯೋಗ್ಯವಾಗುತ್ತದೆ.

ನ್ಯಾಯ ಪಂಚಾಯ್ತಿಗಳ ಸಲುವಾಗಿ ಹೇಳುವುದಾದರೆ ಕೆಲವೊಂದು ಜನರು ಈ ವಿಷಯದಲ್ಲಿ ಬಹಳ ಹೀನಸ್ಥಿತಿಯಲ್ಲಿ ಮಾತನಾಡಿದ್ದಾರೆ. ಹಳ್ಳಿ ಜನ ಗೂಂಡಾಗಿರಿ ಮಾಡುತ್ತಾ ಇದ್ದಾರೆ, ನ್ಯಾಯ ಮಾಡುವಂತಹ ಪರಿಸ್ಥಿತಿ ಅಲ್ಲಿ ಇಲ್ಲ ಎಂದು ಹೇಳುವಂತಹ ಮಾತು ಬಹಳ ದುಃಖದಾಯಕವಾದ ಮಾತಾಗಿದೆ. ಹಳ್ಳಿಯಲ್ಲಿ ಯೋಗ್ಯ ಜನರು ಇದ್ದಾರೆ. ಒಂದು ಕಡೆ ಹಳ್ಳಿಯ ಜನರು ದೇವರು ಇದ್ದ ಹಾಗೆ ಇದ್ದಾರೆ ಅವರಿಗೆ ಇನ್ನೂ ಹೆಚ್ಚಿನ ರೀತಿಯಿಂದ ಅಧಿಕಾರ ಕೊಡಬೇಕೆಂದು ಹೇಳುತ್ತೀರಿ, ಮತ್ತೊಂದು ಕಡೆ ಅವರಿಗೆ ಹೆಚ್ಚಿನ ಅಧಿಕಾರ ಕೊಡುವುದು ಯೋಗ್ಯವಲ್ಲ ಗೂಂಡಾಗಿರಿ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾ ಇದ್ದೀರಿ, ಅಲ್ಲಿ ಪಾರ್ಟಿ, ಪಕ್ಷ ಪಂಗಡಗಳು ಇಲ್ಲ ಅಂತ ಅಲ್ಲ. ಒಂದು ಹಳ್ಳಿಯಲ್ಲಿ ಯಾರೋ ನಾಲ್ಕೈದು ಜನ ಇದ್ದ ಮಾತ್ರಕ್ಕೆ ಅವರ ಸಲುವಾಗಿ ಉಳಿದಂತಹ ಜನರಿಗೆ ಕೆಟ್ಟ ಹೆಸರು ಕೊಟ್ಟು ಅವರಿಗೆ ಸಿಕ್ಕಬೇಕಾದಂತಹ ಅಧಿಕಾರಗಳಿಗೆ ತಡೆ ಹಾಕಬಾರದು. ಅದರ ಸಲುವಾಗಿ ನ್ಯಾಯ ಪಂಚಾಯ್ತಿಗಳನ್ನು ಕೊಟ್ಟು ಅವುಗಳನ್ನು ನಡೆಸಲೇಬೇಕೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಯಾವುದೇ ದೃಷ್ಟಿಯಿಂದಲೂ ಕೂಡ ನ್ಯಾಯ ಪಂಚಾಯ್ತಿ ಕೊಡಬಾರದು ಎಂಬ ಸಲಹೆ ಮಾಡಬಾರದು ಎಂದು ನಾನು ಹೇಳುತ್ತೇನೆ.

ಈಗ ಜಿಲ್ಲಾ ಪರಿಷತ್ತಿಗೆ ಒಂದು ಲಕ್ಷ ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಎಂದು ಹೇಳಿ ಎಂ.ಎಲ್.ಎ. ಗಳನ್ನು ತೆಗೆದುಕೊಂಡರೆ ಯಾವ ಯಾವ ತಾಲ್ಲೂಕುಗಳಲ್ಲಿ ಪ್ರತಿನಿಧಿಗಳು ಸಿಕ್ಕುತ್ತಾರೆಯೋ ಅಲ್ಲಿ ತೆಗೆದುಕೊಳ್ಳಬಹುದು. ಎಂ.ಎಲ್.ಎ.ಗಳು ಮತ್ತು ಎಂ.ಎಲ್.ಸಿ.ಗಳನ್ನು ಸೇರಿಸಿಕೊಂಡರೆ ಅಂತಹ ದೊಡ್ಡ ಸಂಖ್ಯೆ ಏನೂ ಆಗುವುದಿಲ್ಲ ಎಂದು ಹೇಳಿ ಸಲಹೆ ಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಪಾಗಾವಿ (ಹಾವೇರಿ).—ಮಾನ್ಯ ಮಂತ್ರಿಗಳು ನಮ್ಮ ಸಭೆಯಲ್ಲಿ ಯಾವ ಈ ಪಂಚಾಯತ್ ರಾಜ್ಯ ಬಿಲ್ಲನ್ನು ಮಂಡಿಸಿದ್ದಾರೆ ಇದನ್ನು ಸ್ವಾಗತಿಸುತ್ತೇನೆ. ಇದರ ಮೇಲೆ ಅನೇಕ ಟೀಕೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಇದು ಸ್ವಲ್ಪ ಅವಸರ ಆಯಿತು. ಎಲ್ಲರಿಗೂ ಈ ಬಿಲ್ಲನ್ನು ಓದುವುದಕ್ಕೆ ಸಾಧ್ಯವಾಗಲಿಲ್ಲ. ಈ ಬಿಲ್ಲನ್ನು ಮೊದಲಿನಿಂದ ಕೊನೆಯವರೆಗೂ ಓದಿದ್ದರೆ ಬಹುಶಃ ಇಷ್ಟೊಂದು ಟೀಕೆ ಟಿಪ್ಪಣಿಗಳು ಬರುತ್ತಾ ಇರಲಿಲ್ಲ ಎಂದು ನನಗೆ ಅನಿಸುತ್ತದೆ. ಅನೇಕ ಜನರು ಇವತ್ತು ನ್ಯಾಯ ಪಂಚಾಯ್ತಿಗಳ ಬಗ್ಗೆ ಅನೇಕ ವಿಧವಾಗಿ ಹೇಳಿದ್ದಾರೆ. ನ್ಯಾಯ ಪಂಚಾಯ್ತಿಗಳ ಬಗ್ಗೆ ಜನರು ಯಾವ ಭೀತಿಯನ್ನು ವ್ಯಕ್ತಮಾಡಿದ್ದಾರೆ ಅದು ನಿರಾಧಾರವಾದದ್ದು ಎಂದು ನಾನು ತಿಳಿದುಕೊಳ್ಳುತ್ತೇನೆ. ಏಕೆಂದರೆ 287ನೇ ಕ್ಲಾಸ್ ಪ್ರಕಾರ ಸರ್ಕಾರದವರು ಎಲ್ಲಾ ಕಡೆಯಲ್ಲೂ ನ್ಯಾಯ ಪಂಚಾಯ್ತಿಗಳನ್ನು ಸ್ಥಾಪನೆ ಮಾಡುತ್ತೇನೆ ಎಂದು ಹೇಳಿಲ್ಲ. ಎಲ್ಲಿ ಮಾಡುವುದಕ್ಕೆ 'ಅವಕಾಶವಿದೆಯೋ' ಅಲ್ಲಿ ನೋಟಿಫಿಕೇಷನ್ ಮಾಡಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಮಾತ್ರ ಅಧಿಕಾರವನ್ನು ಕೊಡುತ್ತಾ ಇದ್ದೇವೆ ಅಷ್ಟೆ. ಜನರ ಮನಸ್ಸಿಗೆ ವಿರೋಧವಾಗಿ ಎಲ್ಲಾ ಕಡೆಯಲ್ಲೂ ನ್ಯಾಯ ಪಂಚಾಯ್ತಿ ಏರ್ಪಾಡಾಗುತ್ತದೆ ಎಂದು ಇಲ್ಲಿ ನಮೂದು ಆಗಿಲ್ಲ. ಮತ್ತೊಂದು ಮುಖ್ಯವಾದ ಅಂಶ ಎಂದರೆ 327ನೇ ಕ್ಲಾಸ್ ಪ್ರಕಾರ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟಿನವರು ಯಾವಾಗಲಾದರೂ ಅನ್ಯಾಯವಾಗಿದೆ ಎಂದು ಕಂಡುಬಂದರೆ ಅದನ್ನು ಸರಿಪಡಿಸಬಹುದು ಎಂದು ಹೇಳಿದ್ದಾರೆ. ಇಷ್ಟಾದರೂ ಕೂಡ ನ್ಯಾಯ ಪಂಚಾಯ್ತಿ ಏನೋ ಅನ್ಯಾಯ ಮಾಡುತ್ತದೆ ಎಂದು ಕೆಲವು ಜನರು ಭಾವನೆ ಮಾಡಿಕೊಂಡರೆ ವಿಷಾದವಾಗುತ್ತದೆ. ಇದರಲ್ಲಿ ಒಂದು ಸಣ್ಣ ತಿದ್ದುಪಡಿ ಮಾಡಬೇಕೆಂದು ನನಗೆ ಅನಿಸುತ್ತದೆ. ಇವತ್ತು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟಿಗೆ ಪವರ್ಸ್ ಕೊಟ್ಟಿದ್ದೀರಿ, ಇವತ್ತಿನ ಹಳ್ಳಿಯ ಸ್ಥಿತಿಯನ್ನು ನೋಡಿದರೆ ಯಾವ ಕೇಸಿನ ಟ್ರಯಲ್ ನಡೆದರೂ ಅದರ ಮೇಲೆ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಬಹುದು. ಇದರ ಬದಲು ಮುನ್ಸೀಫ್ ಕೋರ್ಟಿಗೆ ಈ ಕಾರ್ಯವನ್ನು ಕೊಡಲಿಕ್ಕೆ ಸಾಧ್ಯವಿದೆಯೋ ಏನೋ ಎಂಬುದನ್ನು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತ್ರೀ ಟೈರ್ ಸಿಸ್ಟಂ ಇರಬೇಕಾದ್ದು ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಟೂ ಟೈರ್ ಮಾಡಿದರೆ ಜಿಲ್ಲಾ ಬೋರ್ಡಿನ ಮೇಲೆ ಒಂದು ಕೋ ಆರ್ಡಿನೇಟೆಡ್ ಬಾಡಿ ಇಲ್ಲದಂತಾಗುತ್ತದೆ. ಪ್ರಾಥಮಿಕ ಶಿಕ್ಷಣ, ಹೆಲ್ತ್ ಸಮಿತಿ ಇವುಗಳ ಆಡಳಿತ ಪಂಚಾಯ್ತಿಗಳ ಕೈಗೆ ಬಂದು ಜಿಲ್ಲಾ ಮಟ್ಟದ ಮೇಲೆ ಒಂದು ಕೋ ಆರ್ಡಿನೇಟೆಡ್ ಬಾಡಿ ಬೇಕಾಗುತ್ತದೆ ಅದು ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ. ಇದರಿಂದ ಓವರ್ ಹೆಡ್ ಎಕ್ಸ್‌ಪೆನ್ಸಸ್ ಜಾಸ್ತಿಯಾಗುತ್ತದೆ ಎಂದು ವಾದ ಮಾಡಿದ್ದಾರೆ, ಆ ರೀತಿ ಏನೂ ಆಗುವುದಿಲ್ಲ, ಜಿಲ್ಲಾ ಪರಿಷತ್ತಿನಲ್ಲಿ ಅಧಿಕಾರ ಕೇಂದ್ರೀಕರಣವಾಗಿದೆ ಎಂದರೆ ಅಲ್ಲಿ ಅವರ ಅಧಿಕಾರವನ್ನು ಸ್ವಲ್ಪ ಮೊಟಕು ಮಾಡಲು ಸೂಚನೆ ಕೊಡಬಹುದೇ ಹೊರತು ತ್ರೀ ಟೈರ್ ಸಿಸ್ಟಂ ಹೋಗಬೇಕೆಂದು ವಾದ ಮಾಡುವುದು ಹುರುಳಿಲ್ಲದ ವಾದ ಎಂದು ನಾನು ತಿಳಿದುಕೊಂಡಿದ್ದೇನೆ.

(ಶ್ರೀ ಎನ್. ಎ. ಕರಿಲಿಂಗಣ್ಣವರ್)

ಪ್ರಜಾಪ್ರಭುತ್ವದಲ್ಲಿ ಎಲ್ಲ ಪಂಚಾಯ್ತಿಗಳಲ್ಲೂ ನೇರ ಚುನಾವಣೆಯಾಗಬೇಕಾದ್ದು ಅತ್ಯವಶ್ಯಕ ಎಂದು ಮಾನ್ಯ ಮಿತ್ರರು ಪ್ರತಿಪಾದಿಸಿದ್ದಾರೆ. ಎಲ್ಲ ಪಂಚಾಯಿತಿಗಳಿಗೂ ನೇರ ಚುನಾವಣೆ ಅವಶ್ಯಕ ಎಂದು ಪ್ರತಿಪಾದಿಸಿದ್ದಾರೆ ಅದೇ ರೀತಿ ನೇರ ಚುನಾವಣೆಯಾಗುತ್ತವೆ, ಆಮೇಲೆ ಅಪ್ರತ್ಯಕ್ಷ ಚುನಾವಣೆಗಳಲ್ಲೂ ಕೂಡ ಪಂಚಾಯ್ತಿ ಮೆಂಬರುಗಳು ತಾಲ್ಲೂಕು ಬೋರ್ಡಿನ ಕೆಲವು ಸದಸ್ಯರುಗಳನ್ನು ಆರಿಸುತ್ತಾರೆ, ಇದು ಯಾವ ಪ್ರಮಾಣದಲ್ಲಿ ಇರಬೇಕು ? ಮೂರನೆ ಒಂದು ಅಂಶ ಸದಸ್ಯರು ಇರಬೇಕೇ ಅಥವಾ ನಾಲ್ಕನೆಯ ಒಂದು ಅಂಶ ಇರಬೇಕೇ ಎಂಬುದಾಗಿ ಪ್ರಮಾಣವನ್ನು ನಿರ್ಧರಿಸಬೇಕೇ ಹೊರತು ಅದು ಇರಕೂಡದು ಎಂದು ಹೇಳುವುದು ತಪ್ಪಾಗುತ್ತದೆ, ಅಪ್ರತ್ಯಕ್ಷ ಚುನಾವಣೆಯಾದರೂ ಕೂಡ ಪಂಚಾಯ್ತಿಗಳಿಂದ ಆರಿಸಿ ಬಂದ ಸದಸ್ಯರು ಅವರು ಆಗಿರುತ್ತಾರಾದ್ದರಿಂದ ಇದು ಯಾವ ರೀತಿಯಿಂದಲೂ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾಗುವುದಿಲ್ಲ ಎಂದು ನಾನು ಪ್ರತಿಪಾದನೆ ಮಾಡುತ್ತೇನೆ.

ಇನ್ನು 110ನೆಯ ಕ್ಲಾಜಿನಲ್ಲಿ ನಮೂದಾಗಿರುವ ಸರ್ಕಾರ ಕೊಡುವ ಗ್ರಾಂಟಿನ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ದೇಶದ ಭೂಕಂದಾಯವನ್ನೆಲ್ಲಾ ಕೂಡಿಸಿ ಒಂದೇ ಒಂದು ಪೂಲ್ ಮಾಡಿ ಅದನ್ನು ಸ್ಟೇಟ್ ಪಂಚಾಯತ್‌ರಾಜ್ ಗ್ರಾಂಟ್ಸ್ ಫಂಡ್ ಎಂದು ಕರೆಯುವುದಕ್ಕೆ ಬದಲಾಗಿ ಈಗಿರುವ ಹಾಗೆ ವಿತರಣೆ ಮಾಡಿದರೆ ಹೆಚ್ಚಿಸಿರುವ ಶೇಕಡ 12 ಭಾಗ ಕಳೆದು ಕೊಳ್ಳುತ್ತಾರೆ. ಅದನ್ನು ಉಳಿದ ಕೆಲವು ಪ್ರದೇಶಗಳಿಗೆ ವಿತರಣೆ ಮಾಡಬಹುದು ಎಂದು ಕೆಲವರು ಭಯ ಕಳವಳ ವ್ಯಕ್ತಪಡಿಸಿದರು, ಅದಕ್ಕೆ ಅವಕಾಶವಿಲ್ಲ. ಹಂತ ಹಂತದಲ್ಲೂ ಸರ್ಕಾರಕ್ಕೆ ಕಟ್ಟು ನಿಟ್ಟಾದ ಮೇಲಿನ ಅಧಿಕಾರವಿದೆ. ಇದಲ್ಲದೆ ನ್ಯಾಯ ಪಂಚಾಯಿತಿಗಳಲ್ಲಿ ಅನ್ಯಾಯವಾದಾಗ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟಿನವರು ಹಸ್ತಕ್ಷೇಪಮಾಡಿ ಅನ್ಯಾಯವಾಗಿರುವುದನ್ನು ಬೇಕಾದಾಗ ಸರಿಪಡಿಸಬಹುದು, ಅದಕ್ಕೆ ಅವಕಾಶವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಯವರೆ, ಈಗಾಗಲೇ ಈ ಮಸೂದೆಯ ಮೇಲೆ ಈ ಸಭೆಯ ಮಾನ್ಯ ಸದಸ್ಯರನೇಕರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲೇನು ಸಮಿತಿ ರಚಿತವಾಗಿತ್ತು ಅದು ಒಪ್ಪಿಸಿದ ವರದಿಯ ಆಧಾರದಮೇಲೆ ಈ ಮಸೂದೆಯನ್ನು ಮಾಡಿದ್ದೇವೆಂದು ಹೇಳಿದರು. ಇದುವರೆಗೂ ಬಸಪ್ಪ ಸಮಿತಿ ವರದಿಯನ್ನು ಈ ಸಭೆಯವರು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿ ಕೊಡದಿರುವುದು ನಿಜವಾಗಿಯೂ ತುಂಬಾ ವಿಷಾದಕರವಾದ ವಿಚಾರ. ಆ ಸಮಿತಿಯ ವರದಿ ತಯಾರಿಸಲು ಸುಮಾರು 3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಎಂದು ಅನೇಕರು ಹೇಳಿದ್ದಾರೆ. ಅಂಥ ಒಂದು ಸಮಿತಿಯವರು ದೇಶದ ಅನೇಕ ಭಾಗಗಳಲ್ಲಿ ಸಂಚಾರಮಾಡಿ ವಿಷಯ ಸಂಗ್ರಹಿಸಿ ಒಂದು ವರದಿ ತಯಾರಿಸಿರುವಾಗ ಈ ಮಾನ್ಯ ಸಭೆಗೆ ಆ ವರದಿಯನ್ನು ಚರ್ಚಿಸಲು ಅವಕಾಶ ಕೊಡದಿರುವುದು ನಿಜವಾಗಿಯೂ ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಎರಡನೆಯದಾಗಿ ಈ ಮಸೂದೆಯನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಈ ಮಾನ್ಯ ಸಭೆಯ ಸದಸ್ಯರಿಗೆ ಹಂಚಬೇಕಾಗಿತ್ತು. ಏಕೆಂದರೆ ಇಲ್ಲಿನ ಅನೇಕ ಸದಸ್ಯರಿಗೆ ಇಂಗ್ಲೀಷು ಬರುವುದಿಲ್ಲ, ಅಂಥವರಿಗೆ ಕನ್ನಡದ ಪ್ರತಿ ದೊರೆತಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಸರ್ಕಾರ ಆ ಕೆಲಸ ಮಾಡದಿರುವುದು ತಪ್ಪು ಎಂದು ನಾನು ಭಾವಿಸುತ್ತೇನೆ.

ಸ್ವಾಮಿ, ಈ ಮಸೂದೆಯಲ್ಲಿ ಹಳ್ಳಿಗಳನ್ನು ವಿಂಗಡಣೆ ಮಾಡುವಾಗ 1,500 ರಿಂದ 5,000 ಜನರವರೆಗಿರುವ ಗ್ರಾಮಗಳನ್ನು ಸೇರಿಸಿ ಒಂದು ಪಂಚಾಯಿತಿ ಮಾಡಬೇಕೆಂದಿದೆ. 1,000 ದಿಂದ ಹಿಡಿದು 5,000 ದವರೆಗೆ ಜನಸಂಖ್ಯೆ ಇರುವುದನ್ನು ನೋಡಿ ಒಂದು ಪಂಚಾಯಿತಿ ಮಾಡುವುದು ಸೂಕ್ತ, 1,500 ಜಾಸ್ತಿಯಾಗುತ್ತದೆ, ಅದರಿಂದ ಅನೇಕ ಹಳ್ಳಿಗಳಿಗೆ ಸೌಲಭ್ಯ ದೊರಕುವುದಿಲ್ಲ. ಎಂದು ಸೂಚಿಸಲಿಚ್ಛಿಸುತ್ತೇನೆ.

ಕಂದಾಯವನ್ನು ಹಂಚುವಾಗ ಪ್ರಜಾಸಂಖ್ಯೆ ಆಧಾರದಮೇಲೆ ಹಂಚಬೇಕು ಎಂಬುದು ನನ್ನ ವಾದ. ಏಕೆಂದರೆ ಇವತ್ತು ಗ್ರೂಪ್ ಪಂಚಾಯಿತಿ ಎಂದು ಮಾಡಿದರೆ ಅಲ್ಲಿ ಬರೀ ಜಾಸ್ತಿ ಜಮೀನಿನವರೆ

ಆದರಿಂದ ಬರುವ ಆದಾಯ ಕಡಮೆಯಾದರೆ ಪಂಚಾಯಿತಿಗೆ ಅಲ್ಲಿ ಖರ್ಚಿಗೆ ಹಣ ಸಾಕಾಗುವುದಿಲ್ಲ. ಕರಂ ಜಮೀನು ಜಾಸ್ತಿ ಇರುವಕಡೆಗೆ ಹೆಚ್ಚು ಆದಾಯ ಹೋಗುತ್ತದೆ. ಆದುದರಿಂದ ಪ್ರಜಾಸಂಖ್ಯೆ ಆಧಾರದವೇಲೆ ಈ ಹಣ ಹಂಚುವುದು ಒಳ್ಳೆಯದು.

ತಾಲ್ಲೂಕು ಬೋರ್ಡಿಗೆ ಚುನಾವಣೆ ಮಾಡುವಾಗ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚುನಾವಣೆಗೆ ಅವಕಾಶ ಈ ಮಸೂದೆಯಲ್ಲಿ ಮಾಡಲಾಗಿದೆ. ಇದನ್ನು ವಿರೋಧಿಸುತ್ತೇನೆ. ಅಪ್ರತ್ಯಕ್ಷ ಚುನಾವಣೆ ನಡಸುವುದರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತದೆ, ಜನ ತಮ್ಮ ಸಹಾನುಭೂತಿಯನ್ನು ಸೂಚಿಸಲು ಅವಕಾಶ ಸಿಕ್ಕುವುದಿಲ್ಲ. ಆದುದರಿಂದ ನೇರ ಚುನಾವಣೆ ಇರುವುದು ಒಳ್ಳೆಯದೆಂದು ಸೂಚಿಸುತ್ತೇನೆ.

ಇನ್ನು ತಾಲ್ಲೂಕು ಬೋರ್ಡು ಮತ್ತು ಜಿಲ್ಲಾಪರಿಷತ್ತುಗಳಿಗೆ ಶಾಸನಸಭಾ ಸದಸ್ಯರು ಹಾಗೂ ಕೌನ್ಸಿಲ್ ಮತ್ತು ಪಾರ್ಲಿಮೆಂಟ ಸದಸ್ಯರು ಬರಲು ಅವಕಾಶವಿಲ್ಲದಂತೆ ಮಾಡಿದ್ದಾರೆ. ಅವರೆಲ್ಲರಿಗೂ ಅವಕಾಶ ದೊರಕಿಸಿಕೊಡಬೇಕು, ಹಾಗೆ ಮಾಡಿದರೆ ಅವರೂಕೂಡ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಚೀಫ್ ಎಗ್ಸಿಕ್ಯುಟಿವ್ ಆಫೀಸರಿಗೆ ಕೊಟ್ಟಿರುವ ಅಧಿಕಾರ ಅತಿಹೆಚ್ಚಿನದು, ಜಾಸ್ತಿಯಾಯಿತು ಎಂಬ ಅಭಿಪ್ರಾಯವಿದೆ. ಮತ್ತೆ ಈ ಆಫೀಸರ ಜೊತೆಗೆ ಡೆಪ್ಯುಟಿ ಚೀಫ್ ಆಫೀಸರನ್ನು ನೇಮಕ ಮಾಡುವುದು ಅಷ್ಟು ಒಳ್ಳೆಯದಲ್ಲ. ಒಬ್ಬ ಚೀಫ್ ಎಗ್ಸಿಕ್ಯುಟಿವ್ ಆಫೀಸರು ಜಿಲ್ಲಾಧಿಕಾರಿ ಗ್ರೇಡಿನವರಾಗಿ ಸಂಬಳ ಜಾಸ್ತಿ ಪಡೆಯುವವರಿದ್ದರೆ ಸಾಕು, ಅವರೇ ಎಲ್ಲಾ ಕೆಲಸ ಮಾಡಬಹುದು. ಡೆಪ್ಯುಟಿ ಚೀಫ್ ಆಫೀಸರ ಹುದ್ದೆ ಅವಶ್ಯಕತೆ ಇಲ್ಲ.

ಅಮೇಲೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಕೋರಂ ನಿರ್ಧಾರ ಮಾಡುವುದಕ್ಕೆ ಮೂರನೆಯ ಒಂದು ಭಾಗ ಸದಸ್ಯರಿದ್ದರೆ ಸಾಕು ಎಂದಿದೆ. ಈ ದಿವಸ 9 ಜನರಿರುವಾಗ 3 ಜನ ರಿದ್ದರೆ ತೀರ್ಮಾನ ಕೈಕೊಳ್ಳಬಹುದು. ಈ ದಿವಸ ಸೇಕಡ 97 ಭಾಗ ದೇಶದ ಕಂದಾಯವನ್ನು ಈ ಸಂಸ್ಥೆಗಳಿಗೆ ಕೊಡುತ್ತೀರಿ. ಅಂಥ ಹೆಚ್ಚು ಮೊತ್ತ ಕೊಡುವಾಗ 3 ಜನರು ಅಲ್ಲಿನ ಹಣಕಾಸಿನ ವ್ಯವಸ್ಥೆಯನ್ನು ತೀರ್ಮಾನ ಮಾಡುವುದು ಪಂಚಾಯಿತಿಯ ಹಿತದೃಷ್ಟಿಯಿಂದ ಧಕ್ಕೆ ತರುತ್ತದೆ ಎಂಬ ಭಾವನೆ ಇದೆ. ಆದುದರಿಂದ ಕೋರಂ ಸಂಖ್ಯೆ ಜಾಸ್ತಿ ಮಾಡಬೇಕೆಂಬುದು ನನ್ನ ಅಭಿಪ್ರಾಯ; ಅದು ಮೂರನೆಯ ಎರಡು ಭಾಗವಾದರೂ ಇರಬೇಕು.

ಅಮೇಲೆ ಈ ಸಂಸ್ಥೆಗಳಿಗೆ ಕೊಡುವ ಜಮೀನು ಕಂದಾಯ, ಸೆಸ್ ಜೊತೆಗೆ ರೂಪಾಯಿಗೆ 20 ಪೈಸಾ ಸೆಸ್ ಹಾಕಬಹುದೆಂದು ಅವಕಾಶ ಕೊಡಲಾಗಿದೆ. ಈಗಾಗಲೆ ರೈತ ಕಂದಾಯ ಕೊಡುವುದಕ್ಕೇ ಸಾಧ್ಯವಿಲ್ಲದೆ ತೊಂದರೆಯಲ್ಲಿರುವಾಗ ರೆವೆನ್ಯೂ ರಿವಿಷನ್ ಆಗಿ ಅದರ ಜೊತೆಗೆ ಸೆಸ್ಸೂ ಸಹ ಜಾಸ್ತಿಯಾದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಸೆಸ್ ಹಾಕಲು ಅವಕಾಶ ಮಾಡಿರುವುದನ್ನು ತೆಗೆದುಹಾಕಬೇಕು.

ಜಿಲ್ಲಾ ಪರಿಷತ್ತಿಗೆ ಈ ಮಸೂದೆಯಲ್ಲಿ ನಮೂದಾಗಿರುವ ಪ್ರಕಾರ ಸರ್ಕಾರದ ಎಲ್ಲ ಅಧಿಕಾರವನ್ನೂ ಕೊಡುತ್ತಿದ್ದೀರಿ. ಇವತ್ತು ದೇಶದಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿಕಾರ್ಯ ಈ ಜಿಲ್ಲಾ ಪರಿಷತ್ತು ಮೂಲಕ ನಡೆಯಬೇಕಾಗುತ್ತದೆ. ಆದರೆ ಜಿಲ್ಲಾ ಪರಿಷತ್ತು ಸರಿಯಾಗಿ ಹಣದ ಸಹಾಯ ಮಾಡದೆ ಹೋದರೆ ಜನರಿಗೆ ಅಷ್ಟು ಅನುಕೂಲವಾಗಲಾರದು. ಜಿಲ್ಲಾ ಪರಿಷತ್ತಿಗೆ ಹೆಚ್ಚು ಹಣ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಆಮೇಲೆ ಜಿಲ್ಲಾ ಪರಿಷತ್ತು 3 ತಿಂಗಳಿಗೊಂದು ಮೀಟಿಂಗನ್ನು ಕರೆಯಬೇಕೆಂದಿದೆ. ಅದಕ್ಕೆ ಹೆಚ್ಚು ಅಧಿಕಾರ ಕೊಟ್ಟಿರುವಾಗ 3 ತಿಂಗಳಿಗೊಂದು ಮೀಟಿಂಗ್ ಮಾಡಿದರೆ ಜಿಲ್ಲಾ ಕುಂದುಕೊರತೆ, ಆರ್ಥಿಕ ಪರಿಸ್ಥಿತಿ ಮುಂತಾದ ವಿಷಯಗಳನ್ನು ಚರ್ಚಿಸಲು ಅವಕಾಶ ಸಾಲುವುದಿಲ್ಲ. ಆದುದರಿಂದ 2 ತಿಂಗಳಿಗೊಂದು ಸಲವಾದರೂ ಮೀಟಿಂಗ್ ನಡೆಸಲು ಅವಕಾಶ ಕಲ್ಪಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನ್ಯಾಯ ಪಂಚಾಯಿತಿ ವಿಚಾರ. ಇದರ ಅಧಿಕಾರ ನೋಡಿದರೆ 250 ರೂಪಾಯಿಗಳ ವರೆಗಿರುವ ಕೇಸುಗಳನ್ನು ತೀರ್ಮಾನಮಾಡಬಹುದು ಮತ್ತು ಕ್ರಿಮಿನಲ್ ಕೇಸಿನ ವಿಚಾರದಲ್ಲಿ ಇಂಡಿಯನ್ ಪೀನಲ್ ಕೋಡಿನ ಸುಮಾರು 25 ಸೆಕ್ಷನ್ನುಗಳ ಅಧಿಕಾರ ಕೊಟ್ಟಿದ್ದಾರೆ. ಅಲ್ಲಿ ಹೆಂಗಸರು, ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರುಗಳು ಇದ್ದರೆ, ಪಂಚಾಯಿತಿ ಮೆಂಬರುಗಳ ಪರವಾಗಿ ಅವರು ಚುನಾಯಿತರಾಗಿ ಬಂದರೆ ಅವರಿಗೆ 250 ರೂಪಾಯಿಗಳವರೆಗಿನ ಕೇಸುಗಳನ್ನು ಮತ್ತು ಕ್ರಿಮಿನಲ್ ಕೇಸುಗಳನ್ನು ತೀರ್ಮಾನಮಾಡುವ ಶಕ್ತಿಯಿರುತ್ತದೆಯೇ ! ನಾವು ಈ ದಿವಸ ನೋಡುತ್ತಿರುವಂತೆ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಲ್ಲಿ ನ್ಯಾಯ ವಿಮರ್ಶೆಯಲ್ಲಿ ಚೆನ್ನಾಗಿ ಅರಿತು ನುರಿತ ನ್ಯಾಯಾಧೀಶರಿದ್ದು, ಅವರು ತಮ್ಮ ತೀರ್ಪನ್ನು ಕೊಡುವಮುನ್ನ ಅನೇಕ ಕೋರ್ಟುಗಳ ಜಡ್ಜ್‌ಮೆಂಟನ್ನು ಪರಾಮರ್ಶಿಸಿ ತೀರ್ಮಾನ ಕೊಡುವುದರಲ್ಲೇ ಕಲವು ಅನಾನುಕೂಲ

(ಶ್ರೀ ಅಂದಾನಯ್ಯ)

ಗಳಾಗುತ್ತಿವೆ ಎಂದು ಹೇಳುತ್ತಿರುವಾಗ ಇನ್ನು ಸಾಮಾನ್ಯ ಜನರು ಕಾನೂನು ಪರಿಶ್ರಮವಿಲ್ಲದವರು ಈ ವ್ಯವಹಾರಗಳಲ್ಲಿ ಎಷ್ಟರಮಟ್ಟಿಗೆ ತೀರ್ಮಾನ ಮಾಡಬಹುದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಈ ಕ್ಲಾಜನ್ನೇ ಈ ಮಸೂದೆಯಿಂದ ತೆಗೆದುಹಾಕಬೇಕೆಂದು ಹೇಳುತ್ತೇನೆ.

ಸ್ವಾಮಿ, ಇನ್ನು ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಹೋಗತಕ್ಕದ್ದಾಗಿರುವುದರಿಂದ ಆ ಸಮಿತಿಯವರು ಇದರಲ್ಲಿ ಹೇಳಿರತಕ್ಕ ಪ್ರತಿಯೊಂದು ಕ್ಲಾಜನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ ಅಲ್ಲಿಯೇ ಸೂಕ್ತ ತಿದ್ದುಪಡಿಗಳನ್ನು ಮಾಡಿ ಮತ್ತೆ ಇಲ್ಲಿಗೆ ಬರುವಂತೆ ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ : ಈಗ ನಮ್ಮ ಮುಂದೆ ಇರತಕ್ಕ ಮೈಸೂರು ಗ್ರಾಮರಾಜ್ಯ ಪಂಚಾಯಿತಿಯ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ನನಗೆ ತಿಳಿದಿರುವಂತೆ ಈ ಸಭೆಗಳ ಮುಂದೆ ಬಂದ ಬಿಲ್ಲುಗಳಲ್ಲಿ ಅತಿ ದೊಡ್ಡ ಬಿಲ್ಲೆಂದರೆ ಇದೇನೇ. ಇದರಲ್ಲಿ ಸುಮಾರು 415 ಪ್ರಕರಣಗಳಿದ್ದು, ಇದು 309 ಪುಟಗಳನ್ನೊಳಗೊಂಡಿದೆ. ಇದನ್ನು ತಯಾರಿಸತಕ್ಕ ಕಾಲದಲ್ಲಿ ಸರ್ಕಾರದವರು ಇದನ್ನು ಸ್ವಲ್ಪ ಸರಿಯಾಗಿ ಆಲೋಚನೆ ಮಾಡಿದ್ದರೆ ಇದರ ಗಾತ್ರವನ್ನು ತಗ್ಗಿಸಬಹುದಾಗಿತ್ತೆಂದು ನನಗೆ ಅನ್ನಿಸುತ್ತಿದೆ. ಇದರಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬರತಕ್ಕ ಕೆಲವು ಪ್ರಕರಣಗಳನ್ನು ಒಟ್ಟುಗೂಡಿಸಿ ಒಂದರಲ್ಲೇ ಅಡಕ ಮಾಡಬಹುದಾಗಿತ್ತೆಂದು ನನಗೆ ಅನ್ನಿಸುತ್ತಿದೆ. ಅಂದರೆ ಇದನ್ನು ಇನ್ನೂ ಸಂಕ್ಷಿಪ್ತ ರೂಪದಲ್ಲಿ ತರಬಹುದಾಗಿತ್ತೆಂದು ನನ್ನ ಭಾವನೆ.

ಇಲ್ಲಿಯತನಕ ಇಲ್ಲಿ ಚರ್ಚೆಗಳಾಗಿರುವುದನ್ನು ನೋಡಿದರೆ ನಮ್ಮಲ್ಲಿ ನ್ಯಾಯ ಪಂಚಾಯಿತಿಗಳಿರಬೇಕೇ ಅಥವಾ ಬೇಡವೇ ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿ ನಿಂತಿದೆ. ನನ್ನ ಅಭಿಪ್ರಾಯದಲ್ಲಿ ಇದು ಅತ್ಯಂತ ಅವಶ್ಯಕವಾಗಿರಲೇ ಬೇಕೆಂದು ಹೇಳುತ್ತೇನೆ. ನಾವು ಈ ದಿವಸ ಆಡಳಿತ ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತಿರುವಾಗ ನಾವು ಈ ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣವಾಗಿ ಅವುಗಳ ಎಲ್ಲಾ ಆಡಳಿತವನ್ನೂ ಬಿಟ್ಟುಕೊಡದೆ ಅಂದರೆ ಈ ಕಾರ್ಯಾಂಗ ಮತ್ತು ನ್ಯಾಯಾಂಗಗಳೆರಡನ್ನೂ ಬಿಟ್ಟುಕೊಡದೆ, ಬರೀ ಒಂದು ಕಾರ್ಯಾಂಗವನ್ನು ಬಿಟ್ಟು ಕೊಟ್ಟರೆ ಆಗ ನಾವು ಪೂರ್ವಾರ್ಧವನ್ನು ಮಾತ್ರ ಕೊಟ್ಟು ಆಡಳಿತದ ಉತ್ತರಾರ್ಧವನ್ನು ತಪ್ಪಿಸಿದಂತಾಗುವುದು. ಹಳ್ಳಿಗಳಲ್ಲಿ ಲಾ ಕಲಿತವರಿಲ್ಲ ಎಂದು ಹೇಳಿ ಅಲ್ಲಿಗೆ ಈ ಅಧಿಕಾರವನ್ನು ಕೊಡುವುದು ಬೇಡವೆಂದು ಹೇಳತಕ್ಕದ್ದು ಸರಿಯಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಕೊಡತಕ್ಕ ತೀರ್ಮಾನ ಒಂದು ಸತ್ಯ, ನ್ಯಾಯ, ಧರ್ಮಗಳಿಂದ ಕೂಡಿದ್ದಾಗಿರುತ್ತದೆ. ಅದನ್ನು ತಪ್ಪಿಸುವುದು ಸರಿಯಲ್ಲ. ಆದರೆ ಈ ದಿವಸ ಈ ನ್ಯಾಯಕ್ಕಾಗಿ ಜನರು ದುಡ್ಡನ್ನು ಕಟ್ಟಿಕೊಂಡು ಹೈಕೋರ್ಟಿನವರೆಗೂ ಅಲೆಯಬೇಕಾಗಿದೆ. ಇದರಿಂದ ಜನರಿಗೆ ಅನೇಕ ಕಷ್ಟನಷ್ಟಗಳುಂಟಾಗಿರುವುದನ್ನು ನಾವು ಕಣ್ಣಾರೆ ನೋಡುತ್ತೇವೆ. ಆದ್ದರಿಂದ ಹಳ್ಳಿಗಳಲ್ಲಿ ಉಂಟಾಗತಕ್ಕ ವ್ಯವಹಾರಗಳನ್ನು ಹಳ್ಳಿಗಳಲ್ಲೇ ತೀರ್ಮಾನವಾಗುವಂತೆ ಮಾಡತಕ್ಕದ್ದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇನ್ನು ಈ ನ್ಯಾಯ ಪಂಚಾಯಿತಿಗಳಿಗೆ ಸದಸ್ಯರ ಚುನಾವಣೆ ವಿಚಾರ ಹೇಳಿದ್ದಾರೆ. ಎರಡು ಮೂರು ಗ್ರಾಮಗಳನ್ನು ಒಂದು ಗ್ರೂಪನ್ನಾಗಿ ಮಾಡಿ ಅಲ್ಲಿಂದ ಮೂರು ಜನರು ಆರಿಸಿ ಬರುವಂತೆ ಮಾಡಿದ್ದಾರೆ. ಇದರಿಂದ ಅಂಥಾ ತೊಂದರೆಯೇನೂ ಆಗುವಂತೆ ಕಂಡುಬರುವುದಿಲ್ಲ.

ಇನ್ನು ಗ್ರಾಮ ಪಂಚಾಯಿತಿಗಳಿಗೆ ಒಂದೊಂದಕ್ಕೂ ಒಬ್ಬೊಬ್ಬ ಕಾರ್ಯದರ್ಶಿ ಇರಬೇಕೆಂದು ಹೇಳಿದೆ. ಆದರೆ ಅದೇರೀತಿ ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕ ಒಬ್ಬೊಬ್ಬ ಕಾರ್ಯದರ್ಶಿ ಇರಬೇಕು. ಇಲ್ಲವಾದರೆ ಈ ಪಂಚಾಯಿತಿ ಕೆಲಸ ಸುಗಮವಾಗಿ ಆಗುವುದಿಲ್ಲ. ಕೆಲವು ಪಂಚಾಯಿತಿಗಳಿಗೆ ಪ್ರತ್ಯೇಕ ಕಾರ್ಯದರ್ಶಿಗಳಿಗೆ ಸಂಬಳ ಕೊಡತಕ್ಕ ಚೈತನ್ಯವಿಲ್ಲವೆಂದು ಹೇಳಬಹುದು. ಕಮ್ಮಿ ಸಂಬಳ ಕೊಟ್ಟರೂ ಪ್ರತ್ಯೇಕ ಕಾರ್ಯದರ್ಶಿಗಳಿರತಕ್ಕದ್ದು ಒಳ್ಳೆಯದು. ಇನ್ನು ಇವುಗಳ ಆರ್ಥಿಕ ಪರಿಸ್ಥಿತಿಯ ವಿಚಾರದಲ್ಲಿ ತುಂಬಾ ಚರ್ಚೆಯಾಗಿದೆ. ಭೂಕಂದಾಯದಲ್ಲಿ 100ಕ್ಕೆ 97 ಭಾಗದಷ್ಟು ಹಣವನ್ನು ಈ ಸಂಸ್ಥೆಗಳಿಗೆ ಕೊಡಬೇಕೆಂದು ಹೇಳಲಾಗಿದೆ. ಆದರೆ ಆ ಹಣದಲ್ಲೇ ಎಲ್ಲಾ ಕೆಲಸಕಾರ್ಯಗಳೂ ನೆರವೇರುತ್ತವೆಂದು ಹೇಳುವುದಕಾಗುವುದಿಲ್ಲ. ಆದಕ್ಕಾಗಿ ಅನೇಕರು ಇದನ್ನು ವಿರೋಧಿಸುತ್ತಿರಬಹುದು. ಈಗ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೂ ಮತ್ತು ಉಪಾಧ್ಯಕ್ಷರಿಗೂ 500 ಮತ್ತು 300 ರೂಪಾಯಿಗಳ ಸಂಭಾವನೆಯಿರಬೇಕೆಂದು ಹೇಳಿದೆ. ಇದು ಸರಿಯಲ್ಲ ಇವರಿಗೆ ವರ್ಷಕ್ಕೆ 2 ಸಾವಿರ ಅಥವಾ 3 ಸಾವಿರ ಟ್ರಾವೆಲಿಂಗ್ ಅಲೋಯನ್ಸ್ ಎಂತ ಕೊಟ್ಟಿದ್ದರೂ ನಾವು

ಅದಕ್ಕೆ ವಿರೋಧಿಸುತ್ತಿರಲಿಲ್ಲ. ಆದರೆ ಇಲ್ಲಿ ಅವರಿಗೆ ಸಂಭಾವನೆ ತಿಂಗಳಿಗೆ ಇಷ್ಟೆಂದು ಹೇಳಿರತಕ್ಕದ್ದು ಸರಿಯಿಲ್ಲವೆಂದು ನನ್ನ ಭಾವನೆ. ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ ಜಾಸ್ತಿಯಾಗುತ್ತದೆ. ಮೇಲಾಗಿ ಇವರಿಗೆ ಕೆಲಸಕಾರ್ಯಗಳಲ್ಲಿ ಅಂಥ ಯಾವ ಒಂದು ಸ್ವಾತಂತ್ರ್ಯವೂ ಇಲ್ಲ. ಆದುದರಿಂದ ಇವರಿಗೆ ಇಷ್ಟು ಆನರೇರಿಯಂ ಕೊಡುವುದು ಬೇಡವೆಂದು ಹೇಳುತ್ತೇನೆ. ಈಗಾಗಲೇ ಜನರ ಮೇಲೆ ತೆರಿಗೆಯ ಹೊರೆ ಜಾಸ್ತಿಯಾಗಿದೆ. ಅನೇಕರು ಯಾವ ಆನರೇರಿಯಂ ಇಲ್ಲದೆ ಸಾರ್ವಜನಿಕ ಸೇವಾ ಬುದ್ಧಿಯಿಂದ ಕೆಲಸಮಾಡತಕ್ಕ ಜನರಿದ್ದಾರೆ. ಅಂಥವರು ಮುಂದೆ ಬರುವುದಕ್ಕಾದರೂ ಒಂದು ಅವಕಾಶಮಾಡಿಕೊಡಿ ಎಂದು ಕೇಳುತ್ತೇನೆ. ಇಲ್ಲಿ ಈ ರೆಮ್ಯುನರೇಷನ್ ಇಟ್ಟಿರುವುದರಿಂದ ಅಸೆಂಬ್ಲಿ, ಪಾರ್ಲಿಮೆಂಟ್ ಸ್ಥಾನಕ್ಕಿಂತಲೂ ಇದಕ್ಕೆ ಕಾಂಪಿಟೇಷನ್ ಜಾಸ್ತಿಯಾಗುತ್ತದೆ. ಆದ್ದರಿಂದ ಇದನ್ನು ತಪ್ಪಿಸಬೇಕು.

ಇನ್ನು ಡೆಫೆನಿಷನ್ ವಿಚಾರದಲ್ಲಿ: ಕ್ಲಾಜ್ (2)ರ ಒಳಕ್ಲಾಜಿನ-39ರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಎಂದರೆ–ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಈ ಎರಡೂ ಸೇರುತ್ತವೆಂದು ಹೇಳಿರತಕ್ಕದ್ದು ಸರಿಯಿಲ್ಲ. ಏಕೆಂದರೆ ನಮ್ಮ ಘಟನಾವಳಿಯ ಆರ್ಟಿಕಲ್ 341 ರಲ್ಲಿ ಸ್ಥಾನಗಳನ್ನು ಷೆಡ್ಯೂಲ್ಡ್ ಟ್ರೈಬಿಗೂ ಪ್ರತ್ಯೇಕವಾಗಿಡಲಾಗಿದೆ. ಇದನ್ನು ನೋಡಿದರೆ ಎಷ್ಟೋ ಜನ ಷೆಡ್ಯೂಲ್ಡ್ ಟ್ರೈಬ್ಸ್‌ನವರನ್ನು ಈಗ ಪ್ರತ್ಯೇಕವಾಗಿ ಇಟ್ಟಿದೆ. ಷೆಡ್ಯೂಲ್ಡ್ ಕ್ಯಾಸ್ಟ್ ಪಾಯಿಂಟ್‌ನಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಬರುವುದಿಲ್ಲ. ಲೆಜಿಸ್ಲೇಟಿವ್ ಅಸೆಂಬ್ಲಿಗೆ ಷೆಡ್ಯೂಲ್ಡ್ ಕ್ಯಾಸ್ಟಿಗೆ ಕಂಟೆಸ್ಟ್ ಮಾಡುವಾಗ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕಂಟೆಸ್ಟ್ ಮಾಡುವುದಕ್ಕಾಗುವುದಿಲ್ಲ. ಜನರಲ್ ಸೀಟಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರು ಕಂಟೆಸ್ಟ್ ಮಾಡಬಹುದು. ಆದರೆ ಇದು ಒಂದಕ್ಕೆ ಷೆಡ್ಯೂಲ್ಡ್ ಕ್ಯಾಸ್ಟ್ ಅಂದರೆ ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಆಗುವುದಿಲ್ಲವೆಂದು ನಾನು ಹೇಳಬೇಕಾಗಿದೆ. ಇದರ ಪ್ರಕಾರ ಒಂದು ಉದಾಹರಣೆಯಿಂದ ನಾವು ಇಲ್ಲಿ ಕಾಣಬಹುದು. ಕೆಲವು ಕಡೆಗಳಲ್ಲಿ ತಮ್ಮ ಪಕ್ಷಕ್ಕಿರುವ ಕ್ಯಾಸ್ಟಿನವರಿಗೆ ಸೀಟುಗಳನ್ನು ಕೊಡಬಹುದು ಮತ್ತೆ ಇತರರನ್ನು ಅವರನ್ನು ಸಮಾಧಾನ ಮಾಡಬಹುದು. ಹಾಗೆಯೇ ಇಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಹೇಳಿದ್ದಕ್ಕೆ ಅವರಿಗೂ ಕೊಡಬಹುದು. ಆದ್ದರಿಂದ ಷೆಡ್ಯೂಲ್ಡ್ ಕ್ಯಾಸ್ಟಿನವರು ಯಾವ ಪ್ರಮಾಣದಲ್ಲಿದ್ದಾರೋ ಅವರವರ ರಕ್ಷಣೆಯ ಮೇಲೆ ಮತ್ತು ಸಂಖ್ಯಾ ಪರಿಮಿತಿಯ ಮೇಲೆ ಅಲ್ಲಲ್ಲಿ ಸೀಟುಗಳನ್ನು ಕೊಡುವಂತಹ ಅಗತ್ಯತೆ ಇರುವುದು ಬಹಳ ಮುಖ್ಯವಾದುದು.

ಶ್ರೀ ಸಂಜೀವನಾಥ ಐಕಳ (ಸೂರತ್‌ಕಲ್).—ಇದು 1970ರ ನಂತರ ಹೋಗುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಹಾಗಾದರೆ 1970ರ ವರೆಗೆ ಈಗಿರುವ ಹಾಗೆ ಇರಲಿ ಎಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ 241ನೇ ಪುಟದಲ್ಲಿ ಮತ್ತು 47ನೇ ಪುಟದಲ್ಲಿ ಕೆಲವಾರು ಅಂಶಗಳನ್ನು ನಮೂದು ಮಾಡಿದೆ. 47ನೇ ಪುಟದಲ್ಲಿ (2) (ii) (a) ನಲ್ಲಿ promotion of educational, economic, social, cultural and other interests of Scheduled Castes and other Backward classes, ಎಂದು ಹೇಳಿದ್ದಾರೆ. ಅನಂತರ 96ನೇ ಪುಟದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂಬ ಬಗ್ಗೆ ಅರ್ಥ ಹೇಳುತ್ತಾ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನ್ನು ಒಂದೇ ರೀತಿಯಲ್ಲಿ ಇದರಲ್ಲಿ ಹೇಳಿದ್ದಾರೆ. ಎಲ್ಲಾ ಕಡೆಯೂ ಅದನ್ನೂ ಕೂಡ ಮಾಡಲಿಲ್ಲ. ಇದು ಸರಿಯಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಎರಡನ್ನೂ ಹೇಳಿದ್ದಾರೆ. ಆದರೆ ಈ ಮಸೂದೆಯಲ್ಲಿ ಡೆಫಿನಿಷನ್ ಕೊಟ್ಟಿರುವ ಪ್ರಕಾರ ಸರಿಯಾಗಿಲ್ಲ. ಆದ್ದರಿಂದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಒಂದೇ ಅಲ್ಲ, ಅದನ್ನು ಪ್ರತ್ಯ-ಪ್ರತ್ಯೇಕವಾಗಿ ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಮತ್ತೊಂದು ವಿಚಾರ. ಪಂಚಾಯತಿ ರಚನೆಯ ಬಗ್ಗೆ ಈ ಮಸೂದೆಯಲ್ಲಿ ಒಂದೂವರೆ ಸಾವಿರ ಜನಸಂಖ್ಯೆ ಇರತಕ್ಕ ಪಂಚಾಯತಿಯಲ್ಲಿ 9 ಜನ ಸದಸ್ಯರು ಇರಬೇಕೆಂದು ನಿರ್ಣಯಮಾಡಿದ್ದಾರೆ. ಆ ವಿಚಾರದಲ್ಲಿ ನನ್ನ ಅಭಿಪ್ರಾಯ ಈ ರೀತಿ ಇದೆ. ಎರಡು ಸಾವಿರ ಮತ್ತು ಅದಕ್ಕಿಂತ ಕಡಿಮೆ ಇರತಕ್ಕಂಥ ಜನಸಂಖ್ಯೆಯುಳ್ಳ ಪಂಚಾಯತಿಯಲ್ಲಿ 7 ಜನ ಸದಸ್ಯರುಗಳೂ, ಮೂರು ಸಾವಿರಕ್ಕೆ 9 ಜನ ಸದಸ್ಯರುಗಳೂ, ನಾಲ್ಕು ಸಾವಿರಕ್ಕೆ 11 ಜನ ಸದಸ್ಯರುಗಳೂ, ಐದು ಸಾವಿರಕ್ಕೆ 15 ಜನ ಸದಸ್ಯರುಗಳೂ ಇರಬೇಕು. ಏಕೆಂದರೆ 13 ನಂಬರ್ ಒಳ್ಳೆಯದಲ್ಲವೆಂದು ಯಾರೋ ಹೇಳಿದ್ದನ್ನು ಕೇಳಿದ್ದೇನೆ. ನನ್ನ ಅನುಭವದ ಪ್ರಕಾರ 13 ಜನ ಸದಸ್ಯರುಗಳು ಇರತಕ್ಕ ಪಂಚಾಯತ್ ಸಂಸ್ಥೆಗಳು ಎಷ್ಟೋ ಇವೆ. ಅವು ಒಂದೂ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಏಕೆಂದರೆ ಎಲ್ಲಾ ಪಂಚಾಯತಿಗಳೂ ಬಹಳ ಶಿಥಿಲಗೊಂಡಿವೆ, ತುಂಬಾ ಲಿಟಿಗೇಷನ್. ಆದ್ದರಿಂದ 13 ಎಂದು ಹೇಳಿರುವ ನಂಬರನ್ನು ತಪ್ಪಿಸಿ 7, 9, 11, 15 ಮತ್ತು 5 ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇದ್ದರೆ 15 ಮಂದಿ ಅಥವಾ 19 ಮಂದಿ ಇಡಬೇಕು. ಸ್ಥಳೀಯ ಸಂಸ್ಥೆಗಳಾದ ಪಂಚಾಯತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟ ಕೆಲಸಗಳನ್ನು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಕೊಡಬೇಕು. ಏಕೆಂದರೆ ಇದನ್ನು ಇಲಾಖೆಯವರಿಗೇ ಕೊಡುವ ಬದಲು ಸ್ಥಳೀಯ ಸಂಸ್ಥೆಗಳಿಗೆ ಕೊಡುವುದು ಒಳ್ಳೆಯದು. ಇದರಲ್ಲಿ ಬರೀ ಇಲಾಖೆಯವರೇ ಕೂತುಕೊಂಡು ಅವುಗಳ ಆಡಳಿತವನ್ನು ಮಾಡುವುದು ಸರಿ ಆಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಕ್ಷೇತ್ರದಿಂದ ಬಂದ ಸದಸ್ಯರು ಆಯಾಯ ಪ್ರದೇಶಗಳ ಪರಿಸ್ಥಿತಿಯನ್ನು ತಿಳಿಸಿದಾಗ ಅವರಿಗಿರುವ ಸಾಧಕ-ಬಾಧಕಗಳನ್ನು ಹೇಳಿ ಹೆಚ್ಚು ತಿಳುವಳಿಕೆ ಕೊಡುವಂತಹ ಸ್ಥಳೀಯ ಸಂಸ್ಥೆಗಳಿಗೆ ಈ ಮಸೂದೆಯಲ್ಲಿರುವಂತೆ ಸ್ಥಾನಗಳನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಸ್ಕೂಲುಗಳ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಪ್ರೈಮರಿ ಸ್ಕೂಲುಗಳನ್ನು ತಾಲ್ಲೂಕು ಬೋರ್ಡುಗಳಿಗೂ ಮತ್ತು ಹೈಸ್ಕೂಲುಗಳನ್ನು ಜಿಲ್ಲಾ ಬೋರ್ಡುಗಳಿಗೂ ಕೊಡಬೇಕೆಂದು ಹೇಳಿದ್ದಾರೆ. ನಾನು ಹೇಳುವುದಿಷ್ಟೇ. ಇದು ಸರಿ. ಇವುಗಳಿಗೆ ಸಂಬಂಧಪಟ್ಟ ಹಾಗೆ ಗ್ರಾಂಟು, ಸಾಲ ಇತ್ಯಾದಿಯನ್ನು ಸ್ಟೇಟ್ ಎಜುಕೇಷನ್ ಬಜೆಟ್‌ನಿಂದ ಈಗ ಎಷ್ಟು ಕೊಡುತ್ತಿದ್ದಾರೋ ಅವೆಲ್ಲವನ್ನೂ ಈ ಸಂಸ್ಥೆಗಳ ಮೂಲಕ ಹೆಚ್ಚಿಗೆ ಕೊಡಬೇಕೆಂದು ನಾನು ಹೇಳುತ್ತೇನೆ. ಆಗ ಅವುಗಳ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವಂತೆ ಆಗುತ್ತವೆ.

ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

†Sri N. O. SOMAJI (Belgaum II).—

[*Spoke in Marathi.*]

†ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಅಧ್ಯಕ್ಷರೇ, ಈ ದಿವಸ ಗ್ರಾಮ ಪಂಚಾಯತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತುಗಳಿಗೆ ಸಂಬಂಧಪಟ್ಟಂತೆ ಶ್ರೀಮಾನ್ ಕೊಂಡಜ್ಜಿ ಬಸಪ್ಪ ಸಮಿತಿಯವರು ಕೊಟ್ಟ ವರದಿಯ ಆಧಾರದ ಮೇಲೆ ಮಾನ್ಯ ಸಚಿವರು ತಂದಿರುವ ಈ ಮಸೂದೆಯನ್ನು ನಾನು ಸ್ವಾಗತಮಾಡಿ ಕೆಲವು ವಿಷಯಗಳನ್ನು ತಮ್ಮ ಮುಂದೆ ಈ ದಿವಸ ಹೇಳಲು ಬಯಸುತ್ತೇನೆ.

ಮೊದಲನೆಯದಾಗಿ, ಗ್ರಾಮ ಪಂಚಾಯಿತಿಗಳ ವಿಚಾರ. ಗ್ರಾಮ ಪಂಚಾಯಿತಿಗಳು ಇದುವರೆಗೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಅದರಲ್ಲಿ ಅನೇಕ ಲೋಪದೋಷಗಳಿವೆ ಎಂದು ಕೆಲವರೂ, ಅವು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿವೆ ಎಂದು ಕೆಲವರೂ ಹೇಳಿದ್ದಾರೆ. ನಾನು ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿ ಸುಮಾರು 15 ವರ್ಷಕಾಲ ಕೆಲಸ ಮಾಡಿದ್ದೇನೆ. ಈಗ ಗ್ರಾಮ ಪಂಚಾಯಿತಿಗಳ ಕೆಲಸಗಳು ಚೆನ್ನಾಗಿ ಚೆನ್ನಾಗಿ ನಡೆಯಬೇಕಾದರೆ ಹೆಚ್ಚಿನ ಸೌಲಭ್ಯಗಳನ್ನು ಅವುಗಳಿಗೆ ಕೊಡಬೇಕು. ಗ್ರಾಮ ಪಂಚಾಯಿತಿಗಳಲ್ಲಿ, ಕಾರ್ಯದರ್ಶಿಗಳಿಲ್ಲ, ಸಂಬಂಧಪಟ್ಟ ಅಧಿಕಾರವರ್ಗವಿಲ್ಲದ ಗ್ರಾಮ ಪಂಚಾಯಿತಿಗಳ ಕೆಲಸಗಳು ಈ ಹೊತ್ತು ಕುಂದಲಿಕ್ಕೆ ಕಾರಣವಾಗಿದೆಯೇ ಹೊರತು ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಹಣ ಸೌಲಭ್ಯ ಮತ್ತು ಅಧಿಕಾರವರ್ಗದ ಸೌಲಭ್ಯ ಇವುಗಳನ್ನು ಕೊಟ್ಟಿದ್ದೇ ಆದರೆ ಇನ್ನೂ ಚೆನ್ನಾಗಿ ಕೆಲಸ ಮಾಡಿ ಆ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯವಾದೀತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ಸರ್ಕಾರ ಜಿಲ್ಲಾ ಪರಿಷತ್ತಿಗೆ ಹೆಚ್ಚು ಅಧಿಕಾರವನ್ನು ಕೊಡುವ ಬದಲು ಗ್ರಾಮ ಪಂಚಾಯಿತಿಗೆ ಕೊಡತಕ್ಕದ್ದು ಮುಖ್ಯವೆಂದು ನಾನು ಹೇಳುತ್ತೇನೆ. ಯಾವುದೇ ಒಂದು ಮನೆಯನ್ನು ಕಟ್ಟಬೇಕಾದರೂ ಕೂಡ ಅದರ ತಳಪಾಯ ಭದ್ರವಾಗಿ ಇರಬೇಕು. ತಳಪಾಯ ಭದ್ರವಾಗಿಲ್ಲದೆ ಹೋದರೆ ಅದು ನಿಲ್ಲಲಾರದು. ಒಂದು ಸಸಿಯನ್ನು ನೆಟ್ಟರೆ ಅದನ್ನು ಚೆನ್ನಾಗಿ ನೋಡಿಕೊಂಡು ಪೋಷಣೆ ಮಾಡಿದರೆ ಅದರ ಫಲ ಎಲ್ಲರಿಗೂ ಕೂಡ ಸಿಕ್ಕುತ್ತದೆ. ಆದ್ದರಿಂದ ಯಾವುದೇ ಸಸಿಯನ್ನು ನೆಟ್ಟರೂ ಕೂಡ ಅದು ಗಿಡವಾಗಿ ಬೆಳೆಯುವವರೆಗೂ ಚೆನ್ನಾಗಿ ಬೆಳೆಸಬೇಕು ಎನ್ನುವುದು ಮುಖ್ಯವಾದ ಕರ್ತವ್ಯ. ಅದನ್ನು ಬಿಟ್ಟು ಸಸಿಯನ್ನೇ ನೆಡದೆ ಅದರ ಫಲ ಸಿಕ್ಕಬೇಕು ಎಂದರೆ ಹೇಗೆ ಸಿಕ್ಕುತ್ತವೆ ? ಅದೇ ರೀತಿ ಗ್ರಾಮ ಪಂಚಾಯಿತಿಗೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕದ್ದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಅಧಿಕಾರವರ್ಗವನ್ನೂ ಕೂಡ ಅಷ್ಟೇ ಆತುರದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕು.

ಇನ್ನು ತಾಲ್ಲೂಕು ಬೋರ್ಡುಗಳ ವಿಚಾರ ? ತಾಲ್ಲೂಕು ಬೋರ್ಡುಗಳು ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿವೆ. ಅದಕ್ಕೆ ಕೊಡುವ ಹಣ ಸಾಲದು. ಇನ್ನೂ ಹೆಚ್ಚಿನ ಹಣವನ್ನು

ಕೊಟ್ಟರೆ ಇನ್ನೂ ಹೆಚ್ಚಿನ ಕೆಲಸವಾಗಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾಲ್ಲೂಕು ಬೋರ್ಡು ಆದ ನಂತರ ಜಿಲ್ಲಾ ಪರಿಷತ್ತು ಇರಬೇಕು ಎನ್ನುವ ವಿಚಾರವನ್ನು ಇವರಲ್ಲಿ ತಂದಿದ್ದಾರೆ. ಈಗ ತಾಲ್ಲೂಕು ಬೋರ್ಡಿಗೆ ಸುಮಾರು 45 ಸಾವಿರದಿಂದ 80 ಸಾವಿರದವರೆಗೂ ಅಧಿಕಾರಿಗಳ ಸಂಬಳ ಕೊಡತಕ್ಕ ಖರ್ಚು ಬರುತ್ತದೆ. ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಇದೆ. ಜಿಲ್ಲಾ ಪರಿಷತ್ತನ್ನು ಕೂಡ ಚುನಾವಣೆಗಳ ಮುಖಾಂತರ ರಚನೆ ಮಾಡಿದರೆ ಅವರ ಖರ್ಚು ಲಕ್ಷಾಂತರ ರೂಪಾಯಿವರೆಗೂ ಬಂದೀತು ಎಂದು ನಾವು ಯೋಚನೆ ಮಾಡಬೇಕಾಗಿದೆ. ಜಿಲ್ಲಾ ಪರಿಷತ್ತುಗಳಿಗೆ ಬದಲಾಗಿ ಈಗಿರುವ ಸಲಹಾ ಸಮಿತಿಗಳನ್ನೇ ಇನ್ನು ಮುಂದೆಯೂ ಇಟ್ಟುಕೊಂಡು ತಾಲ್ಲೂಕು ಬೋರ್ಡು ಮತ್ತು ಪಂಚಾಯಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇ ಆದರೆ ? ತಾಲ್ಲೂಕುಗಳಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗಬಹುದು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಆದುದರಿಂದ ಈಗ ಜಿಲ್ಲಾ ಪರಿಷತ್ತುಗಳನ್ನು ಕೈಬಿಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಸ್ವಾಮಿ, ಚುನಾವಣೆಗಳ ವಿಚಾರ. ಪ್ರತ್ಯಕ್ಷ ಚುನಾವಣೆ ಮತ್ತು ಅಪ್ರತ್ಯಕ್ಷ ಚುನಾವಣೆ ಮೂಲಕ ಸದಸ್ಯರನ್ನು ಆರಿಸುವುದಕ್ಕೆ ಇದರಲ್ಲಿ ಅವಕಾಶ ಮಾಡಿ ಅರ್ಧ ಭಾಗ ಜನರು ಪ್ರತ್ಯಕ್ಷ ಚುನಾವಣೆಗಳಲ್ಲಿಯೂ ಮತ್ತು ಉಳಿದ ಅರ್ಧಭಾಗ ಜನರು ಅಪ್ರತ್ಯಕ್ಷ ಚುನಾವಣೆಗಳಲ್ಲಿಯೂ ಆರಿಸಿ ಬರತಕ್ಕದ್ದು ಎಂದು ಹಾಕಿದ್ದಾರೆ. ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಅಪ್ರತ್ಯಕ್ಷ ಚುನಾವಣೆಗಳಾದರೆ ಲಂಚ ಷುರುವತ್ತುಗಳಿಗೆ ಅವಕಾಶವಾಗುತ್ತದೆ, ಪ್ರತ್ಯಕ್ಷ ಚುನಾವಣೆಗಳಾದರೆ ಅಷ್ಟು ಆಗುವುದಿಲ್ಲ ಎಂದು ಹೇಳಿದರು. ಪ್ರತ್ಯಕ್ಷ ಚುನಾವಣೆಗಳಲ್ಲಿಯೂ ಲಂಚ ಷುರುವತ್ತುಗಳಿಗೆ ಅವಕಾಶವಾಗುತ್ತದೆಂದು ಮಾನ್ಯ ಸದಸ್ಯರೇ ಒಪ್ಪಿಕೊಂಡಿರುವುದು ಸಂತೋಷಕರವಾದ ವಿಚಾರ. ಆದುದರಿಂದ ಈಗ ಮಸೂದೆಯಲ್ಲಿರುವಂತೆಯೇ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಚುನಾವಣೆಗಳನ್ನು ನಡೆಸುವುದು ಒಳ್ಳೆಯದು.

ಇದು ಪೌರ ಸಭೆಗಳಲ್ಲಿರುವ ಮತದಾರರ ಪಟ್ಟಿಯಲ್ಲಿರತಕ್ಕವರು ಕೂಡ ತಾಲ್ಲೂಕು ಬೋರ್ಡು ಚುನಾವಣೆಗಳಿಗೆ ನಿಲ್ಲತಕ್ಕ ಒಂದು ಅವಕಾಶ ಈ ಮಸೂದೆಯಲ್ಲಿದೆ. ಇದು ಸರಿಯಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಜನ, ಅಲ್ಲಿಯ ವೋಟರುಗಳ ಪಟ್ಟಿಯಲ್ಲಿರತಕ್ಕ ಜನ ಟೌನ್ ಮುನಿಸಿಪಾಲಿಟಿಗಳಲ್ಲಿ ಚುನಾವಣೆಗೆ ನಿಲ್ಲಲಿಕ್ಕೆ ಅವಕಾಶವಿಲ್ಲ. ಹಾಗೆಯೇ ತಾಲ್ಲೂಕು ಬೋರ್ಡು ಚುನಾವಣೆಗಳಲ್ಲಿ ಕೂಡ ಟೌನ್‌ಗಳಲ್ಲಿ ವಾಸ ಮಾಡತಕ್ಕ ಮತ್ತು ಟೌನಿನ ಮತದಾರರ ಪಟ್ಟಿಯಲ್ಲಿರತಕ್ಕವರು ಸದಸ್ಯಸ್ಥಾನಕ್ಕೆ ನಿಲ್ಲುವುದಕ್ಕೆ ಅವಕಾಶ ಇರಬಾರದು. ಈ ವಿಧಿಯನ್ನು ತಿದ್ದುಪಾಟು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ.

ತಾಲ್ಲೂಕು ಬೋರ್ಡಿನ ಪ್ರದೇಶದ ಭೂಕಂದಾಯದ ಉತ್ಪತ್ತಿಯನ್ನು ಜನಸಂಖ್ಯೆಯ ಆಧಾರದ ಮೇಲೆ ಹಂಚಬೇಕು ಎನ್ನುವ ವಿಚಾರವಿದೆ. ಇದು ಸರಿಯಲ್ಲ. ಆಯಾ ತಾಲ್ಲೂಕಿನ ಉತ್ಪತ್ತಿಯನ್ನು ಆಯಾ ತಾಲ್ಲೂಕಿಗೇ ಕೊಡತಕ್ಕದ್ದು ಸೂಕ್ತ.

ಚುನಾವಣೆ ವಿಚಾರದಲ್ಲಿ ಇನ್ನೂ ಕೆಲವು ವಿಚಾರಗಳನ್ನು ಹೇಳುತ್ತೇನೆ. ಪಂಚಾಯಿತಿಯ ಸದಸ್ಯರಿಂದ ಚುನಾವಣೆ ಆಗತಕ್ಕದ್ದು, ಇದರಲ್ಲಿ ಕಂಡಂತೆ; ಅರ್ಧಭಾಗದ ಸದಸ್ಯರು ಮಾತ್ರ. ಹಾಗಾದರೆ ತಾಲ್ಲೂಕು ಬೋರ್ಡಿನ ಮತ್ತು ಪಂಚಾಯಿತಿಯ ಹೊಂದಾಣಿಕೆ, ಅದರ ಕಷ್ಟ ಸುಖ, ಅಲ್ಲಿಯ ಪರಿಸ್ಥಿತಿ ಇದನ್ನು ತಿಳಿದುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಅನೇಕ ಸದಸ್ಯರು ಕೂಡ ಹೆಚ್ಚು ಕೆಲಸ ಮಾಡತಕ್ಕ ಒಂದು ವ್ಯವಸ್ಥೆ ಆಗತಕ್ಕದ್ದು ಕೂಡ ಒಳ್ಳೆಯದು.

ನೇರವಾದ ಚುನಾವಣೆಯಾದರೆ ಅನುಕೂಲವೆಂದು ಕೆಲವು ಸದಸ್ಯರು ತಿಳಿಸಿದ್ದಾರೆ. ಶಾಸನ ಸಭೆಯ ಸದಸ್ಯರ ಚುನಾವಣೆಯ ಕಷ್ಟಸುಖಗಳನ್ನು ನಾವೆಲ್ಲರೂ ಅನುಭವಿಸಿದ್ದೇವೆ. ನೇರವಾಗಿ ಆಗತಕ್ಕ ಚುನಾವಣೆಯೆಂದರೆ, ಸುಮಾರು 50-60 ಸಾವಿರ ಪ್ರಜಾಸಂಖ್ಯೆಗೆ ಒಂದೊಂದು ಕ್ಷೇತ್ರ ವಾಗುತ್ತದೆ. ಬಿರುಸಿನಿಂದ ಚುನಾವಣೆ ನಡೆಯುತ್ತದೆ. ಪ್ರತಿ ಐದು ವರ್ಷಕ್ಕೊಮ್ಮೆ ಅಸೆಂಬ್ಲಿ ಮತ್ತು ತಾಲ್ಲೂಕು ಬೋರ್ಡು ಚುನಾವಣೆ ಬರುವುದು ಸಹಜ. ಈಗ ಏನಾಗಿದೆಯೆಂದರೆ, ಅನೇಕ ತಾಲ್ಲೂಕುಗಳಲ್ಲಿ ಮತ್ತು ಹಳ್ಳಿಗಳಲ್ಲಿ ಗುಂಪು ಮನೋಭಾವ ಮತ್ತು ಮನಸ್ತಾಪ ಹೆಚ್ಚಾಗುತ್ತಿದೆ. ಆದುದರಿಂದ ನೇರವಾಗಿ ಆಗತಕ್ಕ ಚುನಾವಣೆಯನ್ನು ಕಡಮೆ ಮಾಡುವುದು ಈ ಸಂದರ್ಭದಲ್ಲಿ ಒಳ್ಳೆಯದೆಂದು ಹೇಳುತ್ತೇನೆ. ಜಿಲ್ಲಾಪರಿಷತ್ತನ್ನು ಒಂದುವೇಳೆ ಕೈಬಿಡುವುದಾದರೆ ತಾಲ್ಲೂಕು ಬೋರ್ಡು ಚುನಾವಣೆ ಒಂದು ಮಾತ್ರ ನಡೆಯುವುದು ಸಹಜ. ಎಂದಮೇಲೆ ಅಂತಹ ಬಿರುಸಿನಿಂದ ಚುನಾವಣೆ ನಡೆಯುವುದಿಲ್ಲ, ಆಯಾ ಕ್ಷೇತ್ರಕ್ಕೆ ಚುನಾವಣೆ ನಡೆಯುತಕ್ಕ ಸಂದರ್ಭಬರುತ್ತದೆ. ಆದುದರಿಂದ ಅರ್ಧ ನೇರವಾಗಿ, ಇನ್ನರ್ಧ ಆ ತಾಲ್ಲೂಕಿನ ಪಂಚಾಯಿತಿಗಳಿಂದ ಚುನಾವಣೆ ಮಾಡುವುದು ಒಳ್ಳೆಯದೆಂದು ಹೇಳುತ್ತಾರೆ.

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇನ್ನು ಜಿಲ್ಲಾಪರಿಷತ್ತುಗಳ ವಿಷಯ, ಸಧ್ಯದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಕಷ್ಟವಾಗಿದೆ. ಈಗಾಗಲೇ ಕಂದಾಯವನ್ನು ಹೆಚ್ಚುಮಾಡುತ್ತಿದ್ದಾರೆಂಬ ಕೂಗುಗಳೂ, ಠರಾವುಗಳೂ ಹಳ್ಳಿಗಳಿಂದ ಬರುತ್ತಿದೆ. ಹೀಗಿರುವಾಗ ಸಧ್ಯಕ್ಕೆ ಜಿಲ್ಲಾಪರಿಷತ್ತನ್ನು ಮಾಡಿ ಲಕ್ಷಾಂತರ ರೂಪಾಯಿಗಳನ್ನು ಜೀಪುಗಳು, ಅಧಿಕಾರಿಗಳ ಸಂಬಳ ಮತ್ತು ಇತರ ಬಾಬುಗಳಿಗೆ ಖರ್ಚುಮಾಡು ದಕ್ಕೆ ಬದಲು ಆ ಹಣವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು ಹೆಚ್ಚು ಅಧಿಕಾರವನ್ನು ಕೊಟ್ಟು ಕೆಲಸ ಮಾಡಿಸುವುದು ಒಳ್ಳೆಯದು. ಈಗ ಯಾವ ರೀತಿ ತಾಲ್ಲೂಕು ಬೋರ್ಡು ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳೂ ಕೆಲಸ ಮಾಡುತ್ತಿದ್ದಾರೋ ಹಾಗೆಯೇ ಜಿಲ್ಲಾಸಲಹಾಸಮಿತಿಯ ಮೂಲಕ, ಜಿಲ್ಲಾಧಿಕಾರಿಗಳ ಮೂಲಕ ಕೆಲಸ ಮಾಡಬಹುದು. ಈ ದೃಷ್ಟಿಯಿಂದ ಸಧ್ಯಕ್ಕೆ ಜಿಲ್ಲಾಸಮಿತಿಯ ಪರಿಷತ್ತನ್ನು ಕೈಬಿಡುವುದು ಒಳ್ಳೆಯದೆಂದು. ಈ ಸಂದರ್ಭದಲ್ಲಿ ತಿಳಿಸುತ್ತಾ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಮಾನ್ಯ ಸಭಾಧ್ಯಕ್ಷಿಣಿಯರೇ, ನಮ್ಮ ಮುಂದಿರ ತಕ್ಕ ಮೈಸೂರು ಪಂಚಾಯಿತಿ ರಾಜ್ಯ ಮಸೂದೆಯಮೇಲೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಸ್ಥಳೀಯ ಸಂಸ್ಥೆಗಳ ಆಡಳಿತ ನಮ್ಮ ದೇಶಕ್ಕೆ ಬಹಳ ಕಾಲದಿಂದ ಬಂದಿರುವುದು. ಹಳೆಯ ಮೈಸೂರು ರಾಜ್ಯದಲ್ಲಿ ಸುಮಾರು 1888 ರಿಂದಲೂ ಒಂದು ರೂಪದಲ್ಲಿಲ್ಲ, ಇನ್ನೊಂದು ರೂಪದಲ್ಲಿ ಜಾರಿಯಲ್ಲಿ ಬಂದಿದೆ. ಅಗಿನಿಂದಲೂ ಸ್ಥಳೀಯಸಂಸ್ಥೆಗಳು ಕ್ರಮೇಣ ಬೆಳೆದುಕೊಂಡು ಬಂದಿದೆ. ಈ ದಿವಸ ಯಾವ ಸ್ಥಿತಿಗೆ ಬಂದಿವೆ ಎಂದರೆ, ಅವೇ ಒಂದು ರಾಜ್ಯ ಎನ್ನುವ ಮಾತನ್ನು ಅನ್ವಯಿಸತಕ್ಕ ಸ್ಥಿತಿಗೆ ಏರಿವೆ. ಇದು ಬಹಳ ಸಂತೋಷದ ವಿಚಾರ. ಹೆಚ್ಚಿನ ಅಧಿಕಾರ ಪ್ರಜೆಗಳಿಗೆ ಸಿಕ್ಕಬೇಕು, ಅವರೇ ಸ್ವತಃ ರಾಜ್ಯಭಾರ ಮಾಡಬೇಕು, ತಮ್ಮ ಕಷ್ಟಸುಖಗಳನ್ನು ತಾವೇ ನೋಡಿಕೊಳ್ಳಬೇಕು, ಅವರ ಸುಖದುಃಖಗಳನ್ನನುಭವಿಸಬೇಕು ಎಂದು ಅನೇಕ ಜನರು ಕೇಳುತ್ತಾರೆ. ಹೀಗೆ ಮಾಡುವುದರಿಂದ ಜನ ಜಾಗ್ರತಿ ಬೆಳೆಯುತ್ತದೆ. ದೇಶದಲ್ಲಿ ಪ್ರಜಾಧಿಕಾರ ಉತ್ತಮ ರೀತಿಯಲ್ಲಿ ಬೆಳೆದು, ನಾವೇನು ಪ್ರಜಾರಾಜ್ಯವನ್ನು ಕಟ್ಟಬೇಕೆಂದು ಹೊರಟದ್ದೇವೋ ಅದು ಸುಗಮವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಾರೆ. ಆದಷ್ಟು ಜಾಗ್ರತೆ ಈ ಪ್ರಜಾರಾಜ್ಯ ಒಂದು ಮಾದರಿಯಾಗಿ ನಡೆಯಲು ಅನುಕೂಲ ವಾಗಬೇಕೆಂಬ ಮಹತ್ವಾಕಾಂಕ್ಷೆ ಇದೆ. ಆದರೂ ಕೂಡ ನಮ್ಮ ಈ ರಾಜ್ಯ ಇನ್ನೂ ಅನೇಕ ವಿಷಯ ಗಳಲ್ಲಿ ಹಿಂದುಳಿದಿರುವ ರಾಜ್ಯ. ಗ್ರಾಮಾಂತರಗಳ ಸ್ಥಿತಿಗತಿಗಳು ಯಾವ ಮಟ್ಟದಲ್ಲಿರಬೇಕಾಗಿತ್ತೋ ಇನ್ನೂ ಅ ಮಟ್ಟದಲ್ಲಿಲ್ಲವೆಂದು ಅನೇಕ ಸಂದರ್ಭಗಳಲ್ಲಿ ವ್ಯಸನಪಟ್ಟಿರತಕ್ಕವರಲ್ಲಿ ನಾನೂ ಒಬ್ಬ. ಈಗಲೂ ಕೂಡ ಗ್ರಾಮಾಂತರಗಳ ಜನರಲ್ಲಿ ಹೊಂದಾಣಿಕೆಯಿಲ್ಲ. ಜನರು ತಮ್ಮ ಗ್ರಾಮಗಳ ಸ್ಥಳೀಯ ಕೆಲಸಕಾರ್ಯಗಳನ್ನು ತಾವೇ ನಿರ್ವಹಿಸತಕ್ಕ ಶಕ್ತಿ ಹೆಚ್ಚು ಜನರಲ್ಲಿ ಇನ್ನೂ ಬಂದಿಲ್ಲ. ಆದಕಾರಣ ಗ್ರಾಮದಲ್ಲಿ ಹುಟ್ಟತಕ್ಕ ಸಣ್ಣಪುಟ್ಟ ವ್ಯಾಜ್ಯಗಳನ್ನು ಅಲ್ಲೇ ಫೈಸಲು ಮಾಡಿಕೊಳ್ಳಿ ಎಂದರೆ, ಅದು ಬೇಡಿ ಎಂದು ಹೇಳುವ ವಿಷಾದಕರವಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಚುನಾವಣೆಗಳು ಮುಂತಾದ ಕಾರಣಗಳಿಂದ ಹಳ್ಳಿಗಾಡಿನಲ್ಲಿ ಜನಗಳಲ್ಲಿ ವಿಪರೀತ ವೈಷಮ್ಯಗಳು ಬೆಳೆದಿವೆ. ಜನರಲ್ಲಿ ಪರಸ್ಪರ ಪ್ರೀತಿವಿಶ್ವಾಸ ಮತ್ತು ಹೊಂದಾಣಿಕೆ ಇರುವ ಗ್ರಾಮಗಳು ನನಗೆ ಕಾಣುತ್ತಿಲ್ಲ. ಅಲ್ಲದೆ ಜನರ ಶಿಕ್ಷಣ ಮಟ್ಟ ಮತ್ತು ತಿಳಿವಳಿಕೆಯಮಟ್ಟ ಇವುಗಳನ್ನನುಸರಿಸಿ ಅವರ ಕೈಗೆ ಅಧಿಕಾರ ವನ್ನು ಕೊಡಬೇಕಾಗುತ್ತದೆ. ಮನೆಯ ಮಕ್ಕಳು ಅಧಿಕಾರವನ್ನು ಕೇಳುತ್ತಾರೆಂದು ಕಬ್ಬಿಣದ ಪೆಟ್ಟಿಗೆಯ ಬೀಗದಕೈ ಕೇಳುತ್ತಾರೆಂದು ತಂದೆಯಾದವನು ಅವರ ಕೈಗೆ ಅದನ್ನು ಕೊಟ್ಟು ತಮಾಷೆ ನೋಡುತ್ತ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಅವರು ಎಷ್ಟುಮಟ್ಟಿಗೆ ಅಧಿಕಾರವನ್ನು ನಿರ್ವಹಿಸಿ ಕೊಳ್ಳಬಹುದು, ನಿರ್ವಹಿಸಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆಯೆ ಎಂದು ನೋಡಬೇಕು. ಅನೇಕರು ಅಧಿಕಾರವನ್ನು ಕೊಡಿ, ನಾವು ಚಲಾಯಿಸುತ್ತೇವೆ ಎಂದರೆ, ಹಾಗೆ ಕೊಟ್ಟು ಈಜು ತಿಳಿಯದೇ ಇರುವವರನ್ನು ಕೊಳಕ್ಕೆ ತಳ್ಳಿ ಈಜು ಕಲಿಯಲಿ ಎಂದು ತಮಾಷೆ ನೋಡುತ್ತ ಕುಳಿತ ಹಾಗಾಗುತ್ತದೆ. ಆದುದರಿಂದ ಅಧಿಕಾರ ಕೊಡುವಾಗ ಸ್ವಲ್ಪ ವಿವೇಚನೆಯಿಂದ ಜನರ ತಿಳಿವಳಿಕೆಯ ಮಟ್ಟ, ದೇಶದ ಸ್ಥಿತಿಗತಿ ಇವುಗಳನ್ನು ನೋಡಿ ಕೊಡಬೇಕೇವಿನಾ ಯಾರೋ ಹೇಳಿದರು ಅಥವಾ ಇನ್ನೊಂದು ದೇಶದಲ್ಲಿ ಮಾಡಿದ್ದಾರೆ, ಆದುದರಿಂದ ಇಲ್ಲಿಯೂ ಪ್ರಜೆಗಳಿಗೆ ಅಧಿಕಾರವನ್ನು ವಹಿಸಿ ಕೊಡುತ್ತೇವೆ ಎಂದು ಹೇಳಿದರೆ ಸರಿಯಲ್ಲ.

3-30 P. M.

ಸ್ವಾಮಿ, ಈಗ ನಮ್ಮ ಮುಂಡೆ ಇರತಕ್ಕಂತ ಈ ಕಾನೂನಿನಲ್ಲಿ ವಿಶೇಷ ಅಧಿಕಾರ ಪ್ರಜೆಗಳಿಗೆ ಕೊಡಬೇಕು ಹಾಗೆ ಎಂದು ಹೇಳಿ ನಾವು ಹೊರಟಿದ್ದೇನೆ. ಆದರೆ ಇದು ಎಷ್ಟರಮಟ್ಟಿಗೆ ಸಮಂಜಸ

ವಾಗಿದೆ ಎನ್ನತಕ್ಕಂಥ ವಿಚಾರವನ್ನು ಸೆಲೆಕ್ಟ್ ಕಮಿಟಿ ಸದಸ್ಯರು ದೀರ್ಘವಾಗಿ ಯೋಚನೆ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಇದನ್ನು ತಿಳಿಸಲು ಬಯಸುತ್ತೇನೆ. ಉದಾಹರಣೆ ಹೇಳುವುದಾದರೆ ಜಿಲ್ಲಾಪರಿಷತ್ತು ಎಂದು ನಾವು ಏನು ಮಾಡುತ್ತೇವೆಯೋ ಅದು ಬಹುಮಟ್ಟಿಗೆ ನಮ್ಮ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿ ಮೊಟಕು ಮಾಡುತ್ತದೆ ಎಂದು ಹೇಳುತ್ತೇನೆ. ಇದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅಧಿಕಾರ ಇದ್ದರೆ. ಏನೋ ಒಂದು ರೀತಿಯಲ್ಲಿ ನಾವು ಅಂದುಕೊಂಡಂತೆ ಜನಗಳ ವ್ಯಕ್ತಿತ್ವ ಬೆಳೆಸಲು ಸಾಧ್ಯವಾಗುತ್ತದೆ. ಆದರೆ ಈ ಕಾನೂನು ಪ್ರಕಾರ ತಾಲ್ಲೂಕುಮಟ್ಟಕ್ಕಿಂತ ಹೆಚ್ಚಾಗಿ ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ಅಧಿಕಾರ ಕೊಡುವುದಕ್ಕೆ ನಾವು ಹೊರಟಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಅಧಿಕಾರಕೊಟ್ಟರೆ ಆ ತಾಲ್ಲೂಕಿನಲ್ಲಿ ಇರತಕ್ಕಂಥ ಮುಂದಾಳುಗಳು ತಮ್ಮ ಸ್ಥಿತಿಗತಿಗಳನ್ನು ಅರಿತುಕೊಂಡು ಕೆಲಸಮಾಡಲು ಸಾಧ್ಯವಾಗುತ್ತದೆ. ಜಿಲ್ಲಾಮಟ್ಟದಲ್ಲಿಯಾದರೆ ಅಲ್ಲಿ ಇರತಕ್ಕಂಥ ಬುದ್ಧಿವಂತರಾದ ಪ್ರಭಾವಶಾಲೀ ಮುಂದಾಳು ಆಗಿರತಕ್ಕಂಥವರು ಆಡಳಿತ ನಡೆಸಲು ಪ್ರಾರಂಭಮಾಡುತ್ತಾರೆ. ಅವರ ಆಡಳಿತದಿಂದ ಜಿಲ್ಲೆಗೆ ಮಹದುಪಕಾರವಾಗಬಹುದು. ಇಲ್ಲದೇ ಹೋದರೆ ಅದರಿಂದ ಆಗತಕ್ಕಂಥ ಕೆಡುಕು ಅಪಾರವಾಗುತ್ತದೆ ಹಾಗೆ ಎಂದು ನನ್ನ ಅಭಿಪ್ರಾಯ. ಹಿಂದಕ್ಕೆ ಜಿಲ್ಲಾಬೋರ್ಡ ಆಡಳಿತ ಹೇಗೆ ಇತ್ತು ಎಂಬುದನ್ನು ನಾವು ನೋಡಿದ್ದೇವೆ. ಜಿಲ್ಲಾ ಬೋರ್ಡ್ ಅಧಿಕಾರಿಗಳು ತಮ್ಮ ತಾಲ್ಲೂಕು ಸ್ಥಿತಿಗತಿಗಳನ್ನು ಜನಗಳ ಸ್ಥಿತಿಗತಿಳನ್ನು ನೋಡಿಕೊಂಡು ಜಿಲ್ಲೆಯಲ್ಲಿ ಅನಾಹುತ ಮಾಡುವಂಥಾದ್ದನ್ನು ಕಣ್ಣಿನಿಂದ ನೋಡಿದ್ದೇವೆ. ಈಗ ರಚಿತವಾಗಲಿರುವ ಜಿಲ್ಲಾ ಸಮಿತಿಯು ಜನರ ಯೋಗಕ್ಷೇಮ ನೋಡಿಕೊಳ್ಳದೇ ಇದ್ದರೆ ಜನರನ್ನು ಅಪಾರವಾದ ಸಂಕಟಕ್ಕೆ ಗುರಿಮಾಡುತ್ತಾರೆಂದು ನಾನು ಹೇಳಬಯಸುತ್ತೇನೆ. ಹಿಂದಕ್ಕೆ ಒಂದು ಪಾಳ್ಯೆಗಾರರ ಗಾರರ ರಾಜ್ಯಇದ್ದಿತೋ ಹಾಗೆ ಹೆಚ್ಚಿನ ಅಧಿಕಾರ ಶಕ್ತಿ ಉಪಯೋಗಮಾಡತಕ್ಕಂಥ ಜನ ಇದ್ದಾರೆ. ಆದುದರಿಂದ ಜಿಲ್ಲಾಮಟ್ಟದಲ್ಲಿ ಇನ್ನೂ ಹೆಚ್ಚಿನ ಅಧಿಕಾರಕೊಡದೆ ಇದುವರೆಗೆ ಇದ್ದಹಾಗೆ ಕೋಆರ್ಡಿನೇಷನ್ ಬಾಡಿ ರಿಕಮೆಂಡೇಟರಿ ಅಡ್ವೈಜರಿಬಾಡಿ ಎಂದು ಉಳಿಸಿಕೊಳ್ಳತಕ್ಕಂಥಾದ್ದು ಸಾಧುವಾದುದು ಎಂದು ನಮ್ಮ ಅಭಿಪ್ರಾಯ. ಹೆಚ್ಚಿನ ಅಧಿಕಾರ ತಾಲ್ಲೂಕು ಮಟ್ಟದಲ್ಲಿ ಇರುವುದು ಒಳ್ಳೆಯದು. ತಾಲ್ಲೂಕುಮಟ್ಟದಲ್ಲಿ ಅಧಿಕಾರ ಕೇಂದ್ರೀಕೃತವಾಗಿ, ತಾಲ್ಲೂಕುಮಟ್ಟದಲ್ಲಿರತಕ್ಕಂಥ ಸದಸ್ಯರು ನೇರವಾಗಿ ಚುನಾವಣೆಯಲ್ಲಿ ಬಂದು ಹಣಕಾಸಿನ ಸ್ಥಿತಿಯನ್ನು ಹೆಚ್ಚುಪ್ರಮಾಣದಲ್ಲಿ ಕೈಯಲ್ಲಿಟ್ಟುಕೊಂಡು ತಾಲ್ಲೂಕನ್ನು ಸರಿಯಾಗಿ ನೋಡಿಕೊಂಡರೆ ತಾಲ್ಲೂಕುಸ್ಥಿತಿ ಉತ್ತಮವಾಗುತ್ತದೆ. ಒಂದು ಊರಿನಸ್ಥಿತಿ ಉತ್ತಮವಾದರೆ ದೇಶದಸ್ಥಿತಿ ಉತ್ತಮವಾಗುತ್ತದೆ. ಸರಕಾರ ಮತ್ತು ಪಂಚಾಯಿತಿ ಮಧ್ಯೆ ಜಿಲ್ಲಾ ಬೋರ್ಡ್ ನೇಮಕಮಾಡಿದರೆ ಅನೇಕ ಸಂದರ್ಭಗಳಲ್ಲಿ ಮೇಲೆ ಇರತಕ್ಕರಾಜ್ಯ ಸರಕಾರಕ್ಕೂ ಮತ್ತು ಕೆಳಗೆ ಇರತಕ್ಕಂಥ ಪಂಚಾಯಿತಿಗಳಿಗೂ ಇರುವ ಅಧಿಕಾರಕ್ಕೆ ಧಕ್ಕೆ ಬರುತ್ತದೆ ಎಂದು ನನಗೆ ಕಂಡುಬರುತ್ತದೆ. ಜಿಲ್ಲಾ ಪರಿಷತ್ತಿಗೆ ಹೆಚ್ಚಿನ ಅಧಿಕಾರ ಕೊಡುವುದು ಸೂಕ್ತವಲ್ಲ ಎಂದು ಒತ್ತಾಯ ಪೂರ್ವಕ ನಾನುಹೇಳಬಯಸುತ್ತೇನೆ. ಗುಜರಾತ ರಾಜ್ಯದಲ್ಲಿ ಹಾಗೆ ಇದೆ, ಮಹಾರಾಷ್ಟ್ರದಲ್ಲಿ ಹಾಗೆ ಇದೆ ಅದನ್ನು ನಾವು ಅನುಸರಿಸೋಣ ಎಂಬ ವಾದ ನಾನು ಒಪ್ಪುವುದಿಲ್ಲ. ನಾವು ನಮ್ಮ ದೇಶದ ಜನಗಳ ಸ್ಥಿತಿಗತಿಗಳಿಗೆ ಯಾವುದು ಸಾಧುವಾದುದೋ, ಯಾವುದು ಉಪಯುಕ್ತವೋ ಸರಿಯಾದ ಬೆಳವಣಿಗೆ ಸಾಧನೆಯಾಗುತ್ತದೆಯೋ ಅದನ್ನು ನೋಡಿ ಅನುಸರಿಸತಕ್ಕಂಥಾದ್ದು ಉತ್ತಮವೇ ವಿನಃ ಮತ್ತೊಬ್ಬರನ್ನು ನೋಡಿ ಅವರು ಮಾಡಿದ್ದಾರೆ ನಾವು ಮಾಡುತ್ತೇವೆ ಎಂದು ಹೇಳತಕ್ಕಂಥಾದ್ದು ಖಂಡಿತವಾಗಿ ಒಳ್ಳೆಯದಲ್ಲ. ಸ್ಥಳೀಯ ಸಂಸ್ಥೆಗಳ ವಿಚಾರ ಒಂದೊಂದು ದೇಶದಲ್ಲಿ ಒಂದೊಂದು ತರಹ ಇದೆ. ಪ್ರಜೆಗಳ ರೀತಿನೀತಿ ಅನುಸರಿಸಬೇಕಾಗುತ್ತದೆ. ಭರತಖಂಡಕ್ಕೆಲ್ಲಾ ಒಂದೇ ತರಹ ಒಂದೇ ರೀತಿಯಾಗಿ ಅನ್ವಯಿಸುವುದಕ್ಕಾಗುವುದಿಲ್ಲ. ಇಂದು ನಾವು ಅಧಿಕಾರಕೊಡುತ್ತೇವೆ. ಕೊಟ್ಟ ಅಧಿಕಾರ ಚಲಾಯಿಸಬೇಕಾಗುತ್ತದೆ. ಅಧಿಕಾರಕ್ಕಿಂಥ ಹೆಚ್ಚಾಗಿ ಹಣಕಾಸಿನ ಸ್ಥಿತಿ ನೋಡಬೇಕಾಗುತ್ತದೆ. ಬರೀ ಅಧಿಕಾರಕೊಟ್ಟು ಕೆಲಸಮಾಡು ಎಂದು ಹೇಳುವುದಾದರೆ ಬರೀ ಕೈಯಿಂದ ಮೊಳ ಹಾಕಿದ ಹಾಗೆ ಆಗುತ್ತದೆ. ಕೆರೆಗಳ ದುರಸ್ತಿಯಾಗಬೇಕು, ಶಾಲಾ ಕಟ್ಟಡವಾಗಬೇಕು. ಇವುಗಳ ಸ್ಥಿತಿ ಚೆನ್ನಾಗಿಲ್ಲ. ಇವುಗಳನ್ನು ಉತ್ತಮಪಡಿಸುವ ಸ್ಥಿತಿಯಲ್ಲಿ ತಾಲ್ಲೂಕುಬೋರ್ಡ್ ಇಲ್ಲ. ಹೆಚ್ಚಿನ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರೆ ಇದು ಆಗುತ್ತದೆ ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಅನುಕೂಲವಾಗುತ್ತದೆ. ಆದರೆ ನ್ಯಾಯವಾಗಿ ದೇಶ ಅಭಿವೃದ್ಧಿಯಾಗಿ ಉತ್ತಮವಾಗುವುದಿಲ್ಲ. ಮುಖ್ಯವಾಗಿ ಪಂಚಾಯಿತಿ, ತಾಲ್ಲೂಕ್‌ಬೋರ್ಡ್ ಇವುಗಳ ಹಣಕಾಸಿನಸ್ಥಿತಿ ಉತ್ತಮವಾಗುವ ಹಾಗೆ ಮಾಡಬೇಕು. ಹೆಚ್ಚಿನ ಅಧಿಕಾರ ಕೊಡುವುದರ ಜೊತೆಗೆ ಹಣಕಾಸಿನಸ್ಥಿತಿ ಉತ್ತಮಪಡಿಸಬೇಕು ಆಂದರೆ ಸರಿಯಾಗಿ ಕೆಲಸವಾಗುತ್ತದೆ. ಲ್ಯಾಂಡ್ ರೆವೆನ್ಯೂದಿಂದ ಬರತಕ್ಕಂಥ ವರಮಾನ ಅವರಿಗೆ ನೇರವಾಗಿ ಹೋಗತಕ್ಕದ್ದು ಮತ್ತು ಅವರು ಹಾಕತಕ್ಕಂಥ ಸೆಸ್‌ಕೂಡ ಪ್ರಾಮುಖ್ಯವಾದುದು ಎಂದು ಹೇಳುತ್ತೇನೆ. ನೇರವಾಗಿ ಹಾಕಬಹುದಾದ ಸೆಸ್ ಜನ

(ಶ್ರೀ ಟಿ. ಮಾದಯ್ಯ ಗೌಡ)

ಗಳ ಮೇಲೆ ಹೊಸ ತೆರಿಗೆಯಾಗುವುದು. ನಮ್ಮ ಜನರ ಸ್ಥಿತಿಗತಿಗಳು ಇಂದು ಹೊಸ ತೆರಿಗೆಭಾರ ಹೊರತಕ್ಕಂಥ ಸ್ಥಿತಿಯಲ್ಲಿಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ. ಈಗಾಗಲೇ ಲ್ಯಾಂಡ್ ರೆವೆನ್ಯೂ ಬಗ್ಗೆ ವರ್ಷ ಎರಡು ವರ್ಷದಲ್ಲಿ ಸರ್ವೆ ಸೆಟಲ್‌ಮೆಂಟ್ ಮಾಡತಕ್ಕದ್ದು ಇದೆ. ಸಾಲದ್ದಕ್ಕೆ ಇರಿಗೇಷನ್ ಮೆಂಟೆನೆನ್ಸ್, ಸೆಸ್ಸು, ಇತರ ಸೆಸ್ಸುಗಳು ಬೀಳುತ್ತಿವೆ. ಇದೇ ಸಮಯದಲ್ಲಿ ಹೊಸತೆರಿಗೆ ಹೊಸ ಸೆಸ್ಸು ಜನಗಳ ಮೇಲೆ ಬಿದ್ದರೆ ನಮ್ಮ ಜನಗಳು ನಿಜವಾಗಿಯೂಕೂಡ ನಮ್ಮನ್ನು ಯಾವ ರೀತಿಯಿಂದಲೂ ಅಭಿನಂದಿಸುವುದಿಲ್ಲ. ಆದುದರಿಂದ ಯಾವರೀತಿ ಸಹಾಯಮಾಡಿ ಅನುಕೂಲತೆ ಮಾಡತಕ್ಕದ್ದು ಹೇಗೆ ಹಣ ಒದಗಿಸಬೇಕು ಎಂಬುದನ್ನು ಯೋಚನೆಮಾಡಿ ಇದನ್ನು ಮಾಡತಕ್ಕದ್ದು ಸೂಕ್ತ. ಈ ಮಸೂದೆಯಲ್ಲಿ ಪ್ರಾಣಗಳ ಮೇಲೆ ಅಂದರೆ ಒಂದೊಂದುತಲೆಗೆ ಸೆಸ್ಸು ಹಾಕುವ ಅಧಿಕಾರ ಕೊಟ್ಟಿದೆ. ಹಳ್ಳಿಗಳಲ್ಲಿ ಒಂದು ದನಕ್ಕೆ ಒಂದು ರೂಪಾಯಿ ಎಂದು ತೆರಿಗೆ ವಿಧಿಸಬಹುದು ಎಂದು ಹೇಳಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಹಳ್ಳಿಗಾಡಿನಲ್ಲಿ ಒಂದು ಪ್ರಾಣಿಯನ್ನು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಬೇಕಾದರೆ ಒಂದು ಕೋಳಿ, ಒಂದು ಕುರಿ, ಒಂದು ದನ ಮಾರಾಟ ಮಾಡಬೇಕಾದರೆ ತಲೆಗೆ ಒಂದು ರೂಪಾಯಿ ಬರುತ್ತದೆ. ಒಂದೊಂದು ಪ್ರಾಣಿಗೂ ಒಂದೊಂದು ರೂಪಾಯಿ ಬೀಳುತ್ತದೆ. ಸಂತೆಗಳಲ್ಲಿ ಹೋಗಿ ಒಂದು ಕುರಿ, ಕೋಳಿ ಮಾರಾಟ ಮಾಡಿದರೆ ಒಂದು ರೂಪಾಯಿ ವಸೂಲು ಮಾಡತಕ್ಕಂಥಾದ್ದು ನಮ್ಮ ಹಳ್ಳಿಗಾಡಿನ ಬೆಳವಣಿಗೆಗೆ ಧಕ್ಕೆ ತರತಕ್ಕಂಥ ವಿಚಾರವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಹಾಗೆಯೇ ತಂದಿರತಕ್ಕಂಥ ಇನ್ನೂ ಕೆಲವು ವಿಷಯಗಳು ಸರ್ವಸಾಧಾರಣವಾಗಿ ಒಪ್ಪತಕ್ಕಂಥ ವಲ್ಲ. ಈಗ ನ್ಯಾಯಪಂಚಾಯಿತಿ ವಿಷಯದಲ್ಲಿ ಹೇಳುವುದಾದರೆ, ಹಳ್ಳಿಗಾಡಿನಲ್ಲಿ ಉಂಟಾಗತಕ್ಕಂಥ ಕಲಹ ಕಚ್ಚಾಟಗಳನ್ನು ಗ್ರಾಮಸ್ಥರೇ ಕೂತುಕೊಂಡು ಇತ್ಯರ್ಥ ಮಾಡಿಕೊಳ್ಳುವ ಸ್ಥಿತಿ ನಾವು ನೋಡುತ್ತಾ ಇದ್ದೇವೆ. ಊರಿನಲ್ಲಿರತಕ್ಕಂಥ ಮುಖಂಡರು ಪಂಚಾಯಿತ ಮಾಡಿ, ಇಂಥ ತಪ್ಪು ಮಾಡಿದಿ, ಆ ತಪ್ಪಿಗೆ ಇಷ್ಟು ದಂಡ ಕೊಡಬೇಕೆಂದು ವಿಧಿಸಿದರೆ, ಅದನ್ನು ತಂದು ಕೊಡುವ ಪದ್ಧತಿ ಇತ್ತು, ಅದು ಕ್ಷೀಣವಾಯಿತು. ಈವಾಗ ಒಂದು ಕಾನೂನು ರೀತ್ಯ ನ್ಯಾಯ ಪಂಚಾಯಿತಿ ಅನ್ನುವ ಏರ್ಪಾಡು ಮಾಡಲು ಹೋಗುತ್ತಾ ಇದ್ದೇವೆ. ಈ ನ್ಯಾಯ ಪಂಚಾಯ್ತಿಯನ್ನು ಕಾನೂನು ರೀತ್ಯ ಮಾಡಿ, ಒಬ್ಬ ಚುನಾವಣೆಯಾದಂಥ ಅಧ್ಯಕ್ಷ ಮತ್ತು ಚುನಾವಣೆಯಾದಂಥ ಮೆಂಬರುಗಳು ಅಲ್ಲಿ ಕೂತುಕೊಂಡು ನ್ಯಾಯಗಳನ್ನು ಮಾಡುವುದಕ್ಕೆ ಹೋದರೆ, ಒಂದು ವೇಳೆ ಚುನಾವಣೆಯಾದಂಥ ಮನುಷ್ಯ ನ್ಯಾಯವಾದವನು ಆಗಿದ್ದರೆ, ಜನಗಳ ಪ್ರೀತಿವಿಶ್ವಾಸಕ್ಕೆ ಪಾತ್ರನಾದಂಥವನು ಆಗಿದ್ದು, ಏನೊಂದು ತೀರ್ಪನ್ನು ಕೊಟ್ಟರೂ ಅದಕ್ಕೆ ತಲೆ ಬಾಗಬಹುದು. ಇಲ್ಲದೆ ಹೋದರೆ, ಈ ಮನುಷ್ಯ ತನ್ನ ವೈಯುಕ್ತಿಕವಾದ ವೈಷಮ್ಯಗಳನ್ನು ತೀರಿಸತಕ್ಕಂಥ, ಜನಗಳಲ್ಲಿ ಇಲ್ಲದ ಕಲಹ ಕಚ್ಚಾಟಗಳನ್ನು ವೃದ್ಧಿಮಾಡುವವನಾಗಿದ್ದರೆ, ಗ್ರಾಮಾಂತರಗಳಲ್ಲಿ ಇನ್ನೂ ಹೆಚ್ಚಿನ ಗೊಂದಲಗಳನ್ನು ಹಚ್ಚುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ನ್ಯಾಯಪಂಚಾಯಿತಿಯನ್ನು ನಮ್ಮ ಸೆಲೆಕ್ಟ್ ಕಮಿಟಿಯವರು ಬಹಳ ದೀರ್ಘವಾಗಿ ಮತ್ತು ಕೂಲಂಕಷವಾಗಿ ಪರ್ಯಾಲೋಚಿಸಿ, ಇದು ಎಷ್ಟರಮಟ್ಟಿಗೆ ಈಗ ನಮ್ಮ ದೇಶಕ್ಕೆ ಅವಶ್ಯಕ ಅನ್ನತಕ್ಕಂಥಾದ್ದನ್ನು ನೋಡಬೇಕಾಗಿ ಬರುತ್ತದೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ಸ್ಥಳೀಯ ಸಂಸ್ಥೆ ಸಚಿವರು ಉತ್ಸಾಹದಿಂದ ಗ್ರಾಮರಾಜ್ಯ ಮಸೂದೆಯನ್ನು ನಮ್ಮ ಮುಂದೆ ಮಂಡಿಸಿ ನಮ್ಮ ಅಭಿಪ್ರಾಯ ಗಳನ್ನು ಕೇಳಿದರು. ಚರ್ಚೆ ಸ್ವಲ್ಪ ಹೊತ್ತಿನಲ್ಲಿಯೇ ಮುಕ್ತಾಯವಾಗುವುದರಲ್ಲಿದೆ. ಈ ಚರ್ಚೆ ಯನ್ನು ನಾವು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ, ಇದು ಬಹಳ ದೊಡ್ಡ ವಿವಾದಾಸ್ಪದವಾದ ಒಂದು ಮಸೂದೆಯಾಗಿ ಕಂಡು ಬರುತ್ತಾ ಇದೆ. ಮೇಲಾಗಿ ಆಳುವ ಪಕ್ಷದವರಿಗೆ ಈ ಗ್ರಾಮ ರಾಜ್ಯದಂಥ ಒಂದು ಬದಲಾವಣೆಯನ್ನು ತೀವ್ರ ತರತಕ್ಕಂಥ ಮಸೂದೆಯ ಬಗ್ಗೆ ಸಾಕಷ್ಟು ಕಳಕಳಿ ಇಲ್ಲ ಅನ್ನುವುದು ಈಗಾಗಲೇ ವ್ಯಕ್ತವಾಗಿದೆ. ಅವರ ಮಾತುಗಳು ಅನುಮಾನಗಳಿಂದ ಮತ್ತು ಶಂಕೆಗಳಿಂದ ಕೂಡಿದ್ದುದು ತಮಗೆ ನೆನಪಿರಬೇಕು. ಈಚೆಗೆ ರಾಜ್ಯಾಂಗಕ್ಕೆ ತಂದಂಥ 17ನೇ ತಿದ್ದುಪಡಿ ಬಿದ್ದು ಹೋಯಿತು. ಈ ಗ್ರಾಮರಾಜ್ಯ, ಇತ್ಯಾದಿಯಾಗಿ, ನಾವು ತತ್ವಶಃ ಮಾತ ನಾಡುತ್ತಾ, ಆದರ್ಶವನ್ನು ಚಿತ್ರಿಸುತ್ತಾ, ಬಹಳ ಕಾಲ ಕಳೆದುಹೋಯಿತು. ಈ ರಾಜ್ಯದಲ್ಲಿ ತಮಗೆ ಗೊತ್ತಿದ್ದ ಹಾಗೆ ಒಮ್ಮೆಯಿಂದ, ಇದ್ದ ಜಿಲ್ಲಾ ಬೋರ್ಡುಗಳನ್ನು ಮುಗಿಸಿ, ಸ್ವಾತಂತ್ರ್ಯಾ ನಂತರದಲ್ಲಿ ಶ್ರೀಮಾನ್ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಮಾಡಿ, ಈ ಸ್ಥಳೀಯ ಸಂಸ್ಥೆಗಳು ಹೇಗೆ ನಡೆಯಬೇಕು, ಅವಕ್ಕೆ ಏನು ಅಧಿಕಾರ ಕೊಡಬೇಕು, ಮುಂತಾದುದರ ಬಗ್ಗೆ ಒಂದು ವರದಿಯನ್ನು ಸರಕಾರ ಪಡೆದಿತು. ಈ ವರದಿಯ ಚರ್ಚೆಯಲ್ಲಿ ಅನುಮಾನಗಳು, ಶಂಕೆಗಳು, ವಿವಾದಗಳು ಹುಟ್ಟಿ, ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು

ರಚನೆಮಾಡಿ, ಅವರು ಸುಮಾರು 1954ರಲ್ಲಿ ವರದಿ ಸಲ್ಲಿಸಿದರು. ಅನಂತರದಲ್ಲಿ ನಾವು ಈ ರಾಜ್ಯದಲ್ಲಿ ಒಂದು ಮಸೂದೆಯನ್ನು ತಂದು ಈಚೆಗೆ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹಾಗೂ ಜಿಲ್ಲಾ ಪರಿಷತ್ತನ್ನು ರಚನೆಮಾಡಿ, ಅವು ಎರಡೂವರೆ ವರ್ಷಗಳಿಂದ ಹೇಗೆ ಕೆಲಸಮಾಡುತ್ತಾ ಇವೆ ಅನ್ನುವುದನ್ನು ನೋಡುತ್ತಾ ಇದ್ದೇವೆ. ಇಡೀ ದೇಶದಲ್ಲಿಯೇ ಈ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಬಲವಂತರಾವ್ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕವಾಗಿ ಅವರು ವರದಿಯನ್ನು ಕೊಟ್ಟರು. ಸಂತಾನಂ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಾಗಿ ಅವರು ಒಂದು ವರದಿಯನ್ನು ಕೊಟ್ಟರು. ಪುನಃ ನಿನ್ನೆಯ ಪತ್ರಿಕೆಯಲ್ಲಿ ಬಲವಂತರಾವ್ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಕಮಾಡಿ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿ ಹೇಗಿರಬೇಕು ಎಂದು ವರದಿಮಾಡಬೇಕೆಂದು ಕೇಳಿದ್ದಾರೆಂದು ಗೊತ್ತಾಗಿದೆ. ಹೀಗೆ ವರದಿಗಳು ಮೇಲಿಂದಮೇಲೆ ಬರುತ್ತಿವೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಶ್ರೀ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆಮಾಡಿದರು. ಅವರ ವರದಿ ಈಗ ಸಭೆಯ ಮುಂದಿದೆ. ಅದನ್ನು ಚರ್ಚೆಮಾಡಬೇಕಾಗಿತ್ತು. ಈ ವರದಿ ಕನ್ನಡದಲ್ಲಿ ಇರಬೇಕಾಗಿತ್ತು. ಮುಖ್ಯವಾಗಿ ಕಾಂಗ್ರೆಸ್ ಪಕ್ಷದವರು ತಮ್ಮ ಪಾರ್ಲಿಮೆಂಟರಿ ಅಂಗದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಅದರ ಆಧಾರದ ಮೇಲೆ ಕರಡು ಮಸೂದೆಯನ್ನು ರಚಿಸಿದ್ದರೆ ಈ ಗೊಂದಲ ಶಂಕೆಗೆ, ವಿವಾದಕ್ಕೆ ಆಸ್ಪದವಾಗುತ್ತಾ ಇರಲಿಲ್ಲ ಅಂತ ಹೇಳಿ ನನಗೆ ಅನ್ನಿಸುತ್ತದೆ. ಇದರಿಂದ ಸರಕಾರದವರು ಅರೆಮನಸ್ಸಿನಿಂದ ಹೆಜ್ಜೆಯನ್ನು ಇಟ್ಟಿದ್ದಾರೆ; ಈ ತತ್ವದಲ್ಲಿ ಅವರಲ್ಲಿ ಬಹಳ ಜನರಿಗೆ ನಂಬಿಕೆ ಇಲ್ಲ; ಅನ್ನುವುದು ಮೇಲೆ ಕಾಣುತ್ತಾ ಇದೆ.

ಇಷ್ಟೊಂದು ಹೇಳಿದಮೇಲೆ, ಸ್ವಾಮಿ, ಇವತ್ತು ನಾವು ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಸಮಿತಿ ಮತ್ತು ಜಿಲ್ಲಾ ಬೋರ್ಡುಗಳು ಕೆಲಸಮಾಡುವ ವಿಧಾನವನ್ನು ನೋಡಿದ್ದರಲ್ಲಿ, ನಮ್ಮ ರಾಜ್ಯದಲ್ಲಿ ಕೆಲವು ಕಡೆ ಬಿಟ್ಟರೆ, ಯಾವ ಪಂಚಾಯಿತಿಗೂ ಇದುವರೆಗೂ ಕಾರ್ಯದರ್ಶಿಯನ್ನು ನೇಮಕಮಾಡಿ, ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಪಂಚಾಯಿತಿಗಳು ಹೆಸರಿಗೆ ಮಾತ್ರ ಇವೆ. ತಾಲ್ಲೂಕು ಅಭಿವೃದ್ಧಿ ಸಮಿತಿಗಳಿಗೆ ಸಾಕಷ್ಟು ಹಣ ಕೊಟ್ಟಿಲ್ಲ. ಅವು ಪೂರ್ತಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಜಿಲ್ಲೆಯಲ್ಲಿರತಕ್ಕಂಥ ಪರಿಷತ್ತುಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತಿವೆ. ಅವರು ಮೇಲಿಂದ ಏನು ಆದೇಶ ಬರುತ್ತದೋ ಅದರಂತೆ ಮಂಡಳಿ ಆಡಳಿತವನ್ನು ನಡೆಸುತ್ತಾರೆ; ಆದ್ದರಿಂದ ಯಾವ ತಿದ್ದುಪಡಿಗೂ ಅವಕಾಶವಿರುವುದಿಲ್ಲ. ಕೇವಲ ತಾಲ್ಲೂಕು ಬೋರ್ಡಿನ ಒಂದು ಆಯವ್ಯಯವನ್ನು ಒಪ್ಪತಕ್ಕಂಥಾದ್ದು ಅಥವಾ ರದ್ದುಮಾಡತಕ್ಕಂಥಾದ್ದು ಈ ತರಹ ವ್ಯವಸ್ಥೆ ಇದೆ; ಎಂದು ನನಗಾದರೂ ಅನ್ನಿಸುತ್ತದೆ. ಮಾನ್ಯ ಅನೇಕ ಸದಸ್ಯರುಗಳು ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಸಮಿತಿ ಮತ್ತು ಜಿಲ್ಲಾ ಸಮಿತಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಹಣವನ್ನು ಕೊಡುವುದು ಸಾಧುವಲ್ಲ, ಈಗ ಅದಕ್ಕೆ ಸುಸಮಯವಲ್ಲ ಅಂತ ಹೇಳಿ ವಾದ ಮಾಡಿದ್ದಾರೆ. ಶ್ರೀಮಾನ್ ಹೆಗ್ಗಡೆಯವರು ಒಂದು ಮಾತು ಹೇಳಿದರು. ಕೇಂದ್ರೀಕೃತವಾದ ವ್ಯವಸ್ಥೆ ಯಾವಾಗಲೂ ವಿಳಂಬ, ಭ್ರಷ್ಟಾಚಾರ ಮತ್ತು ಅಧ್ಯಕ್ಷತೆಗೆ ಅವಕಾಶ ಮಾಡಿಕೊಡುತ್ತದೆ ಎಂದು, ಆ ಮಾತು ನಿಜ. ಇನ್ನೊಂದು ಮಾತು ಹೇಳಿದರು. ಇವತ್ತು ಜನತೆಯಿಂದ ಅಧಿಕಾರ ಮೇಲಕ್ಕೆ ಹರಿದುಬರುವುದಕ್ಕೆ ಬದಲು, ಮೇಲಿಂದ ಜನತೆಗೆ ಅಧಿಕಾರ ಕೊಡಬೇಕೋ ಬೇಡವೋ ಎಂದು ವಿಚಾರ ಮಾಡುತ್ತೇವೆ. ಇಂಥ ಒಂದು ವಿಪರ್ಯಾಸ ನಮ್ಮಲ್ಲಿ ಉಂಟಾಗಿದೆಯೆಂದು ಹೇಳಿದರು.

ಸ್ವಾಮೀ, ಜನತೆಯಲ್ಲಿ ಇವತ್ತು ಸಾರ್ವಭೌಮ ಅಧಿಕಾರ ಇದೆ. ಅವರು ನಿಮಗೆ ಹಿಂದು ಮುಂದು ನೋಡದೆ ತಮ್ಮ ಪ್ರಾಣ, ಆಸ್ತಿ ಎಲ್ಲವನ್ನೂ ಧಾರೆ ಎರೆದು ಕೊಟ್ಟ ಹಾಗೆ—ಲೆಜಿಸ್ಲೇಚರ್‌ಗೆ ಮತ್ತು ಪಾರ್ಲಿಮೆಂಟಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅವರ ಭವಿಷ್ಯವನ್ನು ಅನೇಕ ರೀತಿಯಲ್ಲಿ ನಾವು ಪ್ರತಿ ಐದು ವರ್ಷ ನಿರ್ಣಯಿಸುತ್ತೇವೆ. ಇವತ್ತಿನ ಸ್ಥಿತಿಯಲ್ಲಿ ಹಳ್ಳಿಗಾಡಿನ ಪರಿಸ್ಥಿತಿ ಕಲುಷಿತವಾಗಿದೆ ಎಂಬ ಮಾತನ್ನು ಒಪ್ಪುತ್ತೇನೆ. ವರ್ಣ ಮತ್ತು ವರ್ಗಗಳಿಂದ ಕೂಡಿರತಕ್ಕ ನಮ್ಮ ಸಮಾಜದಲ್ಲಿ ಅದರಲ್ಲೂ ಕೂಡ ಮುಖ್ಯವಾಗಿ ಸಾಂರಾಜ್ಯಶಾಹೀ ಪದ್ಧತಿಯ ಒಂದು ಹಿನ್ನೆಲೆಯನ್ನು ತೆಗೆದುಕೊಂಡರೆ ಇವತ್ತು ಆದರ್ಶಮಯವಾದ ಗ್ರಾಮ ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಹಳ್ಳಿಯಲ್ಲಿ ವಾತಾವರಣ ಇಲ್ಲ ಎನ್ನುವುದನ್ನು ಯಾರಾದರೂ ಒಪ್ಪಿಕೊಳ್ಳತಕ್ಕ ಮಾತು. ಆದರೂ ಈ ಒಂದು ಕೆಲಸವನ್ನು ಕಾಂಗ್ರೆಸ್‌ನವರು ಮಾಡಬೇಕಾಗಿದೆ. ಎಷ್ಟುಮಟ್ಟಿಗೆ ಈ ಒಂದು ವಾತಾವರಣವನ್ನು ಶುದ್ಧ ಮಾಡಿ ಜನತೆಯನ್ನು ಈ ಜವಾಬ್ದಾರಿಯನ್ನು ಹೊರುವಕಡೆಗೆ ತರಪೇತು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುವುದು ಮೊದಲನೆಯದು. ಎರಡನೆಯದು ಆಳುವ ಪಕ್ಷದಲ್ಲಿ ಒಮ್ಮತವನ್ನು ಕಟ್ಟಿಕೊಳ್ಳುವುದು ಈ ಎರಡು ಕೆಲಸವನ್ನೂ ಮಾಡದೇ ಇದನ್ನು ಮಾಡವುದಕ್ಕೆ ಹೋದರೆ ಕುದುರೆಯ ಮುಂದೆ ಗಾಡಿ

(ಶ್ರೀ ಎಸ್. ಗೋಪಾಲಗೌಡ)

ಯನ್ನು ತಂದು ಇಟ್ಟಹಾಗೆ ಆಗುತ್ತದೆ. ಪ್ರತಿಸಲವೂ ಹೆಚ್ಚು ಅಧಿಕಾರವನ್ನು ಮತ್ತು ಹಣವನ್ನು ಕೊಡುವ ಮಾತು ಬಂದಾಗಲೆಲ್ಲಾ ಹಳ್ಳಿಯ ವಾತಾವರಣ ಒಳ್ಳೆಯದಿಲ್ಲ, ಈಗ ಕೊಡುವುದರಿಂದ ಅನ್ಯಾಯವಾಗುತ್ತದೆ ಎಂಬ ಶಂಕೆಯನ್ನು ಮತ್ತೆ ಮತ್ತೆ ಪ್ರಸ್ಥಾಪಿಸಬೇಕಾಗಿದೆ. ಸ್ವಾಮಿ, ಈ ಒಂದು ಹಿನ್ನೆಲೆಯಲ್ಲಿ ಇವತ್ತು ಮಾನ್ಯ ಸಚಿವರು ಈ ಒಂದು ಮಸೂದೆಯನ್ನು ರಚನೆ ಮಾಡಿದ್ದಾರೆ. ಈಗಾಗಲೇ ನಾನು ಕೇಳುತ್ತಾ ಇದ್ದೇನೆ. ಈ ಮಸೂದೆಯನ್ನು ಅವರು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಯೋ ಏನೋ ಎಂಬ ಶಂಕೆ ಅಲ್ಲಲ್ಲಿ ಕೇಳಿ ಬರುತ್ತಾ ಇದೆ. ಇಷ್ಟು ಅನುಮಾನಗಳು ಇದ್ದಾಗ ನನಗೆ ಅನಿಸುವುದು ಏನೆಂದರೆ ಈಗಿರುವ ಪಂಚಾಯ್ತಿ, ತಾಲ್ಲೂಕು ಬೋರ್ಡುಗಳನ್ನೇ ಇಟ್ಟುಕೊಂಡು ಅದರಲ್ಲಿ ಏನು ಅಡಚಣೆ, ತೊಂದರೆ ಬಂದಿದೆ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಏನು ನ್ಯೂನತೆ ಬಂದಿದೆ ಅದನ್ನು ತಿದ್ದಿಕೊಳ್ಳುವುದಕ್ಕೆ ಮಾತ್ರ ತಿದ್ದುಪಡಿಗಳನ್ನು ತಂದಿದ್ದರೆ ಚೆನ್ನಾಗಿತ್ತು ಎಂದು ಅನಿಸುತ್ತದೆ. ಏಕೆಂದರೆ ದೇಶದ ಒಂದು ವಾತಾವರಣದಲ್ಲಿ ಮೂಲಭೂತವಾದ ಬದಲಾವಣೆ ಮಾಡತಕ್ಕ ಸಾಹಸದ ಕೆಲಸ ಇದು. ಅಧಿಕಾವನ್ನು ವಿಕೇಂದ್ರೀಕರಣ ಮಾಡಬೇಕು ಕೇಂದ್ರ, ರಾಜ್ಯ ಹಾಗೂ ಗ್ರಾಮ ಎಲ್ಲಾ ಮಟ್ಟದಲ್ಲೂ ಅದು ಹಂಚಿಹೋಗಬೇಕೆನ್ನುವ ಮಾತನ್ನು ಎಲ್ಲ ಜನತಂತ್ರ ವಾದಿಗಳೂ ಒಪ್ಪುತ್ತಾರೆ. ಇವತ್ತು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಾ ಇದ್ದೇವೆ. ಈ ಯೋಜನೆಯಲ್ಲಿ ಮುಖ್ಯವಾಗಿ ಕಮ್ಯೂನಿಟಿ ಡೆವಲಪ್‌ಮೆಂಟ್' ಅಂತಹ ಯೋಜನೆಗಳಲ್ಲಿ ಹಳ್ಳಿ ಜನರೇ ಹೆಚ್ಚು ಭಾಗವಹಿಸುವವರಾಗಿದ್ದಾರೆ. ಅವರ ಸಹಯೋಗದಲ್ಲೇ ಕಾರ್ಯಗತ ಮಾಡತಕ್ಕ ಯೋಜನೆಗಳು ಅವು. ಇವತ್ತು ವಾತಾವರಣವನ್ನು ಸರಿಪಡಿಸಿಕೊಳ್ಳದೇ ಯೋಜನೆಯನ್ನು ಜಾರಿ ಮಾಡುವುದಕ್ಕೆ ಹೋಗಿದ್ದರಿಂದ ಬಹಳ ಸಲ ಇವತ್ತು ಅವುಗಳು ಫಲ ಕೊಡುತ್ತಾ ಇಲ್ಲ. ಬ್ಯೂರಾಕ್ರಸಿ ಎಂದು ಹೇಳಬಹುದು. ಈ ಸರ್ಕಾರ ಯಂತ್ರದ ಮೂಲಕ ಅಂತಹ ಜನತೆಯ ಹಿತವನ್ನು ಸಾಧಿಸತಕ್ಕ ಯೋಜನೆಗಳನ್ನು ಜನತಾಂತ್ರಿಕವಾದ ಗ್ರಾಮದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಇಂದಿನವರೆಗೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಾ ಇದೆ. ರಷ್ಯಾ ಅಥವಾ ಚೈನಾದಲ್ಲಿರುವಂತೆ ಸರ್ವಾಧಿಕಾರ ಇರುವಲ್ಲಿ ಮೇಲ್ಗಡೆ ಒಂದು ಯೋಜನೆಯನ್ನು ಸಿದ್ಧ ಮಾಡುತ್ತಾರೆ ಅದನ್ನು ಕೊನೆಯ ತನಕ ತಮ್ಮ ಒಂದು ಅಧಿಕಾರದ ಬಲದಿಂದ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಲ್ಲಿ ಮಂತ್ರಿ ಮಂಡಲದಿಂದ ಬರುವ ಯೋಜನೆಯನ್ನು ಬಹಳ ಸಲ ಅಧಿಕಾರಿಗಳೇ ವಿರೋಧ ಮಾಡಬಹುದು, ಅಥವಾ ಮಂತ್ರಿಗಳು, ಮಂತ್ರಿ ಮಂಡಲ ಅಧಿಕಾರಿಗಳು ಒಪ್ಪಿ ಮಾಡುವುದನ್ನು ಕೆಲವು ಸಂದರ್ಭಗಳಲ್ಲಿ ಜನ ವಿರೋಧ ಮಾಡಬಹುದು. ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ವಿರೋಧ ಬರುವುದರಿಂದ ಯೋಜನೆಗಳು ಪೂರ್ತಿಯಾಗಿ ಕಾರ್ಯಗತವಾಗುವುದಕ್ಕೆ ಸಾಧ್ಯಗುತ್ತಾ ಇಲ್ಲ. ಅಂತಹ ಒಂದು ವಾತಾವರಣವನ್ನು ಇವತ್ತು ನೋಡುತ್ತಾ ಇದ್ದೇವೆ. ಹೀಗಿರುವಾಗ ಜನತಂತ್ರದಲ್ಲಿ ಇಂತಹ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ಭದ್ರವಾದ ಬುನಾದಿಯ ಮೇಲೆ ಕಟ್ಟಿದಂತಹ ಒಂದು ಗ್ರಾಮದ ಘಟಕ ಪಂಚಾಯ್ತಿ ಇರಬೇಕಾಗುತ್ತದೆ. ಅದನ್ನು ಜನತಂತ್ರದ ಆಧಾರದ ಮೇಲೆ ಆರಿಸಬೇಕಾಗುತ್ತದೆ, ಚುನಾಯಿಸಬೇಕಾಗುತ್ತದೆ. ಯಾವಾಗಲೂ ಯಾವುದೇ ಕಾರ್ಯಕ್ರಮ ದೊಡ್ಡದಾಗಿರಲಿ, ಸಣ್ಣದಾಗಿರಲಿ, ಯೋಜನೆ ಗ್ರಾಮದ ಮಟ್ಟದಲ್ಲಿ ಕಾರ್ಯಗತವಾಗಬೇಕು ಮತ್ತು ಆ ಮಟ್ಟದಲ್ಲಿ ಜನತೆ ಅದಕ್ಕೆ ಬೆಂಬಲವನ್ನು ನೀಡಬೇಕು. ಈ ಒಂದು ಅಂಶವನ್ನು ನಾವು ಗಮನಿಸಿದರೆ ಇವತ್ತು ಈ ಯೋಜನೆಯ ಮೂಲಕ ಏನು ಕೋಟ್ಯಾನು ಕೋಟಿ ರೂಪಾಯಿಗಳನ್ನು ಜನತೆಯ ಹೆಸರಿನಲ್ಲಿ ಖರ್ಚು ಮಾಡುತ್ತಾ ಇದ್ದೇವೆ, ಅದರ ಪೂರ್ತಿ ಫಲವನ್ನು ಅದರೂ ಪಡೆಯುವುದು ಹೇಗೆ? ಕಾರ್ಯಗತ ಮಾಡುವುದು ಹೇಗೆ, ವಿಳಂಬ ಇಲ್ಲದೇ ಕಾರ್ಯಗತ ಮಾಡುವುದು ಹೇಗೆ ಎಂಬ ಪ್ರಶ್ನೆ ಬಂದಾಗ ಈ ರೀತಿ ಒಂದು ಘಟಕವನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಇದು ಒಂದು ಗ್ರಾಮ ಪಂಚಾಯ್ತಿಯಾಗಬಹುದು, ತಾಲ್ಲೂಕು ಬೋರ್ಡು ಆಗಬಹುದು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತು ಆಗಬಹುದು. ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಈ ಮಸೂದೆಯನ್ನು ಇಲಾಖೆಯವರು ಮಾಡಿದ್ದಾರೆ. ಇದರಲ್ಲಿ ಬಹಳ ಜನರಿಗೆ ವಿಶ್ವಾಸ ಇಲ್ಲ. ಮುಕ್ಕಣ್ಣಪ್ಪನವರು ನನ್ನ ಪಕ್ಕದಲ್ಲೇ ಇದ್ದಾರೆ, ಅವರು ಇವತ್ತು ಹೊರಗಡೆ ರಾಜಕೀಯ ವಾತಾವರಣ ಆಳುವ ಪಕ್ಷದ ಮನೋಭಾವ ಮತ್ತು ಅಲ್ಲಿಯ ಕಲುಷಿತ ಸ್ಥಿತಿಗತಿಗಳನ್ನು ಕಂಡು ಈ ರೀತಿ ಏನಾದರೂ ಈ ಮಸೂದೆಯಲ್ಲಿ ಅಡಕವಾಗಿರತಕ್ಕ ಅಧಿಕಾರವನ್ನು, ಹಣವನ್ನು ತಾಲ್ಲೂಕು ಬೋರ್ಡು, ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತಿಗೆ ಕೊಡುವುದಾದರೆ ಹೆಚ್ಚಿನ ಅನಾಹುತ, ಅಪಾಯ ಉಂಟಾದೀತು ಎಂದು ತಮ್ಮ ಅನುಮಾನ, ಭಯವನ್ನು ವ್ಯಕ್ತಪಡಿಸಿದ್ದಾರೆ, ಇದು ಸಹಜ ಎಂದು ಹೇಳುತ್ತೇನೆ. ಇದಕ್ಕೆ ಇವತ್ತು ಇರತಕ್ಕ ಮಾರ್ಗ ಏನು, ಯಾವ

ರೀತಿಯಲ್ಲಿ ಹೋಗುವುದು ಹೆಚ್ಚು ಲಾಭದಾಯಕ ಎನ್ನುವುದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ನನಗಾದರೂ ಏನು ನಂಬಿಕೆ ಇದೆ ಎಂದರೆ ಎಲ್ಲಿಯ ತನಕ ಪ್ರಜಾತಂತ್ರವನ್ನು ಒಪ್ಪುತ್ತೇವೆಯೋ ಅಲ್ಲಿಯ ತನಕ ಗ್ರಾಮದ ಮಟ್ಟದ ಒಂದು ಆದರ್ಶಪ್ರಾಯವಾದ ಗ್ರಾಮ ಪಂಚಾಯಿತ್ತಿ ಇರಬೇಕು. ಅಲ್ಲಿ ಆದಷ್ಟು ಹೆಚ್ಚು ಹಣ ಮತ್ತು ಅಧಿಕಾರ ಇರಬೇಕಾದ್ದು ಬಹಳ ಅಗತ್ಯ. ಉದಾಹರಣೆ ಹೇಳ ಬೇಕೆಂದರೆ, ಒಂದು ಮನೆ ನಿವೇಶನಕ್ಕಾಗಿ ಅಥವಾ ಒಂದು ಸಣ್ಣ ಕೆಲಸಕ್ಕೆ ಯಾವುದೇ ಒಂದು ಬೇಡಿಕೆಯನ್ನು ತೆಗೆದುಕೊಂಡು ಒಬ್ಬ ಮನುಷ್ಯ ಸೆಕ್ರೆಟೆರಿಯೇಟ್ ತನಕ ಬಂದು ಹೋಗತಕ್ಕ ಇವತ್ತಿನ ವ್ಯವಸ್ಥೆ ಏನಿದೆ ಇದು ಬಹಳ ವಿಳಂಬಕ್ಕೆ, ಅಪಾಯಕ್ಕೆ ಮತ್ತು ಏನೂ ಕೆಲಸ ಆಗದಂತೆ ದೊಡ್ಡ ಅಡಚಣೆಯನ್ನು ತಂದೊಡ್ಡುತ್ತಾ ಇರತಕ್ಕ ಕಾರ್ಯವಾಗಿದೆ. ಇದು ಸರಿಯಾದ ಕ್ರಮವಲ್ಲ. ಆದ್ದರಿಂದ ಪಂಚಾಯಿತ್ತಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು ಮತ್ತು ಹೆಚ್ಚು ಹಣವನ್ನು ಕೊಡ ಬೇಕೆನ್ನುವುದರ ಬಗ್ಗೆ ಬಹುಶಃ ಯಾರಿಗೂ ಭಿನ್ನಾಭಿಪ್ರಾಯವಿಲ್ಲ ಎಂದು ನಾನು ಭಾವಿಸುತ್ತೇನೆ. ತ್ವತದ ವಿಷಯ ಬಂದಾಗ ನೇರವಾದ ಚುನಾವಣೆ ಇರಬೇಕು. ಯಾವುದೇ ಸಂಸ್ಥೆಯಾಗಿರಲಿ, ಅದು ಚುನಾಯಿತ ಸಂಸ್ಥೆಯಾಗಿರಬೇಕು, ಸಾಧ್ಯವಾದ ಮಟ್ಟಿಗೂ ಇಲ್ಲಿ ತಾಲ್ಲೂಕು ಬೋರ್ಡ್‌ನ್ನು ಅರ್ಧ ಚುನಾಯಿತ, ಅರ್ಧ ನೇರ, ಮತ್ತು ಅರ್ಧ ಪರೋಕ್ಷ ಚುನಾವಣೆಗಳ ಮೂಲಕ ರಚನೆ ಮಾಡ ಬೇಕೆಂದು ಮಾಡಿದ್ದೀರಿ. ಒಂದು ಮಾತನ್ನು ಹೇಳುತ್ತಾರೆ ಪಂಚಾಯಿತ್ತಿಗಳಿಗೂ ತಾಲ್ಲೂಕು ಬೋರ್ಡಿಗೂ ಯಾವ ಸಂಬಂಧ ಆರ್ಗ್ಯಾನಿಕ್ ಲಿಂಕ್ ಇರಬೇಕಾದ್ದಿಲ್ಲ ಎಂದು, ಆದರೆ ಅಪ್ರತ್ಯಕ್ಷವಾಗಿ ಆರಿಸಿ ಬಂದವರು ಅಲ್ಲಿ ಇರುವುದರಿಂದ ಎಷ್ಟು ಮಟ್ಟಿನ ಸಂಬಂಧಉಂಟಾಗುತ್ತದೆ ಎಂದು ಹೇಳುವು ದಕ್ಕೆ ಬರುವುದಿಲ್ಲ, ಅವನನ್ನು ಕೋ-ಅಪ್ಟ್ ಮಾಡತಕ್ಕ ಒಂದು ಪದ್ಧತಿಯನ್ನು ಹೇಳಿದ್ದೀರಿ. ಅಸೋಸಿಯೇಟ್ ಮೆಂಬರ್ಸ್ ಇರಬೇಕೆಂಬುದನ್ನು ಹೇಳಿದ್ದೀರಿ. ಎಕ್ಸ್ ಅಫಿಷಿಯೋ ಮೆಂಬರ್ಸ್ ಇರಬೇಕೆಂದು ಹೇಳಿದ್ದೀರಿ. ಯಾವುದಾದರೂ ಒಂದು ಗ್ರಾಮದ ಸದಸ್ಯತ್ವವನ್ನು ಕೊಂಡುಕೊಳ್ಳ ಬಹುದು. ಒಬ್ಬ ಎಂ. ಎಲ್. ಎ. ಆಗಲಿ, ತಾಲ್ಲೂಕು ಬೋರ್ಡ್ ಸದಸ್ಯನಾಗಲಿ, ಎಂ. ಪಿ. ಆಗಲಿ ಅಸೋಸಿಯೇಟ್ ಮೆಂಬರ್, ಎಕ್ಸ್ ಆಫಿಸಿಯೋ ಮೆಂಬರ್ ಆಗಿ ಯಾವುದೋ ಒಂದು ರೀತಿಯಲ್ಲಿ ಗ್ರಾಮ ಪಂಚಾಯಿತ್ತಿ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಅಥವಾ ತಾಲ್ಲೂಕು ಬೋರ್ಡಿನ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಹುದು. ಅವನಿಗೆ ಓಟಿನ ಹಕ್ಕು ಇಲ್ಲದೆ ಹೋದರೆ ಎಂ. ಎಲ್. ಎ., ಎಂ. ಎಲ್. ಸಿ. ಆಗಿರತಕ್ಕ ಅವರಿಗೆ ಗೌರವ ಬರುವುದಿಲ್ಲ ಎಂದು ಕೆಲವರು ಮಾತ ನಾಡಿದರು. ನನ್ನ ಅನುಭವದಲ್ಲಿ ಸ್ವಾಮಿ, ಒಂದು ಸಂದರ್ಭದಲ್ಲಿ ಓಟು ಮಾಡಬೇಕೆಂದು ಹೋಗಿದ್ದೆ, ಆ ಒಂದು ಸಂದರ್ಭದಲ್ಲಿ ವಿನಹ ಬಾಕಿ ಯಾವ ಸಂದರ್ಭದಲ್ಲೂ ಕೂಡ ನಮ್ಮ ಮೂರು ತಾಲ್ಲೂಕಿನಲ್ಲೂ ಓಟು ಮಾಡತಕ್ಕ ಪ್ರಸಂಗ ಬರಲೇ ಇಲ್ಲ ಯಾವಾಗ್ಲಲೂ ಕಳುಹಿಸುವಂತೆ ಅವರು ಆಹ್ವಾನ ಕಳುಹಿಸುತ್ತಾರೆ. ಅಲ್ಲೇ ಶಾಶ್ವತವಾಗಿ ಇದ್ದು ಪ್ರತಿಯೊಂದು ವಿಷಯವನ್ನೂ ತಿಳಿದು ಕೊಂಡು ಅದನ್ನು ಕಾರ್ಯಗತ ಮಾಡತಕ್ಕ ಸ್ಥಿತಿಯಲ್ಲಿ ಒಬ್ಬ ವಿಧಾನ ಸಭಾಸದಸ್ಯರು ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾವು ಯಾವತ್ತೂ ಅವರ ಕೆಲಸದಲ್ಲಿ ಇಂಟರ್‌ಫಿಯರ್ ಮಾಡದೇ ಸಾಧ್ಯ ವಾದಷ್ಟೂ ನೇರವಾಗಿ ಆರಿಸಿ ಬಂದವರಿಗೇ ಪೂರ್ತಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುವು ದಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಸರಿಯಾದ ಮಾರ್ಗ ಎಂದು ನನಗೆ ಅನಿಸುತ್ತದೆ. ಎಂ.ಎಲ್.ಎ. ಅಲ್ಲಿ ಇರಬೇಕೆಂದು ಹೇಳುದಾದರೆ ನಾವು ಎಂ. ಎಲ್. ಎ. ಆಗಿರುವ ಕಾರಣದಿಂದಲೇ ಆಯಾಯಾ ಕ್ಷೇತ್ರದಲ್ಲ ತಾಲ್ಲೂಕು ಬೋರ್ಡಿನ ಆಡಳಿತದಲ್ಲ ಭಾಗವಹಿಸುವುದಕ್ಕೆ ಅಧಿಕಾರವಿರುತ್ತದೆ. ಮತ್ತು ಜಿಲ್ಲಾ ಪರಿಷತ್ತಿಗೆ ಹೋದಾಗ ಅಲ್ಲಿ ಓಟು ಮಾಡಬಾರದು ಎಂಬ ಕ್ರಮವನ್ನು ಅನುಸರಿಸ ಬಹುದು. ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಮೀಟಿಂಗುಗಳಿಗೆ ಹೋಗಲು ಅವರು ಇಷ್ಟಪಟ್ಟರೆ ಅವಕಾಶ ಕೊಡಬಹುದು, ಅದಕ್ಕೆ ಅಭ್ಯಂತರ ಇರಬಾರದು. ಆದರೆ ಅವರು ತಮ್ಮ ಪ್ರಭಾವ ಬೀರಿ ಆ ಸಂಸ್ಥೆಗಳ ದಿನದ ಕಾರ್ಯದಲ್ಲಿ ತೊಡಕು ತಂದು ಹಾಕುವುದಕ್ಕೆ ಅವಕಾಶವಿರಬಾರದು. ಸಾಮಾನ್ಯವಾಗಿ ಯಾವ ಸಂಸ್ಥೆಯೇ ಆಗಲಿ ಅದರ ಸದಸ್ಯರಲ್ಲದವರಿಗೆ ಅಲ್ಲಿಗೆ ಆಹ್ವಾನ ಕೊಡುವವರಿಗೂ ಗೌರವವಿರುವುದಿಲ್ಲ, ಮತ್ತು ಕರೆಯದೆ ಹೋಗುವವರಿಗೂ ಗೌರವವಿರುವುದಿಲ್ಲ. ಈ ಮಾತು ಎಲ್ಲಾ ಕಡೆಗೂ ಅನ್ವಯಿಸುತ್ತದೆ.

4-00 P. M.

ಇನ್ನು ಕೋ-ಅಪ್ಟ್ ಮಾಡಿಕೊಳ್ಳುವ ವಿಚಾರವಿದೆ. ಮೇಲಿನವರು ಕೆಳಗಿನ ಸಭೆಗಳಲ್ಲಿ ಹೇಗಿರ ಬೇಕು, ಕೆಳಗಿನವರು ಹೇಗಿರಬೇಕು, ಹೇಗೆ ಲಿಂಕ್ ಮಾಡಬೇಕು, ಸಂಬಂಧ ಹೇಗಿರಬೇಕು, ಒನ್‌ವೇ ಆಗಬೇಕೆ ಅಥವ ಎರಡು ಮಾರ್ಗಗಳಿರಬೇಕೆ ಎಂದು ಯೋಚಿಸಿ ಬೇರೆ ಕಡೆ ಉದಾಹರಣೆ ಇದ್ದರೆ ನೋಡಿ ವ್ಯವಸ್ಥೆಮಾಡಬೇಕು, ಒಂದೊಂದು ಕಡೆ ಒಂದೊಂದು ಕ್ರಮ ಅನುಸರಿಸುವುದು ಸರಿಯಲ್ಲ.

(ಶ್ರೀ ಎಸ್. ಗೋಪಾಲಗೌಡ)

ಜಿಲ್ಲಾ ಪರಿಷತ್ತಿನ ಬಗ್ಗೆ ಕೆಲವು ಟೀಕೆ ಮಾಡಿದ್ದಾರೆ. ನನಗಾದರೂ ಅನ್ನಿಸುವುದು ಜಿಲ್ಲಾ ಪರಿಷತ್ತು ಕೇವಲ ಕೋಆರ್ಡಿನೇಟಿಂಗ್ ಬಾಡಿ. ಅದರಲ್ಲಿ ಹೆಚ್ಚು ಅಧಿಕಾರಿಗಳಿರುತ್ತಾರೆ, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಇರುತ್ತಾರೆ, ತಾಲ್ಲೂಕು ಬೋರ್ಡಿನ ಆಯವ್ಯಯ ಪರಿಶೀಲಿಸುವುದಕ್ಕೆ ಅದು ಅತ್ಯಗತ್ಯ ಎಂದು ಹೇಳುತ್ತಾರೆ. ಅಲ್ಲಿ ಸರ್ಕಾರಿ ಸರ್ಕ್ಯುಲರನ್ನು ಜಿಲ್ಲಾಧಿಕಾರಿಗಳು ಓದುತ್ತಾರೆ. ಆದರಮೇಲೆ ವಿಮರ್ಶೆ ಮಾಡುವುದಕ್ಕೆ ಅಥವ ಅದನ್ನು ವಾಪಸುಮಾಡುವುದಕ್ಕೆ, ಇಂಥ ಯೋಜನೆ ಬೇಡವೆಂದು ಹೇಳುವುದಕ್ಕೆ ಜಿಲ್ಲಾಧಿಕಾರಿಗಳು ಅವಕಾಶ ಕೊಡುವುದಿಲ್ಲ. ಸರ್ಕಾರದ ಅಭಿಪ್ರಾಯವನ್ನು ಸಭೆಯಮುಂದೆ ಇಡುವರೇ ಹೊರತು ಅದನ್ನು ಯಾವುದೇ ರೀತಿಯಲ್ಲಿ ಮಾರ್ಪಾಡು ಮಾಡುವುದಕ್ಕೆ ಅಥವ ವಾಪಸು ಕಳುಹಿಸುವುದಕ್ಕೆ ಒಪ್ಪುವುದಿಲ್ಲ. ಮತ್ತು ಜಿಲ್ಲಾಧಿಕಾರಿಗೆ ಬದಲಾಗಿ ನಾನ್-ಅಫಿಷಿಯಲ್ ಅಧ್ಯಕ್ಷರಿರುವುದು ಒಳ್ಳೆಯದೆಂದು ಹೇಳಿದ್ದಾರೆ. ಮಸೂದೆಯಲ್ಲಿರುವಂತೆ ಅಧ್ಯಕ್ಷರಿಗೆ 500 ರೂಪಾಯಿ ಮತ್ತು ವಾಹನ ಸೌಕರ್ಯ ಕೊಡಬೇಕಾಗುವುದರಿಂದ ಕೆಲವರು ಅದು ಬೇಡ ಎಂದು ಹೇಳಬಹುದು. ಜಿಲ್ಲೆಯಲ್ಲಿ ಅಧ್ಯಕ್ಷ ಪ್ರಭಾವಶಾಲಿಯಾದರೆ ಜನರ ಹಿತಕ್ಕೆ ಪೆಟ್ಟು ಬೀಳಬಹುದು ಎಂದು ಭಯಪಟ್ಟಿದ್ದಾರೆ. ಆದರೆ ನನಗೆ ಕಾಣುವುದು ಜಿಲ್ಲಾಮಟ್ಟದಲ್ಲಿ ಬಹಳ ಹಣದ ಖರ್ಚಿರುವಾಗ ಅಲ್ಲಿ ಬೇಕಾದ ಯೋಜನೆಯನ್ನು ರೂಪಿಸಲು ಜಿಲ್ಲಾಧಿಕಾರಿಗೆ ಅಧಿಕಾರ ವಹಿಸಿದ್ದಾರೆ. ಅಲ್ಲೇನಾಗಬೇಕೆಂದು ಈಗಿರುವ ಹಾಗೆ ಕೂಲಂಕುಷವಾಗಿ ಚರ್ಚೆಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅಲ್ಲಿ ಸುವ್ಯವಸ್ಥಿತವಾದ ಒಂದು ಸಂಸ್ಥೆ, ಚುನಾಯಿತ ಪ್ರತಿನಿಧಿ ಇದ್ದರೆ ಎಲ್ಲಾ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳನ್ನು ಆಗಾಗ್ಗೆ ವಿಮರ್ಶೆಮಾಡಿ ಕೆಲವು ರೀತಿಯಲ್ಲಿ ನೇರವಾದ ಜವಾಬ್ದಾರಿಯನ್ನು ತಾನು ಹೊತ್ತು ತಾಲ್ಲೂಕುಗಳ ಹಿತದೃಷ್ಟಿಯಿಂದ ಕೆಲಸಮಾಡುವುದರಿಂದ ಸೆಕ್ರೆಟೇರಿಯಟ್ ಮತ್ತು ಮಂತ್ರಿಮಂಡಲದ ಮೇಲೆ ಹೊರೆ ಮತ್ತು ತೊಂದರೆ ಕಡಮೆಯಾಗುತ್ತದೆ ಮತ್ತು ಸ್ಥಳೀಯ ಮಟ್ಟದಲ್ಲಿ ಎಲ್ಲಾ ಕಾರ್ಯಗಳನ್ನು ಪರಿಶೀಲಿಸಿ ಆದಷ್ಟು ಬೇಗ ಮಂಜೂರುಮಾಡುವುದಕ್ಕೆ ಮತ್ತು ದೂರು ಕೊಡುವುದಕ್ಕೆ ಹತ್ತಿರವಾಗುವುದರಿಂದ ಅಲ್ಲಿ ಹೆಚ್ಚು ಅಭಿವೃದ್ಧಿಯನ್ನು ಈ ಸಂಸ್ಥೆ ಸಹಕಾರದಿಂದ ಮಾಡಬಹುದು.

ಇನ್ನು ಅಧಿಕಾರಿ ಹೇಗಿರಬೇಕು, ಎಷ್ಟಿರಬೇಕು ಮತ್ತು ಯಾವ ರೀತಿ ನಾವು ಪ್ರಾತಿನಿಧ್ಯ ಕೊಡಬೇಕು ಎಂಬ ವಿಚಾರವಿದೆ. ಗ್ರಾಮ ಪಂಚಾಯಿತಿ ಚುನಾವಣೆ ಒಂದು ಸಲ ಮಾಡಿ ತಾಲ್ಲೂಕುಬೋರ್ಡ್ ಮತ್ತು ಜಿಲ್ಲಾಪರಿಷತ್ತಿನ ಚುನಾವಣೆಯನ್ನು ಒಂದೇ ಸಲ ಮಾಡಬಹುದು. 25ರಿಂದ 0 ಸಾವಿರಕ್ಕೆ ಒಬ್ಬ ಪ್ರತಿನಿಧಿ ಇರಬೇಕೆ ಅಥವ ಸ್ವಲ್ಪ ಹೆಚ್ಚುಕಡಮೆ ಇರಬೇಕೆ ಎಂದು ವಿಚಾರಮಾಡಬಹುದು. ಇದರಲ್ಲಿ ಹೇಗಿರಬೇಕೆಂಬ ನಿಯಮವಿಲ್ಲ. ಜಿಲ್ಲಾಪರಿಷತ್ತನ್ನು ಒಳ್ಳೆಯ ರೀತಿಯಲ್ಲಿ ಸಂಘಟಿಸಿ ನೇರವಾಗಿ ಚುನಾಯಿತ ಪ್ರತಿನಿಧಿಯನ್ನು ಕಳಿಸಿ ಅದರ ಅಧೀನದಲ್ಲಿ ಜಿಲ್ಲೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮಹಾರಾಷ್ಟ್ರದಲ್ಲಿರುವ ಹಾಗಿರಬೇಕು. ಇದು ಅಗತ್ಯ. ತಾಲ್ಲೂಕು ಅಭಿವೃದ್ಧಿಗಾಗಿ ಇರುವ ಅಸಿಸ್ಟೆಂಟ್ ಇಂಜನಿಯರು ಈ ದಿವಸದವರೆಗೂ ಸಭೆಗೆ ಬರುತ್ತಿಲ್ಲ. ಇದಕ್ಕೆ ಒಂದು ಬೇರೆ ಕೇಡರ್ ನಿರ್ಮಾಣಮಾಡಬೇಕು, ತಾಲ್ಲೂಕು ಬೋರ್ಡ್ ಮಾಡುವ ಬಾವಿ ರಸ್ತೆ, ಸೇತುವೆ, ಶಾಲಾ ಕಟ್ಟಡ ಅಥವ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಸ್ಕ್ರೂಟಿನಿ ಮಾಡುವುದಕ್ಕೆ ಅದಕ್ಕೆ ಅಂದಾಜುಮಾಡುವುದಕ್ಕೆ, ಮೇಲ್ವಿಚಾರಣೆ ನಡೆಸುವುದಕ್ಕೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಿಬ್ಬಂದಿ ಇರಬೇಕು, ಅದು ತಾಲ್ಲೂಕು ಬೋರ್ಡ್ ಅಧ್ಯಕ್ಷರು ಮತ್ತು ಸಮಿತಿ ಅಧೀನದಲ್ಲಿರಬೇಕು. ಡಿಪ್ಲೊಮಾ ಹೋಲ್ಡರುಗಳು ಸಾವಿರಾರು ಜನರಿದ್ದಾರೆ, ದೊಡ್ಡ ದೊಡ್ಡ ತಾಲ್ಲೂಕುಗಳಿಗೆ ಅವರನ್ನು ನೇಮಕಮಾಡಬೇಕು. ಹಾಗೆ ಮಾಡದಿದ್ದರೆ ಮಾಡುವ ಕೆಲಸವನ್ನು ನೋಡುವವರೇ ಇಲ್ಲದಂತಾಗುತ್ತದೆ. ಹಾಗಾಗಿ ಸೇತುವೆಯ ಕೆಲಸವಾಗಿ ಫೈನಲ್ ಬಿಲ್ಲು ಆಗುವ ವೇಳೆಗೆ ಅದು ಬಿದ್ದು ಹೋಗಿರುತ್ತದೆ, ಸಂಬಂಧಪಟ್ಟ ಅಧಿಕಾರಿಗಳು ಬೇರೆ ಕಡೆಗೆ ವರ್ಗವಾಗಿ ಹೋಗಿರುತ್ತಾರೆ. ಇಂಥ ಉದಾಹರಣೆಗಳು ಬೇಕಾದಷ್ಟಿರುತ್ತವೆ. ಆದುದರಿಂದ ತಾಲ್ಲೂಕು ಬೋರ್ಡು ವ್ಯವಸ್ಥಿತವಾಗಿ ಕೆಲಸ ಮಾಡಬೇಕಾದರೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಂಬಂಧ ಸಂಸ್ಥೆ ಜೊತೆಗೆ ನೇರವಾಗಿರಬೇಕು. ಮತ್ತು ಅವರು ತಗ್ಗಿ ನಡೆಯಬೇಕು. ಅವರು ಹೇಳಿದಂತೆ ಕೇಳಬೇಕೆಂದು ನಾನು ಹೇಳುವುದಿಲ್ಲ. ತಾಲ್ಲೂಕಿನ ಅಭಿವೃದ್ಧಿಗೆ ಜವಾಬ್ದಾರಿ ಹೊತ್ತ ಜನರನ್ನು ಚುನಾಯಿಸಿ ಕಳುಹಿಸುವಾಗ ಸಂಸ್ಥೆಗೆ ಗೌರವದಿಂದ ಎಲ್ಲಾ ರೀತಿಯ ಸಹಕಾರ ಕೊಡುವಂತೆ ವ್ಯವಸ್ಥೆಮಾಡಬೇಕು, ಜಿಲ್ಲಾ ಮಟ್ಟದಲ್ಲೂ ಹಾಗೆಯೇ ಮಾಡಬೇಕು. ಅಷ್ಟನ್ನು ಮಾಡಿದರೆ ಬಹುಶಃ ಹೆಚ್ಚು ಕೆಲಸವನ್ನು ತ್ವರಿತವಾಗಿ ಸಾಧಿಸಲು ಸಾಧ್ಯವಾಗಬಹುದು.

ಹಣಕಾಸಿನ ವಿಷಯದಲ್ಲಿ ಒಂದೇ ಒಂದು ಮಾತು. ಇವತ್ತು ಜಮೀನು ಕಂದಾಯ ಕೊಡುವ ಬಗ್ಗೆ ಬೇಕಾದಷ್ಟು ವಿವಾದವಿದೆ. ಆ ಬಾಬತು ಹಣ ಹೇಗೆ ಹಂಚಬೇಕು, ಹಿಡುವಳಿ ಮೇಲೆ ಹಂಚ

ಬೇಕು, ಜನಸಂಖ್ಯೆ ಆಧಾರದಮೇಲೆ ಹಂಚಬೇಕು ಎಂದು ಬೇರೆಬೇರೆ ಅಭಿಪ್ರಾಯವಿದೆ. ಈಚೆಗೆ ಸ್ಥಳೀಯ ಸಂಸ್ಥೆಗಳಿಗೆ ಕಟ್ಟಡದ ಕರ ಇತ್ಯಾದಿ ಅನೇಕ ಕರಗಳನ್ನು ಕೊಡುವುದಾಗಿ ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗೆ ಕರ ಹೇರುವ ಜವಾಬ್ದಾರಿ ಇದೆ. ಅದಕ್ಕಿಂತ ಸರ್ಕಾರದ ಆದಾಯದಲ್ಲಿ ಇಷ್ಟು ಪಾಲು ಎಂದು ಕೊಡುವುದು ಕ್ಷೇಮ ಎಂದು ಒಬ್ಬ ಸದಸ್ಯರು ಹೇಳಿದರು. ಈ ಮಾತನ್ನು ತೀವ್ರವಾಗಿ ವಿಚಾರಮಾಡಬೇಕು. ಸೆಸ್ ಹಾಕುವುದು, ಕಂದಾಯ ವಸೂಲುಮಾಡುವುದು ಮುಂತಾದ್ದಕ್ಕೆ ಆಗುವ ಖರ್ಚನ್ನು ಈ ಸಂಸ್ಥೆಗಳು ವಹಿಸಲು ಸಾಧ್ಯವಿಲ್ಲ. ಮಸೂದೆಯಲ್ಲಿ ನಮೂದು ಮಾಡಿರುವಂತೆ ಕೆಲವರಿಗೆ ಯಾರು ಸಂಬಳ ಕೊಡಬೇಕು ಎಂಬುದು ಮಹತ್ವದ ವಿಷಯ. ಈ ದಿವಸ 3 ಸಾವಿರ ರೂಪಾಯಿ ಉತ್ಪತ್ತಿಯಿರುವ ಒಂದು ಸಣ್ಣ ಗ್ರಾಮ ಪಂಚಾಯಿತಿ 70—80—100 ರೂಪಾಯಿ ಸಂಬಳ ಕೊಟ್ಟು ಸೆಕ್ರೆಟರಿ ಇಟ್ಟುಕೊಳ್ಳುವ ಸ್ಥಿತಿಯಲ್ಲಿಲ್ಲ. ಹೀಗಿರುವಾಗ ನೇರವಾಗಿ ಕಟ್ಟಡದ ಕರ, ಭೂಕಂದಾಯ ಅಥವ ಸೇಲ್ಸ್ ಟ್ಯಾಕ್ಸ್ ಮುಂತಾದ್ದನ್ನು ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತಿಗೆ ವಹಿಸಿದರೆ ಹೇಗೆ? ಈ ದಿವಸ ಪಿ.ಡಬ್ಲು. ಇಲಾಖೆ ಕೆಲಸ, ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಕೆಲಸ ವಹಿಸಿದರೆ ಅದಕ್ಕಾಗಿ ಖರ್ಚಾಗುವ ಹಣ ಈ ಸಂಸ್ಥೆಗಳಿಗೆ ಕೊಡುವುದು ಬಹಳ ಅಗತ್ಯ. ಇಲ್ಲದಿದ್ದರೆ ಕೆಲಸವಾಗುವುದಿಲ್ಲ. ಈ ಸಂಸ್ಥೆಗಳು ಈಗ ಅಸ್ಥಿಪಂಜರದ ರೂಪವಾಗಿ ಇದ್ದು ಕಾಲ ಕಳೆಯುತ್ತಿವೆ. ಆದುದರಿಂದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಸಂಸ್ಥೆಗಳು ಶಕ್ತಿಯುತವಾಗಿ ಪ್ರಬಲವಾದ ಜನರ ಸಂಸ್ಥೆಗಳಾಗುವಂತೆ ಸಂಘಟಿಸುವುದು ಬಹಳ ಅಗತ್ಯ.

ಕೊನೆಯದಾಗಿ, ಶಿವಪ್ಪನವರು ತಾಲ್ಲೂಕು ಬೋರ್ಡ್ ಬೇಡ, ಜಿಲ್ಲೆಗೆ ಒಂದೇ ಒಂದು ಸಂಸ್ಥೆ ಸಾಕು ಎಂದು ಹೇಳಿದರು. ಅದು ಬಹಳ ವಿವಾದಾಸ್ಪದವಾದ ವಿಷಯ. ಗ್ರಾಮ ಮಟ್ಟದಲ್ಲಿ ಎಲ್ಲಾ ಸೌಲಭ್ಯವಿಲ್ಲದಿರುವುದರಿಂದ ಗ್ರಾಮ ಮತ್ತು ತಾಲ್ಲೂಕುಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಜಿಲ್ಲಾಮಟ್ಟದಲ್ಲಿ ಮೇಲ್ವಿಚಾರಣೆಗೆ ಮತ್ತು ಎಲ್ಲಾ ಕಡೆ ಹೋಗಿ ಸಂಘಟನೆ ಮಾಡಲು ಅಧಿಕಾರ ಕೊಟ್ಟು ಕೆಲಸಕ್ಕೆ ತಕ್ಕ ಹಣ ಜಿಲ್ಲೆಗಳಿಗೆ ಕೊಟ್ಟರೆ ಅನುಕೂಲ.

ಮಾನ್ಯ ಸದಸ್ಯರು ನ್ಯಾಯ ಪಂಚಾಯಿತಿ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಇದನ್ನು ಪ್ರಾಯೋಗಿಕವಾಗಿ ಮಾಡಬೇಕಾಗಬಹುದು. ಕೆಲವೊಮ್ಮೆ ಗ್ರಾಮ ಮಟ್ಟದಲ್ಲಿ ನಡೆಯುವ ವ್ಯವಹಾರಗಳನ್ನು ಇತ್ಯರ್ಥಮಾಡುವ ಹಾಗೆ ಅಂಥಾದ್ದನ್ನು ಕಾನೂನು ಬದ್ಧವಾಗಿ ಮಾಡುವುದಕ್ಕೆ ಅಡ್ಡಿಯಿಲ್ಲ. ಪ್ರಾಯೋಗಿಕವಾಗಿ ಬೇರೆ ದೇಶಗಳಲ್ಲಿ ಮಾಡಿದ್ದಾರೆ, ಆ ಪ್ರಕಾರ ಮಾಡಬಹುದು.

ಇಲ್ಲಿ ಕೆಲವರನ್ನು ಚುನಾವಣೆ ಮಾಡಬೇಕೆಂದು ಹೇಳಿ, ಅನಂತರ ಕೆಲವರನ್ನು ಕೋ-ಆಪ್ಟ್ ಮಾಡಿಕೊಳ್ಳಬೇಕೆಂದೂ ಹಾಗೆ ಕೋ-ಆಪ್ಟ್ ಮಾಡಿಕೊಳ್ಳುವುದರಲ್ಲಿ ಹರಿಜನರೂ ಮತ್ತು ಸ್ತ್ರೀಯರು ಇರಬೇಕೆಂದೂ ಹೇಳಲಾಗಿದೆ. ಆದರೆ ಇದರಲ್ಲಿ ಅದಷ್ಟುಮಟ್ಟಿಗೂ ನಾಮಕರಣ ಮಾಡುವುದು ಯೋಗ್ಯವಲ್ಲ. ಚುನಾವಣೆಗಳಿಂದ ಬರತಕ್ಕದ್ದು ನ್ಯಾಯ.

ಶ್ರೀ ಎ. ಶರಣಪ್ಪ (ದೇವದುರ್ಗ).—ಜಿಲ್ಲಾ ಪರಿಷತ್ತಿಗೆ ತಾವು ಚುನಾವಣೆಯಾಗಬೇಕೆಂದು ಹೇಳಿದಿರಿ. ಅದರಲ್ಲಿ ಎಷ್ಟು ಜನಸಂಖ್ಯೆ ಇರತಕ್ಕ ಪ್ರದೇಶಕ್ಕೆ ಎಷ್ಟು ಪ್ರಾತಿನಿಧ್ಯ ಇರಬೇಕೆಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ 20 ಸಾವಿರಕ್ಕೆ ಕಡಿಮೆಯಿಲ್ಲದೆ ಮತ್ತು 50 ಸಾವಿರಕ್ಕೆ ಜಾಸ್ತಿ ಇಲ್ಲದ ಜನಸಂಖ್ಯೆಗೊಬ್ಬ ಸದಸ್ಯನಿರಬೇಕೆಂದು ಇದರಲ್ಲಿ ಹೇಳಿದೆ. ಆದರೆ ಇನ್ನೂ ಹೆಚ್ಚಿಗೆ ಜನಸಂಖ್ಯೆ ಇರತಕ್ಕ ಪ್ರದೇಶಕ್ಕೆ ಇನ್ನೂ ಹೆಚ್ಚಿನ ಸದಸ್ಯರನ್ನು ಕೊಡಬಹುದು ಒಂದು ತಾಲ್ಲೂಕಿಗೆ ಎನಿಲ್ಲಾ ಎಂದರೂ 2–3 ಜನ ಸದಸ್ಯರನ್ನು ತಗೆದುಕೊಳ್ಳಬಹುದು. ಇದರಿಂದೇನೂ ಲುಕಸಾನಾಗುವುದಿಲ್ಲ. ಆದರೆ ಇವರನ್ನೆಲ್ಲಾ ನೇರವಾದ ಚುನಾವಣೆಯಿಂದ ಬರುವಂತೆ ಮಾಡಬೇಕು.

ಇನ್ನು ಈ ಶಬ್ದಗಳ ಆಯ್ಕೆಯ ವಿಚಾರದಲ್ಲಿ ಈಗಾಗಲೇ ಕೆಲವರು ಟೀಕೆಗಳನ್ನು ಮಾಡಿದ್ದಾರೆ. ಇದರಲ್ಲಿ ಇಂಗ್ಲೀಷಿನಲ್ಲಿ ಛೇರ್ಮನ್ ಅಥವಾ ಪ್ರೆಸಿಡೆಂಟ್ ಎಂದಿದೆ. ಕನ್ನಡದಲ್ಲಿ ಇದನ್ನು ಅಧ್ಯಕ್ಷ ಎಂದಿರಬೇಕೆಂದು ಕೆಲವರೂ ಇನ್ನು ಕೆಲವರು ಪಂಚ-ಸರಪಂಚ ಎಂದಿರಬೇಕೆಂದು ಹೇಳಿದ್ದಾರೆ, ಆದರೆ ಈ ಪಂಚಾಯಿತಿಗಳನ್ನು ಗ್ರಾಮ ಪಂಚಾಯಿತಿ ಮತ್ತು ಪುರಪಂಚಾಯಿತಿ ಅಂತ ಮಾಡಬಹುದು.

ಇನ್ನು ಹಳ್ಳಿ ಮತ್ತು ಗ್ರಾಮ ಟೌನುಗಳ ವಿಂಗಡಣೆಯಲ್ಲಿ: ಯಾವ ಗ್ರಾಮದಲ್ಲಿ 5 ಸಾವಿರಕ್ಕಿಂತ ಪ್ರಜಾ ಸಂಖ್ಯೆ ಕಡಮೆ ಇಲ್ಲದೆ ಇದ್ದು ಅದರ ಉತ್ಪತ್ತಿಯ ವರ್ಷಕ್ಕೆ 10 ಸಾವಿರ ರೂಪಾಯಿಗಳಿಗೆ ಕಡಮೆಯಾಗಿಲ್ಲದಿದ್ದಲ್ಲಿ ಅಂಥಾ ಗ್ರಾಮವನ್ನು ಪಂಚಾಯಿತಿ ಟೌನ್ ಎಂದು ಜಿಲ್ಲಾಧಿಕಾರಿಗಳು ಸಾರಬಹುದೆಂದು ಇದರಲ್ಲಿ ಹೇಳಿದೆ ಆದರೆ ಇಲ್ಲಿ ಅಧಿಕಾರಿಗಳಿಗೆ ಒಂದು ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ. ಯಾವುದು ಹಳ್ಳಿ, ಯಾವುದು ಟೌನು ಎಂಬುದನ್ನು ತೀರ್ಮಾನ ಮಾಡತಕ್ಕ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಒಂದು ಗ್ರಾಮದ ಜನಸಂಖ್ಯೆ 10 ಸಾವಿರದೊಳಗಿದ್ದರೂ ಅದನ್ನು ಹಳ್ಳಿಯಂತಲೇ ಡಿಕ್ಲೇರ್ ಮಾಡಬಹುದೆಂದು ಅದನ್ನೂ

(ಶ್ರೀ ಎಸ್. ಗೋಪಾಲಗೌಡ)

ಕೂಡ ಹೇಳಿದೆ. ಆದರೆ ಇದು ಬಹಳ ಜಟಿಲವಾದ ಪ್ರಶ್ನೆ. ಆದರೆ ಈಗ ಈ ಮಸೂದೆಯ ವಿಚಾರ ದಲ್ಲಿ ಇಷ್ಟು ಗೊಂದಲವೆದ್ದಿದ್ದರೂ ಈ ಅಧಿಕಾರಿಗಳಿಗೆ ಕೊಟ್ಟಿರತಕ್ಕ ಅಧಿಕಾರ ಜಾಸ್ತಿಯಾಗಿದೆ, ಆದಾಗ್ಯೂ ಜನರಿಗೆ ಈ ಅಧಿಕಾರಿಗಳು ತೊಂದರೆಯಾಗದ ಹಾಗೆ ಅವರ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಾರೆಂದೂ ಮತ್ತು ಇದರಲ್ಲಿ ಅನೇಕ ಲೋಪದೋಷಗಳನ್ನು ಸರಿಪಡಿಸಿ, ಆದರೆ ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಲೀ ಅಥವಾ ಈಗಿರುವುದಕ್ಕಿಂತ ಇದನ್ನು ತೀರಾ ಸಿಥಿಲಗೊಳಿಸುವುದಕ್ಕಾಗಲೀ ಆ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಅವಕಾಶಕೊಡದೆ, ಸರ್ಕಾರದವರೂ ಕೂಡ ಇದನ್ನು ಒಂದು ಆದರ್ಶ ತತ್ವವನ್ನಾಗಿ ಮಾಡಲು ಹವಣಿಸುತ್ತಾರೆಂದು ಆಶಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಮಾನ್ಯ ಅಧ್ಯಕ್ಷರೇ : ನಮ್ಮ ಮೈಸೂರು ರಾಜ್ಯದ ಪಂಚಾಯಿತಿಯ ಬಿಲ್ಲನ್ನು ನಾನು ಸಮರ್ಥಿಸುತ್ತೇನೆ ಮತ್ತು ಇದನ್ನು ಒಂದು ಕಾಯಿದೆಯ ರೂಪದಲ್ಲಿ ತಂದುದಕ್ಕಾಗಿ ನಾನು ನಮ್ಮ ಮಾನ್ಯ ರಾಮಕೃಷ್ಣ ಹೆಗ್ಗಡೆಯವರನ್ನು ಅಭಿನಂದಿಸುತ್ತೇನೆ. ಇದನ್ನು ಇಷ್ಟು ತ್ವರಿತಗತಿಯಲ್ಲಿ ಒಂದು ಮಸೂದೆಯನ್ನು ರಚಿಸಿ ಈ ಸಭೆಯ ಮುಂದೆ ಬರುವುದಕ್ಕೆ ಈ ವಿಚಾರದಲ್ಲಿ ಒಂದು ವರದಿಯನ್ನು ಒಪ್ಪಿಸಿದ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರಿಗೂ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಷ್ಟನ್ನು ಹೇಳಿ ನಾನೀಗ ಈ ಬಿಲ್ಲಿನ ವಿಚಾರದಲ್ಲಿ ಕೆಲವು ನನ್ನ ಸೂಚನೆಗಳನ್ನು ಕೊಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಗ್ರಾಮಗಳಲ್ಲಿರತಕ್ಕ ಪಂಚಾಯಿತಿಗಳು ಆಯಾಯ ಗ್ರಾಮಗಳ ಮಟ್ಟದಲ್ಲಿ ಒಂದು ಸುವ್ಯವಸ್ಥೆಯಿಂದ ತಮ್ಮ ತಮ್ಮ ಕೆಲಸಕಾರ್ಯಗಳನ್ನು ಇಲ್ಲಿನವರೆಗೂ ಮಾಡಿಕೊಳ್ಳುತ್ತಾ ಬಂದಿವೆ; ಅದನ್ನೆಲ್ಲಾ ಸರ್ಕಾರದವರು ಮನಗಂಡು ಈ ದಿವಸ ಇವುಗಳಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಹೇಳಿರತಕ್ಕದ್ದು ಒಳ್ಳೆಯದೇ ಆಯಿತು. ಈ ಭಾವನೆಗನುಸಾರವಾಗಿ ಅವುಗಳೂ ಸಹಾ ಇಲ್ಲಿಯತನಕ ಒಳ್ಳೆಯ ಉತ್ತಮ ಕಾರ್ಯಗಳನ್ನೆಲ್ಲ ಮಾಡಿಕೊಂಡು ಬಂದಿವೆ. ತಾಲ್ಲೂಕ್ ಮಟ್ಟದವರೆಗೂ ಇವು ಹೀಗೇ ಅಸ್ತಿತ್ವದಲ್ಲಿ ಬಂದಿರುತ್ತವೆ. ಗ್ರಾಮ ಮಟ್ಟದಲ್ಲಿ ಟಿ.ಡಿ. ಬೋರ್ಡ್ ಒಳ್ಳೆಯ ಕೆಲಸಮಾಡಿಕೊಂಡು ಬಂದಿದೆ. ಈ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಹೀಗೆ ಇಲ್ಲಿಯತನಕ ತಾಲ್ಲೂಕ್ ಬೋರ್ಡ್‌ಗಳು ತಾಲ್ಲೂಕ್ ಮಟ್ಟದಲ್ಲಿಯೂ ಮತ್ತು ಗ್ರಾಮ ಪಂಚಾಯಿತಿಗಳು ಗ್ರಾಮಗಳ ಮಟ್ಟದಲ್ಲಿಯೂ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಬಂದುದರಿಂದ ಇಲ್ಲಿ ಈ ದಿನ ಕುಳಿತಿರತಕ್ಕ ಅಸೆಂಬ್ಲಿಯ ಸದಸ್ಯರಾದ ನಮ್ಮೆಲ್ಲರಿಗೂ ಒಂದು ಗೌರವ ಉಂಟಾಗಿದೆಯೆಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಪ್ರಜಾಪ್ರಭುತ್ವದಲ್ಲಿ ಗ್ರಾಮಗಳಿಗೆ ಹೆಚ್ಚಿನ ಅಧಿಕಾರ ಇರಬೇಕೆಂಬುದು ನಿರ್ವಿವಾದವಾದ ವಿಷಯ. ಈ ವಿಚಾರವಾಗಿ ನಾವು ನಮ್ಮಲ್ಲಿ ಜನರಿಗೆ ಆಗಿಂದಾಗ್ಗೆ ಈ ಆದೇಶವನ್ನು ಕೊಡುತ್ತಲೇ ಬಂದಿದ್ದೇವೆ. ಈ ಹಿಂದೆ ನಾವು ಚುನಾವಣೆಗಳ ಸಂದರ್ಭದಲ್ಲಿಯೂ ಮತ್ತು ಇನ್ನಿತರ ಸಂದರ್ಭಗಳಲ್ಲಿಯೂ ಜನರಿಗೆ ಗ್ರಾಮದ ಮಟ್ಟದಲ್ಲಿ ಹೆಚ್ಚು ಹೆಚ್ಚಿನ ಅಧಿಕಾರವನ್ನು ದೊರಕಿಸಿ ಕೊಡುವುದಾಗಿ ನಾವು ಜನರಿಗೆ ತಾಲ್ಲೂಕ್ ಮಟ್ಟದಲ್ಲೂ ಹಾಗೂ ಜಿಲ್ಲಾ ಮಟ್ಟದಲ್ಲೂ ಆಶ್ವಾಸನ ಕೊಟ್ಟು ಬಂದಿದ್ದೇವು. ಈಗ ಅದು ಕಾರ್ಯಗತ ಆಗತಕ್ಕ ಸೂಚನೆಗಳು ಕಾಣುತ್ತಿವೆ.

ಆದರೆ ಇನ್ನು ಇದುವರೆಗೂ ಇಲ್ಲಿ ನಡೆದಿರತಕ್ಕ ಚರ್ಚೆಯನ್ನು ನೋಡಿದರೆ ಇಲ್ಲಿ 2 ಟಯರು ಗಳಿರಬೇಕೇ, 3 ಟಯರುಗಳಿರಬೇಕೇ ಎಂಬ ವಿಚಾರದಲ್ಲಿ ಬಹಳ ಚರ್ಚೆ ನಡೆದಿದೆ ಹಾಗೆ ಇಲ್ಲಿ 2ಡೇ ಟಯರುಗಳಿರಬೇಕೆಂಬುದಾಗಿದ್ದರೆ ಆ ಕೊಂಡಜ್ಜಿ ಬಸಪ್ಪ ಸಮಿತಿಯು ಅಗತ್ಯವೇ ಇರಲಿಲ್ಲ. ಆದರೆ ಆ ಸಮಿತಿಯವರು ದೇಶಾದ್ಯಂತವೂ ಅಡ್ಡಾಡಿಕೊಂಡು ಬಂದು ಅವರು ಯಾವುದೇ ಒಂದು ಸಣ್ಣಪುಟ್ಟ ಕೆಲಸಕ್ಕಾಗಲೀ ಈ ದಿವಸ ಜನರು ಹಳ್ಳಿಗಳಿಂದ ಹಾಗೂ ತಾಲ್ಲೂಕ್‌ಗಳಿಂದ ಮತ್ತು ಜಿಲ್ಲಾಗಳಿಂದ ರಾಜಧಾನಿಗೆ ಬರಬೇಕಾಗಿದೆ. ಇದರಿಂದ ಜನರಿಗೆ ತುಂಬಾ ಕಷ್ಟವಾಗುತ್ತದೆಂದು ಹೇಳಿ ಅವರು ಆಯಾಯಾ ಮಟ್ಟದಲ್ಲೇ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ಕೆಲಸಕಾರ್ಯಗಳನ್ನು ನೆರವೇರಿಸಲನುಕೂಲವಾಗುವಂತೆ ಕೆಲವು ಸಲಹೆಗಳನ್ನು ಸರ್ಕಾರಕ್ಕೊಪ್ಪಿಸಿದರು. ಅವರ ಒಂದು ತೀರ್ಮಾನದಂತೆ ಈಗ ಈ ವರದಿ ನಮ್ಮ ಮುಂದೆ ಬಂದಿದೆ.

ಆದರೆ ಈಗ ಜಿಲ್ಲಾಮಟ್ಟದಲ್ಲಿ ಒಂದು ಜಿಲ್ಲಾಪರಿಷತ್ತು ಇರಬೇಕೇ, ಬೇಡವೇ ಎಂಬ ವಿಚಾರದಲ್ಲಿ ದೊಡ್ಡ ವಾದವೆದ್ದಿದೆ. ನನ್ನ ಅಭಿಪ್ರಾಯದಲ್ಲಿ ತಾಲ್ಲೂಕ್‌ಮಟ್ಟದಲ್ಲಿ ಒಂದು ತಾಲ್ಲೂಕು ಬೋರ್ಡ್ ಮತ್ತು ಗ್ರಾಮಗಳ ಮಟ್ಟದಲ್ಲಿ ಒಂದು ಗ್ರಾಮ ಪಂಚಾಯಿತಿ ಇರತಕ್ಕದ್ದು ಹೇಗೆ ಅವಶ್ಯಕವೋ ಹಾಗೇ ಜಿಲ್ಲಾಮಟ್ಟದಲ್ಲಿಯೂ ಒಂದು ಜಿಲ್ಲಾ ಪರಿಷತ್ತು ತರಬೇಕಾದ್ದು ಅಗತ್ಯವೆಂದು ಭಾವಿಸಿದ್ದೇನೆ. ಇನ್ನು ಇವುಗಳಲ್ಲಿ ಈ ಅಸೆಂಬ್ಲಿಯ ಸದಸ್ಯರು ಇರಬೇಕೇ, ಬೇಡವೇ ಅನ್ನುವ ವಿಚಾ

ಬಂದಿದೆ. ಆದರೆ ಕೆಲವರು ಇವರಲ್ಲಿ ಏನೋ ಒಂದು ಶೋಭಾಯಮಾನ ದಲ್ಲಾದರೂ ಇರುವುದಕ್ಕೆ ಅವಕಾಶವಾಗಬೇಕೆಂದು ಹೇಳಿದ್ದಾರೆ. ಇವರಿಗೆ ಅಲ್ಲಿನ ಕಾರ್ಯಕಲಾಪಗಳಲ್ಲಿ ಓಟ್ ಮಾಡತಕ್ಕ ಅಧಿಕಾರ ವೇನೂ ಬೇಕಾಗಿಲ್ಲವೆಂದು ಕೆಲವರು ವಾದ ಮಾಡಿದ್ದಾರೆ. ಈ ರೀತಿಯ ಒಂದೂ ಸ್ಥಾನಮಾನವನ್ನು ಅಸೆಂಬ್ಲಿಯ ಸದಸ್ಯರಿಗೆ ಅಲ್ಲಿ ಒದಗಿಸಿಕೊಟ್ಟ ಪಕ್ಷಕ್ಕೆ ನಮ್ಮ ಕಿಮ್ಮತ್ತು ಖಂಡಿತ ಕಡಮೆಯಾಗುತ್ತದೆಂದು ಹೇಳುತ್ತೇನೆ. ನಾವಿಲ್ಲಿ ಒಂದು ಲಕ್ಷ ಜನರ ಪ್ರತಿನಿಧಿಗಳಾಗಿ ಬಂದು ಕುಳಿತಿದ್ದೇವೆ. ನಮಗೆ ಅಲ್ಲಿ ಮತದಾನ ಮಾಡತಕ್ಕ ಹಕ್ಕು ಇರಲೇ ಬೇಕು. ಇದಿಲ್ಲದೇ ಹೋದರೆ ನಾವು ನಾಳೆ ನಮ್ಮ ಕ್ಷೇತ್ರಕ್ಕೆ ಹೋದಾಗ ಜನರು ನಮ್ಮ ಕಡೆಗೆ ಅವರ ಮೂತಿ ಸಹ ತೋರಿಸುವುದಿಲ್ಲ. ಅಷ್ಟೇ ಅಲ್ಲದೆ ನಾವು ಇಲ್ಲಿ ಮಂತ್ರಿಗಳ ಹತ್ತಿರ ಹೋದಾಗಲೂ ಅವರು ನಮ್ಮನ್ನು ನೀವು ಈ ವಿಚಾರಗಳಲ್ಲಿ ಕೈಹಾಕ ಬಾರದೆಂದು ಹೇಳತಕ್ಕ ಪರಿಸ್ಥಿತಿ ನಾಳೆ ಬರಬಹುದು. ನಾವು ಇಲ್ಲಿ ಇಂಥಾ ಕಾನೂನುಗಳನ್ನು ಕೇವಲ ಒಂದು ಡಂಬಾಚಾರಕ್ಕಾಗಿ ಮಾಡುವುದಾದರೆ ಇದು ಖಂಡೀತಬೇಡ ಜನಸೇವೆಗೆ ಪ್ರತಿಯೊಂದು ಕಡೆಯಲ್ಲೂ ಅವಕಾಶವಿದ್ದೇ ಇದೆ. ಆದುದರಿಂದ ಅಸೆಂಬ್ಲಿಯ ಸದಸ್ಯರಿಗೂ ಮತ್ತು ಎಂ.ಪಿ.ಗಳಿಗೂ ಈ ಸಂಸ್ಥೆಗಳಲ್ಲಿ ಮತದಾನ ನೀಡತಕ್ಕಂಥ ಸದಸ್ಯತ್ವ ಇರಬೇಕೆಂದು ನಾನು ಹೇಳುತ್ತೇನೆ. ಇನ್ನು ಎಲ್ಲರೂ ಸದಸ್ಯರು ಆದರೆ 70-80 ಜನರ ಪಟ್ಟಿ ಆಗುತ್ತದೆಂದು ಸಂಶಯಪಟ್ಟಿದ್ದಾರೆ. ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಎಂದು ಇದ್ದರೆ 70-80 ಜನರು ಇರುತ್ತಿದ್ದರು. ಅದಕ್ಕೆ ಬದಲು ಕುರ್ಚಿಗಳಾದರೂ ಇರುತ್ತಿತ್ತು ಎಂಬ ವಿಚಾರಮಾಡುವ ಸಂದರ್ಭವಿತ್ತು. ಆದರೆ ಇಲ್ಲ 70-80 ಆದರೆ ವಿಚಾರಮಾಡುವ ಕಾರಣವಿಲ್ಲ. ಆ ವಿಚಾರವನ್ನು ಬಿಟ್ಟು ಎಲ್ಲಾ ಸದಸ್ಯರಿಗೂ ಅನುಕೂಲಮಾಡಿ ಕೊಡಬೇಕೆಂದು ನಾನು ಹೇಳಿ ಈಗ ಗ್ರಾಮ ಪಂಚಾಯತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ ಆಡಳಿತ ಯೋಗ್ಯ ರೀತಿಯಿಂದ ನಡೆಯುವ ಹಾಗೆ ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ತಾಲ್ಲೂಕು ಬೋರ್ಡುಗಳಿಗೆ ನೇರವಾಗಿ ಚುನಾವಣೆ ಇರಬೇಕೋ ಅಥವಾ ಅಪ್ರತ್ಯಕ್ಷ ವಾಗಿ ಚುನಾವಣೆ ಇರಬೇಕೋ ಎನ್ನುವುದು ಒಂದು ವಿಚಾರ. ಇದರೊಳಗೆ ಮೆಜಾರಿಟಿ ಅಂದರೆ 13 ಜನರು ಇರುವ ಸಮಿತಿಗೆ 7 ಜನರು ನೇರವಾಗಿ ಚುನಾವಣೆಯಿಂದ ಬರಬೇಕು, ಇನ್ನು 6 ಜನರು ಅಪ್ರತ್ಯಕ್ಷವಾದ ರೀತಿ ಬರಬೇಕು ಎಂಬುದಾಗಿ ಕಾಣಿಸಿದ್ದಾರೆ. ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ಏಕೆಂದರೆ ಗ್ರಾಮಪಂಚಾಯತಿಯ ಕೆಲವು ಜನರು ಆರು ಜನರನ್ನು ಆರಿಸಿದರೆ 400-500 ಜನರು ಇರತಕ್ಕ ಬೇರೆ ಪಕ್ಷದ ಜನರೂ ಕೂಡ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬಹುದು. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಹಿಂದೆ ಟೌನ್ ಮುನಿಸಿಪಾಲಿಟಿಗೆ ಜನರನ್ನು ಆರಿಸಿ ಕಳುಹಿಸುತ್ತಿದ್ದರು. ಸಾವಿರ ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಇರುತ್ತಿದ್ದರು. ನಾನು ಪ್ರತ್ಯಕ್ಷವಾಗಿ ಹೋಗಿದ್ದೆ. ಸಾವಿರ ಜನ ಸಂಖ್ಯೆಯ ಪೈಕಿ ಒಬ್ಬ ಶ್ರೀಮಂತ ಅಲ್ಲಿನ 800 ಜನರನ್ನೂ ಬೇರೆ ಊರಿಗೆ ಕರೆದುಕೊಂಡು ಹೋಗಿ ಅಲ್ಲಿಂದ 200 ಜನರನ್ನೂ ಬೇರೆ ಊರಿಗೆ ಕರೆದುಕೊಂಡು ಹೋಗಿ ಅಲ್ಲಿಂದ 200 ಜನ ಬೆನ್ನತ್ತಿದರು ಮತ್ತು ಅವರೇ ಬಂದು ಆರಿಸಿದರು. ಆ ಪ್ರಕಾರ ಅಪ್ರತ್ಯಕ್ಷವಾಗಿ ಗ್ರಾಮಪಂಚಾಯತಿ ಚುನಾವಣೆ ಯಾಗಿ ಕೆಲವು ಜನರನ್ನು ಆರಿಸುವುದಾದರೆ ಒಂದೇ ರಾತ್ರಿಯಲ್ಲಿ ಒಬ್ಬೊಬ್ಬ ಮನುಷ್ಯ ಓಟು ಹಾಕು ವುದೂ ಸಹ ತಪ್ಪಾಗುವುದಿಲ್ಲವೆಂದು ಮಾಡುತ್ತಾರೆ. ಆದ್ದರಿಂದ ನೇರವಾದ ಚುನಾವಣೆಯಾದರೆ ಪ್ರತಿಯೊಬ್ಬರೂ ಊರಿಗೆ ಹೋಗಬೇಕಾಗುತ್ತದೆ. ಅಲ್ಲಿ ಜನರ ಪ್ರೀತಿ ಮತ್ತು ವಿಶ್ವಾಸ ಪಡೆಯಬೇಕು ಅನಂತರ ಆರಿಸಿ ಬರುವುದಕ್ಕೆ ಸಾಧ್ಯವಾಗುತ್ತದೆ. ಆಗ ಸಮತಾ ಸಮಾಜವಾದದ ತತ್ವ ಯಶಸ್ವಿ ಯಾಗುತ್ತದೆ. ಕೆಲವರು ಹಿತ್ತಲ ಬಾಗಿಲಿನಲ್ಲಿ ಬರುವ ಹಾಗೆ ಬರುತ್ತಾರೆ, ಆದ್ದರಿಂದ ನೇರವಾದ ಚುನಾವಣೆ ಆಗ ಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಮುನಿಸಿಪಾಲಿಟಿಗಳಲ್ಲಾಗಲೀ, ತಾಲ್ಲೂಕು ಬೋರ್ಡುಗಳಲ್ಲಾಗಲಿ ಅಥವಾ ಗ್ರಾಮ ಪಂಚಾಯತಿಗಳಲ್ಲಾಗಲೀ ಚುನಾವಣೆಗೆ ನಿಲ್ಲತಕ್ಕದ್ದು ಇಲ್ಲವೆಂದು ಹೇಳಿ ಗ್ರಾಮಗಳಲ್ಲಿ ತಾಲ್ಲೂಕು ಬೋರ್ಡಿನ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೆ ಚುನಾವಣೆಗೆ ನಿಲ್ಲಬಾರದು ಎಂಬುದಾಗಿ ಕಾನೂನು ಹಿಂದಿನಿಂದ ನಡೆದಿದೆ. ಅದೇ ಪ್ರಕಾರ ಮುನಿಸಿಪಾಲಿಟಿ ಮತದಾರರ ಪಟ್ಟಿಯಲ್ಲಿ ಅವನ ಹೆಸರು ಇದ್ದರೆ ಅವನು ತಾಲ್ಲೂಕು ಬೋರ್ಡಿಗೆ ನಿಲ್ಲಬಾರದು ಎಂದು ಹೇಳುತ್ತಾರೆ. ಆದ್ದರಿಂದ ಆ ಮತದಾರರ ಪಟ್ಟಿಯಲ್ಲಿಯೂ ಅವನ ಹೆಸರು ಇರಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಳ್ಳಿಯ ಕಡೆ ಅವನ ಹೆಸರಿನಲ್ಲಿ ಒಂದು ಜಮೀನು ಇದ್ದರೆ ಆಗ ಅವನ ಹೆಸರು ಎರಡು ಸ್ಥಳಗಳಲ್ಲಿರುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಅಭಿವೃದ್ಧಿ, ಪಂಚಾಯತಿರಾಜ್ ಮತ್ತು ಸಹಕಾರಿ ಶಾಖೆಗಳ ಮಂತ್ರಿಗಳು).—ಆಗ ಒಂದು ಹೆಸರನ್ನು ಇಟ್ಟುಕೊಳ್ಳಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅದನ್ನು ತಯಾರು ಮಾಡುವ ಜನ ಪರ್ಮನೆಂಟಾಗಿ ಬರೆಯು ವಾಗ ಮಾಡಬೇಕು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಇನ್ನು ಲ್ಯಾಂಡ್ ರೆವಿನ್ಯೂ ವಿಚಾರ. ನಮ್ಮಲ್ಲಿ ಈವರೆಗೆ ಶೇಕಡ 97ರಷ್ಟು ಆದಾಯವನ್ನು ಆಯಾಯ ಊರಿಗೆ ಖರ್ಚುಮಾಡುತ್ತೇವೆಂದು ಹೇಳಿದರು. ಒಂದು ವೇಳೆ ಜನಸಂಖ್ಯೆ ಪ್ರಮಾಣದಂತೆ ಹಂಚಿದರೆ ನವಲ್‌ಗುಂದ್ ಪ್ರದೇಶಕ್ಕೆ 5 ಲಕ್ಷ ಕೊಡುತ್ತೇವೆ, ಧಾರವಾಡಕ್ಕೆ 4 ಲಕ್ಷ ಕೊಡಬೇಕಾಗುತ್ತದೆ. ಅಷ್ಟು ಹಣವನ್ನು ಅಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಲಿಲ್ಲವೆಂದು ಹೇಳಿದರೆ ಅಲ್ಲಿನ ಜನರಿಗೆ ಅನ್ಯಾಯಮಾಡಿದಂತಾಗುತ್ತದೆ. ಬೇರೆ ಪ್ರದೇಶಗಳಿಗೆ ಹಣ ಕೊಡುವುದನ್ನು ಕಡಿಮೆ ಮಾಡಿದರೆ ಇತರ ತಾಲ್ಲೂಕು ಬೋರ್ಡುಗಳು ಮತ್ತು ಗ್ರಾಮ ಪಂಚಾಯತಿಗಳಿಗೆ ಶೇಕಡಾ ಹತ್ತರಂತೆ ಕೊಟ್ಟು ಇನ್ನೂ ಉಳಿದ ಪ್ರದೇಶಗಳಿಗೂ ಹಂಚಬಹುದು. ಯಾವುದೋ ಹಣವನ್ನು ತೆಗೆದುಕೊಂಡು ಯಾರಿಗೆ ಕಷ್ಟವಿದೆಯೋ ಅವರು ಹಂಚಿಕೊಳ್ಳಿ ಎಂದು ಹೇಳುತ್ತಾರೆ. ಇದು ಆಡಳಿತಕ್ಕೆ ಒಳ್ಳೆಯ ರೀತಿಯಲ್ಲ, ಸರ್ಕಾರದವರಿಗೂ ಒಳ್ಳೆಯದಾಗುವುದಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಕೆಲವು ಪಂಚಾಯತಿಗಳಲ್ಲಿ ಸೆಕ್ರೆಟರಿಗಳಿಲ್ಲ, ಇನ್ನು ಕೆಲವು ಕಡೆಗಳಲ್ಲಿ ಸೆಕ್ರೆಟರಿಗಳಿದ್ದಾರೆ ಎಂಬುದಾಗಿ ನ್ಯೂನತೆಗಳು ಬಂದಿವೆ. ಎಲ್ಲಾ ಪಂಚಾಯತಿಗಳಿಗೂ ಸ್ವತಂತ್ರವಾಗಿ ಸೆಕ್ರೆಟರಿ ಇರಬೇಕು. ಆ ಸೆಕ್ರೆಟರಿಯನ್ನು ನೇಮಿಸುವುದನ್ನು ಚೀಫ್ ಎಗ್ಸಿಕ್ಯುಟಿವ್ ಆಫೀಸರಿಗೆ ಅಧಿಕಾರ ಕೊಟ್ಟಿದ್ದಾರೆ. ಅದನ್ನು ಕೊಡಕೂಡದು. ಅವರನ್ನು ಪಂಚಾಯತಿ ಕಮಿಟಿಗಳಿಂದ ಆರಿಸಬೇಕು. ಅವರ ಮುಖಾಂತರ ಈ ಕೆಲಸ ನಡೆಯಬೇಕು. ಒಬ್ಬ ಅಧಿಕಾರಿಗೆ ಇಂತಹ ಅಧಿಕಾರ ಕೊಟ್ಟು ಚುನಾಯಿತ ಪ್ರತಿನಿಧಿಗಳ ಮೇಲೆ ಅವನ ಆಡಳಿತ ಹೂಡಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ನ್ಯಾಯ ಪಂಚಾಯಿತಿಯ ವಿಷಯ. ಈಗ ನಾವು ಅಸೆಂಬ್ಲಿ ಮೆಂಬರುಗಳು, ಪಾರ್ಲಿಮೆಂಟ್ ಮೆಂಬರುಗಳು ಜನರ ಮನೆಮಠಗಳಿಗೆ ಹೋಗಿ ಅವರ ಮತ, ವಿಶ್ವಾಸ ತೆಗೆದುಕೊಂಡು ಆರಿಸಿ ಬಂದಿದ್ದೇವೆ. ಏನು ವಿಚಾರಗಳಿದ್ದರೂ ಅವುಗಳ ವಿಷಯದಲ್ಲಿ ಸಾತ್ವಿಕವಾಗಿ ನಡೆಯುವ ಹಾಗೆ ಇಲ್ಲ. ನಮ್ಮ ಮುಂದೆ ಅವು ಬಂದರೆ ನಾವು ಅಷ್ಟು ನಿಷ್ಠೂರವಾಗಿ ಮಾತನಾಡುವುದಕ್ಕಾಗುವುದಿಲ್ಲ. ಈ ನ್ಯಾಯ ಪಂಚಾಯಿತಿಯಲ್ಲಿ ಎರಡು ಸ್ಥಾನಗಳಿಗೆ ಚುನಾವಣೆಯಿಂದ ಆರಿಸಿ ಬರಬೇಕು ಎಂದು ಇದೆ ಮತ್ತು ಒಬ್ಬ ಹೆಣ್ಣು ಮಗಳು, ಒಬ್ಬ ಹರಿಜನ ಇವರನ್ನು ಕೊ-ಆಪ್ಟ್ ಮಾಡಲು ಅಧಿಕಾರವಿದೆ. ಇಂತಹ ಜನರಿಂದ ಕೂಡಿದ ಸಂಸ್ಥೆಯಿಂದ ನ್ಯಾಯ ಪಂಚಾಯಿತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರನ್ನು ಸರ್ಕಾರದವರು ನೇಮಿಸಬೇಕು; ಅಥವಾ ಕೆಲವೊಂದು ಜಿಲ್ಲೆಗಳ ಮಟ್ಟಿಗೆ ಇದನ್ನು ಜಾರಿಗೆ ತರಬಾರದು ಎಂಬುದಾಗಿ ನಾನು ಅಭಿಪ್ರಾಯ ಪಡುತ್ತೇನೆ. ಒಂದು ವೇಳೆ ಮಾಡಬೇಕೆಂದು ಅಪೇಕ್ಷೆ ಪಟ್ಟರೆ ಯಾವ್ಯಾವ ಜಿಲ್ಲೆಯೊಳಗೆ ಎಷ್ಟೆಷ್ಟು ಶಿಕ್ಷಣ ಪ್ರಸಾರವಿದೆಯೆಂಬುದನ್ನು ಉತ್ತಮ ಪ್ರಚಾರವಿರತಕ್ಕ ತಾಲ್ಲೂಕುಗಳಲ್ಲಿ ಈ ಪ್ರಕಾರ ಪ್ರಯೋಗ ಮಾಡಬಹುದು. ಇದನ್ನು ಈಗ ಜಾರಿಗೆ ತರಬೇಕೆಂದು ಹೇಳಿದರೆ ಜನಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ ಮತ್ತು ಅವರ ಮನಸ್ಸಿಗೆ ವಿರೋಧವಾಗಿ ನಡೆದಂತಾಗುತ್ತದೆ. ಅಲ್ಲಿ ರಾಜಕೀಯ ಇರಬಾರದು, ರಾಜಕೀಯವನ್ನು ಬಿಡಬೇಕು. ನಮ್ಮ ಜನತೆ ಕಾಯಿದೆ ಮತ್ತು ಕಾನೂನು ತಿಳಿಯುವ ತನಕ ಈ ನ್ಯಾಯ ಪಂಚಾಯಿತಿ ಮಾಡುವ ವಿಚಾರವನ್ನು ಮುಂದುವರಿಸಬೇಕು ಎಂದು ಹೇಳುತ್ತೇನೆ. ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ॥ ಸಿ. ಆರ್. ರಂಗೇಗೌಡ (ಮಾಗಡಿ).—ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇಟ್ಟಿರುವ ಮೈಸೂರು ಪಂಚಾಯಿತಿ ರಾಜ್ಯದ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಸ್ವಾಮಿ, ಪಂಚಾಯಿತಿ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಜಿಲ್ಲಾ ಪರಿಷತ್ತಿಗೆ ಚುನಾವಣೆ ನಡೆಸಬೇಕಾದರೆ ಮೈಸೂರು ಸಂಸ್ಥಾನದ ಶಾಸನ ಸಭೆಗಳಿಗೆ ಉಪಯೋಗಿಸತಕ್ಕ ಓಟರುಗಳ ಪಟ್ಟಿಯನ್ನು ಉಪಯೋಗಿಸುತ್ತಾರೆ. ಪಂಚಾಯತಿಗಳಿಗೆ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಮತ್ತು ಜಿಲ್ಲಾ ಪರಿಷತ್ತಿಗೆ ಅವಧಿ ಐದು ವರ್ಷಗಳು ಎಂಬುದಾಗಿ ನಿಗದಿ ಮಾಡಿದ್ದಾರೆ. ಯಾವ ರೀತಿ ಶಾಸನ ಸಭೆಗೆ ಐದು ವರ್ಷಗಳೆಂದು ಅವಧಿಯನ್ನು ನಿಗದಿಮಾಡಿ ಅದಕ್ಕೆ ಯಾವ ರೀತಿ ಓಟರುಗಳ ಪಟ್ಟಿಯನ್ನು ಉಪಯೋಗಿಸಿಕೊಳ್ಳುತ್ತಾರೋ ಅದೇ ರೀತಿಯಲ್ಲಿ ಸೈಮಲ್ಟೇನಿಯಸ್ಸಾಗಿ ಗ್ರಾಮ ಪಂಚಾಯಿತಿ, ತಾಲ್ಲೂಕ್ ಬೋರ್ಡ್ ಮತ್ತು ಜಿಲ್ಲಾ ಪರಿಷತ್ತುಗಳಿಗೂ ಅದೇ ಸಂದರ್ಭದಲ್ಲಿ ಚುನಾವಣೆ ನಡೆಸಬೇಕು. ಇದರಿಂದ ಸರ್ಕಾರಕ್ಕೆ ಖರ್ಚು ಉಳಿತಾಯವಾಗುತ್ತದೆ. ದೇಶದಲ್ಲಿ ಅಲ್ಪಸ್ವಲ್ಪ ಕಾಲದಲ್ಲಿ ಇವುಗಳ ಚುನಾವಣೆಗಳನ್ನು ಮಾಡುವುದರಿಂದ ಸರ್ಕಾರಕ್ಕೆ ಖರ್ಚು ಜಾಸ್ತಿಯಾಗುತ್ತದೆ. ಹಳ್ಳಿಗಳಲ್ಲಿ ಕಲುಷಿತ ವಾತಾವರಣ ಹುಟ್ಟುತ್ತದೆ. ಆ ರೀತಿಯಾಗುವುದಕ್ಕೆ ಅವಕಾಶವಿಲ್ಲದಂತೆ ಸೈಮಲ್ಟೇನಿಯಸ್ಸಾಗಿ ಈ ಚುನಾವಣೆಗಳನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

4-30 P.M.

ಮಾನ್ಯ ಮಂತ್ರಿಗಳು ಅವರ ಭಾಷಣದಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೂ ಮತ್ತು ಪಂಚಾಯಿತಿಗೂ ನಿಟಕ ಸಂಪರ್ಕ ಇರಬೇಕು, ಅದಕ್ಕಾಗಿ ಪಂಚಾಯಿತಿಗಳಿಂದ ಚುನಾಯಿತರಾದ ಸದಸ್ಯರು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಇರಬೇಕು, ಪ್ರತ್ಯಕ್ಷ ಚುನಾವಣೆ, ಅಪ್ರತ್ಯಕ್ಷ ಚುನಾವಣೆ ನಡೆಯಬೇಕು ಎಂದು ಹೇಳಿದರು. ಅಪ್ರತ್ಯಕ್ಷ ಚುನಾವಣೆಯನ್ನು ಮಾಡುವುದರಿಂದ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ಅದು ಕೂಡದು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಸಾಧುವಾದುದೇ ಸರಿ. ಅಧರೂ ಈ ವಿಚಾರದಲ್ಲಿ ನನ್ನ ವೈಯ್ಯಕ್ತಿಕವಾದ ಸಲಹೆಗಳನ್ನು ಕೂಡ ಸರ್ಕಾರದವರ ಮುಂದೆ ಇಡುತ್ತೇನೆ. ಪಂಚಾಯಿತಿಗೂ ಮತ್ತು ತಾಲ್ಲೂಕು ಬೋರ್ಡಿಗೂ ಹೆಚ್ಚಿನ ಸಂಪರ್ಕ ಇರಬೇಕಾದದ್ದು ಮುಖ್ಯ, ಏತಕ್ಕೆಂದರೆ ಈಗ ನಾವು ಇದುವರೆಗೂ ಲೋಕಲ್ ಬೋರ್ಡ್ ಆಕ್ಟನ್ನು ಜಾರಿ ತಂದಿರುವಂತಹ ಸಂದರ್ಭಗಳಲ್ಲಿ ಅನೇಕ ಎಡರುತೊಡರುಗಳನ್ನು ನೋಡಿದ್ದೇವೆ. ತಾಲ್ಲೂಕು ಬೋರ್ಡಿನಲ್ಲಿ ಆದ ಕೆಲವು ತೀರ್ಮಾನಗಳನ್ನು ಪಂಚಾಯಿತಿ ಕ್ಷೇತ್ರದಲ್ಲಿ ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಅಡ್ಡಿ ಆತಂತಗಳು ಬಂದಿವೆ. ಆದ್ದರಿಂದ ಪಂಚಾಯಿತಿಗಳಿಗೂ ಮತ್ತು ಬೋರ್ಡುಗಳಿಗೂ ನಿಕಟ ಸಂಪರ್ಕ ಇರಬೇಕಾದರೆ ಪ್ರತಿ ಪಂಚಾಯಿತಿಯ ಅಧ್ಯಕ್ಷರೂ ತಾಲ್ಲೂಕು ಬೋರ್ಡಿನ ಸದಸ್ಯರಾಗಿರಬೇಕು. ಪಂಚಾಯಿತಿಯ ಅಧ್ಯಕ್ಷರಾಗಿ, ತಾಲ್ಲೂಕು ಬೋರ್ಡಿನ ಸದಸ್ಯರಾಗಿ ಏನೊಂದು ತೀರ್ಮಾನವನ್ನು ತಾಲ್ಲೂಕ್ ಬೋರ್ಡಿನಲ್ಲಿ ತೆಗೆದುಕೊಳ್ಳುತ್ತಾರೆಯೋ ಅದನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯು ಪಂಚಾಯ್ತಿ ಅಧ್ಯಕ್ಷರ ಜವಾಬ್ದಾರಿಯಾಗಿರುವಂತೆ ಅವಕಾಶ ಕಲ್ಪಿಸುವ ವ್ಯವಸ್ಥೆಯಿರಬೇಕು ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ. 40-50 ಪಂಚಾಯಿತಿಗಳ ಅಧ್ಯಕ್ಷರು ಒಂದು ತಾಲ್ಲೂಕು ಬೋರ್ಡು ಸದಸ್ಯರಾಗಬೇಕಾದರೆ ಅದು ಬಹಳ ದೊಡ್ಡದಾಗುತ್ತದೆ ಎನ್ನುವ ಸಂದರ್ಭ ಕಂಡುಬಂದರೆ ಬ್ಲಾಕ್ ಸಮಿತಿಗಳನ್ನು ಮಾಡಿ ಅದರಲ್ಲಿ ಪಂಚಾಯಿತಿಯ ಅಧ್ಯಕ್ಷರು ಮತ್ತು ತಾಲ್ಲೂಕು ಬೋರ್ಡಿನ ಅಥವಾ ಬ್ಲಾಕ್ ಸಮಿತಿಯ ಸದಸ್ಯರಾಗಿ ಅವರಲ್ಲಿ ಒಬ್ಬರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಚುನಾಯಿಸಬೇಕು. ಹೀಗೆ ಮಾಡುವುದಾದರೆ ತಾಲ್ಲೂಕು ಬೋರ್ಡ್ ಅಥವಾ ಬ್ಲಾಕ್ ಸಮಿತಿಗಳಲ್ಲಿ ಪಂಚಾಯ್ತಿಗೆ ನಿಕಟವಾದ ಸಂಬಂಧ ಇರುತ್ತದೆ. ತಾಲ್ಲೂಕು ಬೋರ್ಡು ಮತ್ತು ಬ್ಲಾಕ್ ಸಮಿತಿಗಳಲ್ಲಿ ಏನು ತೀರ್ಮಾನವನ್ನು ಕೈಗೊಳ್ಳುತ್ತಾರೆಯೋ ಅದೇ ತೀರ್ಮಾನವನ್ನು ಪಂಚಾಯಿತಿಯ ಅಧ್ಯಕ್ಷರಾಗಿ ಕೈಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಅದನ್ನು ಅವರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ. ತಾಲ್ಲೂಕು ಬೋರ್ಡು ಮತ್ತು ಬ್ಲಾಕ್ ಸಮಿತಿಯವರು ಏನೊಂದು ತೀರ್ಮಾನವನ್ನು ಕೈಗೊಳ್ಳುತ್ತಾರೆಯೋ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅದರ ಜವಾಬ್ದಾರಿಯನ್ನು ಪಂಚಾಯಿತಿಯ ಅಧ್ಯಕ್ಷರಿಗೆ ಬಿಟ್ಟುಕೊಟ್ಟರೆ ಅದರಿಂದ ತಾಲ್ಲೂಕು ಬೋರ್ಡಿಗೂ ಮತ್ತು ಪಂಚಾಯಿತಿಗೂ ನಿಕಟ ಸಂಬಂಧ ಹೆಚ್ಚಾಗುತ್ತದೆ. ಅದಕ್ಕೋಸ್ಕರ ತಾಲ್ಲೂಕು ಬೋರ್ಡು, ಅಥವಾ ಬ್ಲಾಕ್ ಸಮಿತಿಗಳನ್ನು ನೇಮಿಸಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಆಮೇಲೆ ಜಿಲ್ಲಾ ಪರಿಷತ್ತನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರದವರು ಈಗ ಜಿಲ್ಲಾ ಪರಿಷತ್ತಿನವರಿಗೆ ಬೇಕಾದಷ್ಟು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಅವರಿಗೆ ಎಷ್ಟು ಹಣವನ್ನು ಕೊಡುತ್ತಾರೆಯೋ ಅವರು ಅಷ್ಟನ್ನು ಕಾರ್ಯರೂಪಕ್ಕೆ ತರುತ್ತಾರೆ. ಜಿಲ್ಲಾ ಪರಿಷತ್ತಿನವರಿಗೆ ಒದಗಿಸತಕ್ಕಂಥ ಹಣದಲ್ಲಿ ಅವರು ಯಾವ ರೀತಿ ಹಳ್ಳಿಗಾಡಿನ ಜನತೆಯ ಕಷ್ಟಗಳನ್ನು ನಿವಾರಣೆ ಮಾಡುತ್ತಾರೆ ಎನ್ನುವ ಒಂದು ಶಂಕೆ ಇದೆ. ಏಕೆಂದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಸಂಬಳ ಮತ್ತು ವಾಸದ ಮನೆ ಖರ್ಚು ಉಪಾಧ್ಯಕ್ಷರಿಗೆ ಸಂಬಳ ಈಗಲೂ ಹಳ್ಳಿಯಲ್ಲಿ ಸ್ಕೂಲ್‌ಗೆ ಕಟ್ಟಡ ಕೇಳಿದರೆ ಪಂಚಾಯ್ತಿಯಿಂದ ಹಣಬೇಕು. ತಾಲ್ಲೂಕು ಬೋರ್ಡಿನಿಂದ ಹಣ ಕೊಟ್ಟರೆ ಕಟ್ಟಿಸಿಕೊಡುತ್ತೇವೆಂದು ಹೇಳುತ್ತಾರೆ ಉಳಿದ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೇಳಿದರೆ ಜಿಲ್ಲಾ ಪರಿಷತ್ತಿನ ಕಡೆ ಕೈ ತೋರಿಸಿ ಸರ್ಕಾರ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಅವಕಾಶವಾಗಿರುತ್ತದೆ. ಈ ಜಿಲ್ಲಾ ಪರಿಷತ್ತನ್ನು ರಚನೆ ಮಾಡುವುದಾದರೆ ನಮ್ಮ ಮೈಸೂರಿನ ಸರ್ಕಾರದಲ್ಲಿ ಈಗ ಮಂತ್ರಿಗಳೇನಿದ್ದಾರೆಯೋ ಅವರ ಸಂಖ್ಯೆಯನ್ನು ಕಡಿಮೆ ಮಾಡಿ ಒಬ್ಬರೇ ಮುಖ್ಯಮಂತ್ರಿಗಳು ಇದ್ದುಕೊಂಡು ಸರ್ಕಾರದ ಕಾರ್ಯದರ್ಶಿಗಳ ಮೂಲಕ ಸರ್ಕಾರವನ್ನು ರಚಿಸಿ ಅದನ್ನು ನಡೆಸಿಕೊಂಡು ಹೋಗಬಹುದು. ಅದು ಸಾಧ್ಯವಿಲ್ಲವೆನ್ನುವುದಾದರೆ ಜಿಲ್ಲಾ ಪರಿಷತ್ತಿನ ಮಟ್ಟದಲ್ಲಿ ಒಂದು ಅಡ್ವೈಸರಿ ಬೋರ್ಡು ಇದ್ದು ಅವರಿಗೆ ಹೆಚ್ಚಿನ ಪವರನ್ನು ಕೊಟ್ಟು ಅದನ್ನು ಕಾರ್ಯರೂಪಕ್ಕೆ ತಂದರೆ ಸೂಕ್ತ. ಪಂಚಾಯಿತಿಯಲ್ಲಿ ಗ್ರಾಮ ಸಭಾ ಎಂದು ಯಾವ ರೀತಿ ಮಾಡಿದ್ದಾರೆಯೋ ಹಾಗೆಯೋ

(ಶ್ರೀ ಸಿ. ಆರ್. ರಂಗೇಗೌಡ)

ತಾಲ್ಲೂಕು ಮಟ್ಟದಲ್ಲಿಯೂ ಸಹ ತಾಲ್ಲೂಕು ಸಭಾ ಎಂದು ಮಾಡಿ ಪಂಚಾಯಿತಿಯ ಸದಸ್ಯರು ತಾಲ್ಲೂಕು ಸಭೆಯವರ ಅಭಿಪ್ರಾಯವನ್ನು ಸಂಗ್ರಹಿಸಿ ಏನೇನು ಕೆಲಸಗಳನ್ನು ಮಾಡಬೇಕು ಎನ್ನುವಂತಹ ವಿಚಾರ ವಿನಿಮಯ ಮಾಡಬೇಕು.

ಇನ್ನು ಕ್ಲಾಜ್ 9ರಲ್ಲಿ Appointment of an administrative committee or Administrator on failure to elect members of panchayats ಎಂದು ಹೇಳಿದ್ದಾರೆ. ಡೆಮಾಕ್ರಟಿಕ್ ಸೆಟಪ್‌ಅನ್ನು ಒಪ್ಪುವ ಸದಸ್ಯರು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಒಂದು ಪಂಚಾಯಿತಿಯ ಆಡಳಿತ ವ್ಯಾಪ್ತಿಯನ್ನು ಪಂಚಾಯಿತಿಯು ರಚನೆಯಾಗಲಿಲ್ಲವೆಂದ ಮಾತ್ರಕ್ಕೆ ಅಡ್ಮಿನಿಸ್ಟ್ರೇಟಿವ್ ಕಮಿಟಿಯನ್ನು ಅಥವಾ ಅಡ್ಮಿನಿಸ್ಟ್ರೇಟರನ್ನು ನಾಮಿನೇಟ್ ಮಾಡುವುದು ಸೂಕ್ತವಲ್ಲ. ಒಂದೇ ಸಾರಿಗೇಅಡ್ಮಿನಿಸ್ಟ್ರೇಟೀವ್ ಕಮಿಟಿಯನ್ನು ರಚಿಸದೆ ಜನಗಳಿಗೆ ಒಂದು ಸಾರಿ, ಎರಡು ಸಾರಿ ತಿಳುವಳಿಕೆ ಕೊಟ್ಟು ಪಂಚಾಯಿತಿಯವರು ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೆ ಒಂದು ಅವಕಾಶವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಆಮೇಲೆ Funds sholud be provided on quarterly basis. ಫಂಡ್ಸನ್ನು ವರ್ಷದ ಕೊನೆಯಲ್ಲಿ ಕೊಟ್ಟರೆ ಅದನ್ನು ಮಾರ್ಚಿ 31ನೇ ತಾರೀಖಿನೊಳಗಾಗಿ ಎಷ್ಟು ಹಣವನ್ನು ಖರ್ಚುಮಾಡಿ ಎಷ್ಟು ಕೆಲಸ ಕಾರ್ಯಗಳನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಈಗ ಯಾವುದಾದರೂ ಒಂದು ಬ್ಲಾಕ್ ಪ್ರಾರಂಭವಾದಾಗ ಅದಕ್ಕೆ ಹಣವನ್ನು ಒದಗಿಸಿದ ಮೇಲೆ ಅವು ಎಷ್ಟು ಹಣವನ್ನು ಖರ್ಚುಮಾಡಿದೆ. ಏನೇನು ಕೆಲಸ ಕಾರ್ಯಗಳನ್ನು ಸಾಧಿಸಿದೆ ಎನ್ನುವಂತಹ ಒಂದು ಪ್ರೋಗ್ರೆಸ್ ರಿಪೋರ್ಟನ್ನು ಅವರಿಂದ ತರಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಈ ಸಂಸ್ಥೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಏನೊಂದು ಹಣವನ್ನು ಸರ್ಕಾರದವರು ಒದಗಿಸುತ್ತಾರೆಯೋ ಅದನ್ನು ಕ್ವಾರ್ಟರ್ಲಿ ಬೇಸಿಸ್ ಮೇಲೆ ಹಂಚುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಕ್ಲಾಜ್ 245 ರಲ್ಲಿ ಜಿಲ್ಲಾ ಪರಿಷತ್ತಿನ ಆಫೀಸರ್ಸ್ ಮತ್ತು ಸರ್ವೆಂಟ್ಸ್‌ಗಳ ವಿಚಾರವನ್ನು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅದೇನೆಂದರೆ ಲೋಕಲ್ ಬಾಡಿಯಲ್ಲಿರತಕ್ಕ ನೌಕರರುಗಳಿಗೂ ಮತ್ತು ಸರ್ಕಾರಿ ನೌಕರರುಗಳಿಗೂ ಡಿಸ್‌ಕ್ರಿಮಿನೇಷನ್ ಇರಕೂಡದು. ಕ್ಲಾಸ್ 3 ಮತ್ತು ಕ್ಲಾಸ್ 4ನೇ ವರ್ಗದ ನೌಕರರಿಗೆ ಸರಿಯಾಗಿ ಸಂಬಳವನ್ನು ಕೊಡುವುದಕ್ಕೋಸ್ಕರ ಸರ್ಕಾರವೇ ಹಣವನ್ನು ಒದಗಿಸುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಈಗ ದೇಶದಲ್ಲಿ ಒಂದು ಪಾರ್ಟಿಯ ಸರ್ಕಾರ ಇದೆ. ಅಧಿಕ ಸಂಖ್ಯೆಯಲ್ಲಿ ಯಾರು ಚುನಾಯಿಸಿ ಬರುತ್ತಾರೆಯೋ ಅವರೇ ಸರ್ಕಾರದ ರೆಪ್ರೆಜೆಂಟ್ ಆಗಬಹುದು. ಆದ್ದರಿಂದ ಮೈನಾರಿಟಿ ಇದ್ದವರಿಗೆ, ವೀಕರ್ ಪಾಪ್ಯುಲೇಷನ್ ಇರುವ ಕಡೆ ನಿರ್ಲಕ್ಷ್ಯಭಾವನೆ ಬರಬಾರದು. ಈಗ ಉದಾಹರಣೆಗೆ ಹೇಳುವುದಾದರೆ ನಾನು ನಮ್ಮ ತಾಲ್ಲೂಕಿನಿಂದ ವಿರೋಧ ಪಕ್ಷದ ವತಿಯಿಂದ ಚುನಾವಣೆಯಾಗಿ ಬಂದಿದ್ದೇನೆ. ಅದಕ್ಕೋಸ್ಕರ ನಮ್ಮ ತಾಲ್ಲೂಕಿನಲ್ಲಿ 2 ವರ್ಷಗಳಿಂದ ನೀರಾವರಿ ಕಾಮಗಾರಿಗಳು ಆಗಿಲ್ಲ, ಇದು ಬಹಳ ವಿಷಾದಕರವಾದ ಸಂಗತಿ. ನನಗೇ ಈ ರೀತಿ ಆದಮೇಲೆ ಒಂದು ತಾಲ್ಲೂಕಿನಲ್ಲಿ, ಗ್ರಾಮದಲ್ಲಿ ವೀಕರ್ ಸೆಕ್ಷನ್‌ನವರ ಇಂಟರೆಸ್ಟನ್ನು ಸೇಫ್‌ಗಾರ್ಡ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಅದಕ್ಕೋಸ್ಕರ ಒಬ್ಬ ಅಧಿಕಾರಿಯನ್ನು ನೇಮಕಮಾಡಿ ಎಲ್ಲೆಲ್ಲಿ ವೀಕರ್ ಸೆಕ್ಷನ್ನಿಗೆ ತೊಂದರೆಯಾಗಿದೆ ಎಂಬುದನ್ನು ತನಿಖೆ ನಡೆಸಿ, ವೀಕರ್ ಸೆಕ್ಷನ್ನಿನವರ ಇಂಟರೆಸ್ಟನ್ನು ಸೇಫ್‌ಗಾರ್ಡ್ ಮಾಡಬೇಕೆಂದು ಸಲಹೆ ಮಾಡಿ, ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಘಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕ ಮೈಸೂರು ರಾಜ್ಯದ ಪಂಚಾಯಿತಿ ರಾಜ್ಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ನಾನು ಸ್ವಾಗತಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡಬೇಕೆಂದು ಇಚ್ಛಿಸುತ್ತೇನೆ. ಈಗಾಗಲೇ ಈ ಬಗ್ಗೆ ಬಹಳ ಜನರು ಅನೇಕ ಸಲಹೆಗಳನ್ನು ಕೊಟ್ಟ ಕಾರಣ ಪುನಃ ಅವುಗಳನ್ನೇ ನಾನು ರಿಪೀಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾದ ಕೆಲವು ಅಂಶಗಳನ್ನು ತಮ್ಮ ನಜರಿಗೆ ತರುವುದಕ್ಕೆ ನಾನು ಇಚ್ಛಿಸುತ್ತೇನೆ. ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಯಲ್ಲಿ 2–3 ಪಂಚಾಯಿತಿಗಳಿಗೆ ಒಬ್ಬರೇ ಕಾರ್ಯದರ್ಶಿಯವರು ಇರಬೇಕೆಂದು ಹೇಳಿದ್ದಾರೆ. ಇದರಲ್ಲಿ ನಾನು ಹೇಳುವುದು ಇಷ್ಟೇ. ಒಂದು ಪಂಚಾಯಿತಿಯು ತನ್ನದೇ ಆದ ಒಬ್ಬರು ಕಾರ್ಯದರ್ಶಿಯವರನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದರೆ ಅವರು ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಒಂದು ಪಂಚಾಯಿತಿಗೆ ಒಬ್ಬರು

ಕಾರ್ಯದರ್ಶಿಗಳು ಇರಬೇಕೆಂದು ನಾನು ಸೂಚನೆ ಮಾಡುತ್ತೇನೆ. ಆ ಮೇಲೆ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತು ಈ ಮೂರು ಹಂತದಲ್ಲಿ ಇರಬೇಕೆಂದು ನಾನು ಸೂಚಿಸುತ್ತೇನೆ. ಏತಕ್ಕೆಂದರೆ ಇವುಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಈಗ ಇರತಕ್ಕ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳು ವಿಷಯದಲ್ಲಿ ನನ್ನ ಒಂದು ಅನುಭವವನ್ನು ಹೇಳುವುದಾದರೆ ಅವು ಸರಿಯಾಗಿ ಕೆಲಸಮಾಡುವುದಿಲ್ಲ. ಆದ್ದರಿಂದ ಅವುಗಳ ವ್ಯವಸ್ಥೆ ಸರಿಯಾಗಿರ ಬೇಕೆಂದು ನಾನು ಮೇಲಿನ ಸೂಚನೆ ಸೂಚಿಸಲಿಚ್ಛಿಸುತ್ತೇನೆ.

ಇನ್ನು ಹಣದ ವಿಷಯವನ್ನು ಹೇಳುವುದಾದರೆ ಜನಸಂಖ್ಯೆಯ ಆಧಾರದ ಮೇಲೆ ಹಣವನ್ನು ಹಂಚುವುದಕ್ಕೆ ಈ ಮಾನ್ಯ ಸಭೆಯ ಮಾನ್ಯ ಕೆಲಸದಸ್ಯರು ಯಾರೂ ತಮ್ಮ ಒಂದು ಅಭಿಪ್ರಾಯವನ್ನು ಕೊಡಲಿಲ್ಲ. ಆದರೆ ಅದಕ್ಕೆ ನಾನು ಸೂಚಿಸುವುದೇನೆಂದರೆ ಈಗ ಎಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ನಾರ್ತ್ ಕೆನರಾದಲ್ಲಿ ಫಾರೆಸ್ಟ್ ಬಹಳ ಇದೆ. ಆದ್ದರಿಂದ ಅಲ್ಲಿ ಉತ್ಪತ್ತಿ ಬಹಳ ಬರುತ್ತದೆ. ಅಲ್ಲಿ ಎಷ್ಟು ಉತ್ಪತ್ತಿ ಬರುತ್ತದೆಯೋ ಅದೆಲ್ಲವನ್ನೂ ಅಲ್ಲಿಗೇ ಕೊಡಬೇಕು. ಹಾಗೆಯೇ ಬೇರೆ ಬೇರೆ ಕಡೆಗಳಲ್ಲಿ ಆಯಾ ಭಾಗದಲ್ಲಿ ಏನೇನು ರೆವಿನ್ಯೂ ಬರುತ್ತದೆಯೋ ಅದೆಲ್ಲವನ್ನೂ ಆಯಾಯ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೇ ಕೊಡಬೇಕು. ಹಾಗೆಯೇ ನಮ್ಮ ನಾರ್ತ್ ಕೆನರಾದಲ್ಲಿ ಏನು ರೆವಿನ್ಯೂ ಬರುತ್ತದೆಯೋ ಅದೆಲ್ಲವನ್ನೂ ಅಲ್ಲಿರತಕ್ಕ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೇ ಕೊಡ ಬೇಕೆಂದು ನಾನು ಸೂಚನೆ ಮಾಡಿದರೆ ಸರಿಯಾಗಲಿಕ್ಕಿಲ್ಲ. ಈಗ ಹಣಕಾಸನ್ನು ಜನಸಂಖ್ಯೆಯ ಆಧಾರದ ಮೇಲೆ ಹೇಗೆ ಹಂಚಬೇಕೆಂದು ಇದರಲ್ಲಿ ಹಾಕಿದ್ದಾರೆ ಅದು ಯೋಗ್ಯವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ನ್ಯಾಯ ಪಂಚಾಯಿತಿಗಳ ಬಗ್ಗೆ ಕೆಲವೊಂದು ಅಭಿಪ್ರಾಯಗಳು ಕಂಡು ಬರುತ್ತವೆ. ಅದರಲ್ಲಿ ಪೂರ್ತಿ ಎಲ್ಲ ಕಡೆಯೂ ನ್ಯಾಯ ಪಂಚಾಯಿತಿ ಆಗಬೇಕೆಂದು ಎಲ್ಲಿಯೂ ಹೇಳಿಲ್ಲ. ಆದರೆ ಅದು ಕಾಯದೆಯಲ್ಲಿ ಸೇರ್ಪಡೆಯಾಗಿರುವುದು ಉಚಿತವೆಂದು ನಾನು ತಿಳಿಯುತ್ತೇನೆ. ಈಗ ಮುಂಬೈ ಕರ್ನಾಟಕದ ಭಾಗದೊಳಗೆ ನ್ಯಾಯ ಪಂಚಾಯಿತಿಗಳು ಇದ್ದು ಕೆಲವೇ ಪಂಚಾಯಿತಿಗಳಲ್ಲಿ ಅವು ಕೆಲಸ ಮಾಡುತ್ತಿವೆ. ಇದರಿಂದ ಸಣ್ಣ ಸಣ್ಣ ನ್ಯಾಯಗಳನ್ನು ತಮ್ಮಲ್ಲಿಯೇ ತೀರ್ಮಾನ ಮಾಡಿ ಕೊಂಡು ತಾಲ್ಲೂಕಿಗೋ ಜಿಲ್ಲೆಗೋ ಹೋಗುವುದನ್ನು ತಪ್ಪಿಸಿದ್ದಾರೆ. ಹಿಂದಿನಿಂದಲೂ ಹಳ್ಳಿಗಳಲ್ಲಿ ಪಂಚಾಯಿತಿ ಕುಳಿತುಕೊಳ್ಳುವುದಿತ್ತು. ಈ ವಿಧೇಯಕದಲ್ಲಿ ಎಲ್ಲ ಕಡೆಯೂ ನ್ಯಾಯ ಪಂಚಾಯಿತಿ ಗಳನ್ನು ಕೊಡಲಿಕ್ಕೆ ಸ್ಪಷ್ಟವಾಗಿ ಹೇಳುವುದಿಲ್ಲ. ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ನ್ಯಾಯ ಪಂಚಾಯಿತಿ ಗಳನ್ನು ಸ್ಥಾಪನೆ ಮಾಡಲಿಕ್ಕೆ ಅವಕಾಶವಿರಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಜಿಲ್ಲಾ ಪರಿಷತ್ತಿನಲ್ಲಿ ಇರಬೇಕೋ ಬೇಡವೋ ಎನ್ನುವ ಪ್ರಶ್ನೆ ಬಂದಿದೆ. ಜನರ ಪ್ರತಿನಿಧಿಗಳು ಜಿಲ್ಲಾ ಪರಿಷತ್ತಿನಲ್ಲಿ ಇಲ್ಲದೆ ಹೋದರೆ ಹೇಗೆ? ಮಾನ್ಯ ಸದಸ್ಯರು ಏಕೆ ಹಾಗೆ ಅಭಿಪ್ರಾಯ ಪಡುತ್ತಾರೆಯೋ ನನಗೆ ತಿಳಿಯದು. ಜಿಲ್ಲಾ ಪರಿಷತ್ತಿನಲ್ಲಿ ಅವರಿಗೂ ಸ್ಥಾನವಿರಬೇಕು ಎನ್ನುವುದು ನನ್ನ ಅಭಿಪ್ರಾಯ.

ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಧ್ಯಕ್ಷರೇ, ನಮ್ಮ ಸರ್ಕಾರದವರು ತಂದಿರತಕ್ಕ ಈ ಮಸೂದೆ ಬಹಳ ಮಹತ್ವವಾದುದು ಮತ್ತು ಪ್ರಗತಿಪರವಾದುದು ಎಂದು ಹೇಳುತ್ತಾರೆ, ನಿಜ. ನಾವು ಪ್ರಗತಿ ಯನ್ನು ಸಾಧಿಸಿದ್ದೇವೆಂದು ಹೇಳುವುದಕ್ಕೆ ಇದರಲ್ಲಿ ಅಳವಡಿಸಬೇಕಾದ ಅನೇಕ ಅಂಶಗಳನ್ನು ಅವರು ಕಾಣಿಸಿಲ್ಲ. ಈ ತರಹ ನಾವು ಪಂಚಾಯಿತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತುಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇವುಗಳು ರಚನೆಯಾದ ಮೇಲೆ ಸರ್ಕಾರದ ಆದಾಯ ಎಷ್ಟು ಬರುತ್ತದೆ, ಎಷ್ಟೆಷ್ಟು ಆದಾಯವನ್ನು ಯಾವ ಯಾವ ಸಂಸ್ಥೆಗಳಿಗೆ ಕೊಡುತ್ತೀರಿ, ಮಂತ್ರಿ ಮಂಡಲದ ಸಂಖ್ಯೆಯನ್ನು ಎಷ್ಟು ಕಡಮೆ ಮಾಡುತ್ತೀರಿ, ಮೂಲ ಭೂತವಾಗಿ ಇಷ್ಟು ಹಣವನ್ನು ಮತ್ತು ಕೆಲಸ ಗಳನ್ನು ಅವರಿಗೆ ವಹಿಸಿಕೊಟ್ಟ ಮೇಲೆ ಮಂತ್ರಿ ಮಂಡಲದಲ್ಲಿ ಎಷ್ಟು ಜನ ಇರಬೇಕು 27 ಜನ ಇರುವು ದನ್ನು 37 ಮಾಡುತ್ತೀರಾ, ಹೇಗೆ ಮಾಡುತ್ತೀರಿ? ನಿಮಗೆ ಮಾಡುವುದಕ್ಕೆ ಯಾವ ಕೆಲಸವೂ ಇಲ್ಲದ ಮೇಲೆ ಮಂತ್ರಿ ಮಂಡಲದಲ್ಲಿ ಕೆಲವು ಜನ ಮಾತ್ರ ಬೇಕಾಗುತ್ತಾರೆ. ಈ ಮಸೂದೆ ಕಾನೂನಾಗಿ ಜಾರಿಗೆ ಬಂದರೆ ಎಷ್ಟು ಜನ ಮಂತ್ರಿಗಳು ಬೇಕಾಗುತ್ತಾರೆ, ಹಣ ಎಷ್ಟು ಉಳಿತಾಯವಾಗುತ್ತದೆ ಎಂಬುದನ್ನು ಮಂತ್ರಿಗಳು ತಿಳಿಸಲಿಲ್ಲ. ಈಗ ಇರುವ ತಾಲ್ಲೂಕು ಬೋರ್ಡ್ ಡಿಸ್ಟ್ರಿಕ್ಟ್ ಕೌನ್ಸಿಲ್ ಇವುಗಳಿಗೆ ಕೆಲಸವನ್ನು ಬೇಕಾದಷ್ಟು ವಹಿಸಿದ್ದೇವೆ ಎಂದು ಹೇಳಿದ್ದೀರಿ. ಆದರೆ ಏನು ಕೆಲಸವಾಗಿದೆ ಎನ್ನುವುದನ್ನು ನೋಡಬೇಕು. ಇವತ್ತು ನೂರಾರು ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ಹಾಕಿಲ್ಲ, ಪಂಚಾಯಿತಿಯಲ್ಲಿ 25 ಜರಲ್ಯೂಷನ್‌ಗಳನ್ನು ಮಾಡಿದರೂ ಅಲ್ಲಿಯ ಸೆಕ್ರೆಟರಿಯನ್ನು ವರ್ಗ ಮಾಡು ವುದಿಲ್ಲ. ರಸ್ತೆ ಕೆಲಸ ಮಾಡುತ್ತ ಇಲ್ಲ, ಕೆರೆ ಕೆಲಸ ಮಾಡುತ್ತ ಇಲ್ಲ. ನಾವು ಪ್ರಶ್ನೆಗಳನ್ನು ಕೇಳಿದಾಗ ಕೆರೆ ಕೆಲಸ ಆಗಲಿಲ್ಲ ಎಂದರೆ ತಾಲ್ಲೂಕು ಬೋರ್ಡಿಗೆ ವಹಿಸಿದ್ದೇವೆ, ಪಂಚಾಯಿತಿಗೆ ವಹಿಸಿದ್ದೇವೆ,

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಜಿಲ್ಲಾ ಬೋರ್ಡಿಗೆ ವಹಿಸಿದ್ದೇವೆ ಎಂದು ನೆಪ ಹೇಳುತ್ತೀರಿ. ಈ ಮಸೂದೆಯನ್ನು ತಂದಿದ್ದೀರಿ, ಅದರೆ ಇದರ ಪ್ರಕಾರ ಅಧಿಕಾರಗಳನ್ನು ವರ್ಗಾವಣೆ ಮಾಡಿ ಜನಗಳ ಕೈಗೆ ಕೊಡಬೇಕು ಎನ್ನುವುದು ನಿಮ್ಮಲ್ಲಿಲ್ಲ ಎಂದು ಎದ್ದು ಕಾಣುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಪ್ರೈಮರಿ ಶಾಲೆಗಳನ್ನು ವಹಿಸಿದ್ದೀರಿ. ಶೇಕಡ ಐದರಷ್ಟು ಸ್ಕೂಲುಗಳೂ ರಿಪೇರಿಯಾಗುತ್ತಿಲ್ಲ. ನೂರಕ್ಕೆ 25 ಸ್ಕೂಲುಗಳು ಬಿದ್ದು ಹೋಗುತ್ತಿವೆ. ಇದನ್ನು ಪರೀಕ್ಷೆ ಮಾಡಬೇಕಾದರೆ ಹಳ್ಳಿಗಳಿಗೆ ಹೋಗಿ ನೋಡಬೇಕು. ಸ್ಥಳೀಯ ಸಂಸ್ಥೆಗಳಿಗೆ ಬೇಕಾದ ಹಣಕ್ಕಾಗಿ ನೀವೇ ತೆರಿಗೆಯನ್ನು ಹಾಕಿಕೊಳ್ಳಿ ಎಂದು ಉದಾರವಾಗಿ ಹೇಳಿದ್ದೀರಿ. ಅವರಿಗೆ ನೀವೇನೂ ಹೇಳಬೇಕಾದಿಲ್ಲ. ಪುಣ್ಯಾತ್ಮರನ್ನು ದಾನ ಧರ್ಮ ಕೊಡಿ ಎಂದರೆ ಕೊಡುತ್ತಾರೆ. ಅದಕ್ಕೆ ದೊಡ್ಡ ಪ್ರಗತಿಪರವಾದ ಒಂದು ಮಸೂದೆಯನ್ನು ತಂದಿದ್ದೇವೆ ಎಂಬುದಾಗಿ ಹೊಗಳಿಸಿಕೊಳ್ಳಬೇಕಾದ ಅವಶ್ಯಕತೆ ಏನೂ ಇಲ್ಲ. ಇದು ಅಂಥ ಮಸೂದೆ ಏನೂ ಅಲ್ಲ. ಸ್ವರ್ಗಕ್ಕೂ ಏರಲಿಲ್ಲ, ನರಕಕ್ಕೂ ಇಳಿಯಲಿಲ್ಲ ಎನ್ನುವಂತೆ ತ್ರಿಶಂಕು ಸ್ವರ್ಗವಾಗಿದೆ, ಅಂತರ ಪಿಶಾಚಿಯಂತೆ ಇದೆ. ಯಾವುದಕ್ಕೇ ಆಗಲೀ ನಿಮ್ಮನ್ನೂ ಕೇಳುವ ಹಾಗಿಲ್ಲ, ತಾಲ್ಲೂಕು ಬೋರ್ಡ್, ಜಿಲ್ಲಾ ಪರಿಷತ್ತುಗಳನ್ನೂ ಕೇಳುವ ಹಾಗೆ ಇಲ್ಲ. ಈ ಬಿಲ್‌ನಿಂದ ಏನು ಅಧಿಕಾರವನ್ನು ಕೊಡುತ್ತೀರಿ ಅದಕ್ಕೆ ತಕ್ಕಷ್ಟು ಹಣವನ್ನೂ ಕೊಡಬೇಕು. ಅಷ್ಟು ಹಣವನ್ನು ಕೊಡುವುದಕ್ಕೆ ಅವಕಾಶವಿಲ್ಲ. ಅದುದರಿಂದ ಈ ಮಸೂದೆಯಿಂದ ಏನೂ ಪ್ರಯೋಜನವಿಲ್ಲವೆಂದು ನಾನು ತಮಗೆ ಹೇಳುತ್ತೇನೆ.

ನ್ಯಾಯ ಪಂಚಾಯಿತಿಯ ವಿಚಾರ ಬಹಳ ಚನ್ನಾಗಿ ಹೇಳುತ್ತಿದ್ದಾರೆ. ನಾನು ಅದನ್ನು ಕೇಳುತ್ತಿದ್ದೇನೆ. ನಮಗೆ ಕಾಣುವಂತೆ ಲಕ್ಷಾಂತರ ಜನರ ಪ್ರತಿನಿಧಿಯಾಗಿ ಆರಿಸಿ ಬಂದಿರುವ ನಮಗೇ ನೀವು ಇಲ್ಲಿ ಕೊಡತಕ್ಕ ಪಂಚಾಯಿತಿಯನ್ನು ನೋಡಿದರೆ ಸರ್ಕಾರದ ಪಕ್ಷದ ಸದಸ್ಯರಿಗೆ ಒಂದು ತರಹ, ಇತರ ಸದಸ್ಯರಿಗೆ ಇನ್ನೊಂದು ತರಹ ಮಹಿಳೆಯರಿಗೆ ಮತ್ತೊಂದು ತರಹ ಹೀಗೆ ಶಾಸನ ಸಭಾ ಸದಸ್ಯರ ವಿಚಾರದಲ್ಲಿಯೇ ತಾರತಮ್ಯವನ್ನು ತೋರಿಸುವಾಗ ಪಂಚಾಯತಿಗೆ ಚುನಾವಣೆಯಾದ ಮನುಷ್ಯನಿಗೆ ಎಷ್ಟರಮಟ್ಟಿಗೆ ನ್ಯಾಯ ದೊರೆಯುತ್ತದೆ ಎಂದು ಹೇಳಬಹುದು. ನಿಮ್ಮಗಳ ಮುಂದಿನ ಚುನಾವಣೆಗಳಿಗೆ ತರಪೇತು ಮಾಡಿಕೊಳ್ಳಬೇಕು, ಅಲ್ಲಿಯ ಜನ ನಿಮ್ಮ ಹಿಂಬಾಲಕರಾಗಿ ನುತ್ತಬೇಕು ಎಂದು ಮಾಡುತ್ತಿದ್ದೀರಿ. ಏನೋ ಒಂದು ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಮಾಡುತ್ತಿದ್ದೀರೆಂದು ಅರ್ಥವಾಗುತ್ತದೆ. ಇಂಥ ಮಸೂದೆಯನ್ನು ಮಾಡಬೇಕೇ ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಿ ತರಬೇಕಾಗಿದೆ.

ಅಪ್ರತ್ಯಕ್ಷ ಚುನಾವಣೆಗಳಿಗೆ ಇದರಲ್ಲಿ ಅವಕಾಶವನ್ನು ಮಾಡಿದ್ದೀರಿ. ಮಹಿಳೆಯರು ಮುಂದೆ ಬರಬೇಕು ಎನ್ನುವ ವಿಷಯವೂ ಇದೆ. ಸಾಮಾನ್ಯವಾಗಿ ಗ್ರಾಮ ಪಂಚಾಯತಿ ಛೇರ್‌ಮನ್ ಚುನಾವಣೆಗಳಲ್ಲಿ ಮಹಿಳಾ ಸದಸ್ಯರನ್ನು ಮೂರು-ನಾಲ್ಕು ದಿವಸ ಬಚ್ಚಿಟ್ಟಿದ್ದು ಚುನಾವಣೆ ನಡೆಯುವ ದಿವಸ ಅವರನ್ನು ಕರೆದುಕೊಂಡು ಬಂದು ಹತ್ತು ರೂಪಾಯಿ ಕೊಟ್ಟು, ಸೀರೆ ಕೊಡಿಸಿ ವಾಪಸು ಕಳಿಸಿದರು. ಇದನ್ನು ಪ್ರತ್ಯಕ್ಷವಾಗಿ ನೋಡಿದ್ದೇವೆ. ಇಂಥವು ನಡೆಯುತ್ತವೆ. ಈ ಅಪ್ರತ್ಯಕ್ಷ ಚುನಾವಣೆಗಳೇನು ಒಳ್ಳೆಯದಲ್ಲ. ಪ್ರತಿ ದಿವಸ ಬೆಳಗಾದರೆ ಸಹಕಾರ ಸಂಘಗಳ ಚುನಾವಣೆ, ಮಾರ್ಕೆಟಿಂಗ್ ಸೊಸೈಟಿ ಚುನಾವಣೆ, ಪಂಚಾಯಿತಿ ಚುನಾವಣೆ, ತಾಲ್ಲೂಕು ಬೋರ್ಡ್ ಚುನಾವಣೆ, ಜಿಲ್ಲಾ ಪರಿಷತ್ ಚುನಾವಣೆ, ಶಾಸನ ಸಭೆಯ ಚುನಾವಣೆ ಹೀಗಾಗಿ ಒಬ್ಬ ಮನುಷ್ಯ ತನ್ನ ವ್ಯವಸಾಯ, ವ್ಯಾಪಾರ, ಉದ್ಯೋಗ ಬಿಟ್ಟು ಚುನಾವಣೆಗಳಲ್ಲಿಯೇ ಕಾಲ ಕಳೆಯಬೇಕಾದರೂ ಅದು ಎಷ್ಟರ ಮಟ್ಟಿಗೆ ಸಹಾಯವಾದೀತು ಎಂದು ಕೇಳುತ್ತೇನೆ. ಪಂಚಾಯತಿ ಚುನಾವಣೆಯಾಗುವಾಗ ತಾಲ್ಲೂಕು ಬೋರ್ಡ್, ಜಿಲ್ಲಾ ಪರಿಷತ್ತು ಎಲ್ಲದಕ್ಕೂ ಬೇರೆ ಬೇರೆ ಪೆಟ್ಟಿಗೆಗಳನ್ನಿಟ್ಟು ಚುನಾವಣೆಗಳನ್ನು ಒಂದೇ ಸಲ ನಡೆಸಬೇಕು. ಹಾಗೆಯೇ ಮೂರು ಅಧ್ಯಕ್ಷ ಸ್ಥಾನದ ಚುನಾವಣೆಯೂ ಇದರ ಜೊತೆಯಲ್ಲಿಯೇ ನಡೆಯಬೇಕು. ಮತದಾರರಿಗೆ ಸಂಬಂಧಪಟ್ಟ ಸಂಸ್ಥೆಗಳ ಅಧ್ಯಕ್ಷರನ್ನು ಚುನಾಯಿಸುವ ಅವಕಾಶವಿರಬೇಕು. ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಹಾಗೆ ಈ ಚುನಾವಣೆಗಳನ್ನೂ ನಡೆಸುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ.

ತಾಲ್ಲೂಕು ಬೋರ್ಡಗೆ 10 ಎಕರೆಗೆ ಒಳಪಟ್ಟ ಕೆರೆಗಳನ್ನು ನೋಡಿಕೊಳ್ಳುವ ಅಧಿಕಾರವನ್ನು ಕೊಟ್ಟಿರಿ. ಒಂದೇ ಒಂದು ಕೆರೆಯನ್ನು ಮೈಸೂರು ಸಂಸ್ಥಾನದಲ್ಲಿ ಸರಿಪಡಿಸಿ ನೀರಾವರಿಗೆ ಅನುಕೂಲವಾಗುವಂತೆ ಮಾಡಿದ್ದಾರೆಯೇ? ಹಾಗೆಯೇ 250 ಎಕರೆಗೆ ಒಳಪಟ್ಟ ಕೆರೆಗಳನ್ನು ತಾಲ್ಲೂಕು ಬೋರ್ಡ್ ಅಥವಾ ಜಿಲ್ಲಾ ಪರಿಷತ್ತಿಗೆ ವಹಿಸಿದರೆ ಅವುಗಳ ನಿರ್ವಹಣೆಗೆ ನೀವು ಹಣವನ್ನು ಕೊಡಿ, ಎಕ್ಸಿಕ್ಯೂಟಿವ್ ಆಫೀಸರನ್ನು ಕೊಡಿ, ಟೆಕ್ನಿಕಲ್ ಆಫೀಸರನ್ನು ಕೊಡಿ ಎಂದು ಕೇಳುತ್ತಾರೆ. ಬ್ರಿಟಿಷರು ನಮಗೆ ಅಧಿಕಾರವನ್ನು ಕೊಟ್ಟದ್ದು ಯಾವಾಗ ಎಂದರೆ ಅವರಿಂದ ನಮ್ಮನ್ನು ಆಳುವುದಕ್ಕೆ ಆಗುವುದಿಲ್ಲ ಎಂದು ತಿಳಿದು ಬಂದು ದೇಶದಲ್ಲಿ ಅರಾಜಕತೆ ಪ್ರಾರಂಭವಾದಾಗ, ಹಾಗೆಯೇ ನೀವೂ ನಿಮ

ಕೈಯಲ್ಲಿ ಆಳುವುದಕೆ ಆಗುವುದಿಲ್ಲ, ಹೇಳಿದ ಕೆಲಸವನ್ನು ಮಾಡಿಸಿಕೊಡುವುದಕ್ಕೆ ಆಗುವುದಿಲ್ಲ ಎಂದು ಕಂಡುಬಂದಾಗ ನಿಮ್ಮ ಕೆಲಸವನ್ನು ನೀವೇ ಮಾಡಿಕೊಳ್ಳಿ ಎನ್ನುವ ಉದ್ದೇಶ ನಿಮ್ಮಲ್ಲಿದೆ. ನ್ಯಾಯವಾದ ಮಸೂದೆಯನ್ನು ತಂದು ಜನಗಳಿಗೆ ಒಪ್ಪಿಗೆಯಾಗುವಂತೆ ಚುನಾವಣೆಗಳನ್ನು ನಡೆಸಬೇಕು ಎಂದು ಹೇಳುತ್ತೇನೆ. ನಿಜವಾಗಿಯೂ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿ ಸಂಚಾರ ಮಾಡಿ ಮಂತ್ರಿಗಳು ತಾಲ್ಲೂಕು ಬೋರ್ಡುಗಳು ಹೇಗೆ ಕೆಲಸ ಮಾಡಿವೆ ಎನ್ನುವುದನ್ನು ನೋಡಿದ್ದಾರೆಯೆ ಎಂದು ಗ್ರಾಮ್ಯಭಾಷೆಯಲ್ಲಿ ಕೇಳಬೇಕೆಂಬ ಇಚ್ಛೆ ಇತ್ತು, ಆದರೆ ಈಗ ಹಾಗೆ ಕೇಳುವುದಿಲ್ಲ. ಸಾಮಾನ್ಯ ಜನರು ಅವರನ್ನು ಚುನಾಯಿಸಿ ಮಂತ್ರಿಗಳಾಗಿ ಮಾಡಿದ್ದಾರೆ. ಇದರು ಇಪ್ಪತ್ತೆಂಟು ಬಿಲ್ಲುಗಳನ್ನು ತಂದು ಈ ಸಭೆಯ ಕಾಲವನ್ನು ಕಳೆಯುತ್ತಿದ್ದಾರೆ. ಇವುಗಳಿಂದ ಯಾರಿಗೂ ಪ್ರಯೋಜನವಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ, ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ದಿನಗಳಿಂದ ಪಂಚಾಯಿತಿ ರಾಜ್ಯ ಮಸೂದೆಯ ಮೇಲೆ ಮಾನ್ಯ ಸದಸ್ಯರು ಮಾಡಿದ ಭಾಷಣಗಳನ್ನು ಬಹಳ ಕುತೂಹಲದಿಂದ ನಾನು ಕೇಳಿದ್ದೇನೆ. ಸಾಮಾನ್ಯವಾಗಿ ಈ ಮಸೂದೆಗೆ ಮಾನ್ಯ ಸದಸ್ಯರು ಕೊಟ್ಟ ಸ್ವಾಗತಕ್ಕಾಗಿ ನಾನು ಕೃತಜ್ಞನಾಗಿದ್ದೇನೆ ಮತ್ತು ಅದನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಆದರೆ ಆಗಾಗ ಮಾನ್ಯ ಸದಸ್ಯರು ಕೆಲವರು ಮಾಡಿದ ಕೆಲವು ಟೀಕೆಗಳನ್ನು ಕೇಳಿ ನನಗೆ ಆಶ್ಚರ್ಯವಷ್ಟೇ ಅಲ್ಲ, ಸ್ವಲ್ಪ ಮಟ್ಟಿಗೆ ಆಘಾತ ಕೂಡ ಆಯಿತೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಏಕೆಂದರೆ ಕೆಲವು ಸದಸ್ಯರು ಪಂಚಾಯಿತಿ ರಾಜ್ಯದ ಮೂಲಭೂತ ತತ್ವವನ್ನೂ ಅವಹೇಳನ ಮಾಡಿ ಅದರ ಮೇಲೆ ಟೀಕೆ ಮಾಡಿದ್ದಾರೆ. ಈ ರೀತಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನು ಸ್ಥಾಪನೆ ಮಾಡಿ ಹಳ್ಳಿಗಳಲ್ಲಿ ಗೊಂದಲವನ್ನುಂಟುಮಾಡುತ್ತಾರೆ, ಹಳ್ಳಿಗಳಲ್ಲಿ ವಾಸಮಾಡತಕ್ಕ ಜನರಿಗೆ ಇನ್ನೂ ಸಾಕಷ್ಟು ತಿಳಿವಳಿಕೆ, ಜ್ಞಾನ, ಅನುಭವ ಬರಲಿಲ್ಲವಾದುದರಿಂದ ಇದುವರೆಗಿದ್ದಂತಹ ಸಂಸ್ಥೆಗಳನ್ನು ಕೂಡ ರದ್ದು ಮಾಡಬೇಕೆಂದು ಕೂಡ ಒಬ್ಬಿಬ್ಬರು ಸದಸ್ಯರು ಟೀಕೆ ಮಾಡಿದರು. ಇದನ್ನು ಮಾನ್ಯ ದೇವಯ್ಯನವರು ಹೇಳಿದರೆಂದು ಕಾಣುತ್ತದೆ. ಈ ಮಾತನ್ನು ಕೇಳಿ ನನಗೆ ಆದಂತೆಯೇ ಇನ್ನೂ ಅನೇಕ ಸದಸ್ಯರಿಗೂ ಆಘಾತವಾಗಿರಬಹುದು. ಈ ತತ್ವವನ್ನು ಇಂದು ನಾವು ಚರ್ಚೆ ಮಾಡಬೇಕಾದ ಪ್ರಮೇಯವಿಲ್ಲ. ಈ ದೇಶದ ನಲವತ್ತು ಕೋಟಿ ಜನರು ಸ್ವತಂತ್ರರು ಮತ್ತು ಈ ದೇಶ ಸಾರ್ವಭೌಮತ್ವದಿಂದ ಕೂಡಿದ ದೇಶ, ಜನತೆಯ ಕೈಲಿ ಸಾರ್ವಭೌಮಾಧಿಕಾರವಿದೆ ಎಂದು 1950ನೆಯ ಇಸವಿ ಜನವರಿ 26ನೆಯ ತಾರೀಖು ಘೋಷಣೆ ಮಾಡಿ ಪ್ರತಿಜ್ಞಾಬದ್ಧರಾದೆವೋ ಆಹೊತ್ತಿನಿಂದ ನಾವು ಹೇಳಲಿ, ಹೇಳದಿರಲಿ, ಅಧಿಕಾರ ಜನತೆಯದು. ಸ್ವಾತಂತ್ರ್ಯ ಬಂದು 18 ವರ್ಷದಮೇಲೆ ಮತ್ತೆ ನಮ್ಮ ದೇಶಕ್ಕೆ ಒಂದು ಘಟನೆಯನ್ನು ಮಾಡಿಕೊಂಡು ಸುಮಾರು ಹದಿನಾಲ್ಕು ವರ್ಷಗಳ ಮೇಲಾಯಿತು; ಈಗ ಪುನಃ ಇಂತಹ ಮಾತು ಆಗಾಗ ನಮ್ಮ ಕಿವಿಯ ಮೇಲೆ ಬಿದ್ದರೆ ನಾನು ಯಾವ ಶಬ್ದಗಳಿಂದ ಇದನ್ನು ಧಿಕ್ಕರಿಸಬೇಕೋ ನನಗೆ ಗೊತ್ತಾಗುವುದಿಲ್ಲ. ಇದು ನಾನು ಪ್ರಸ್ತಾವಿಕ ಭಾಷಣದಲ್ಲಿ ಹೇಳಿದಹಾಗೆ ಜನತೆಯ ಮೇಲಿರತಕ್ಕ ಶ್ರದ್ಧೆ ಮತ್ತು ವಿಶ್ವಾಸದ ಪ್ರಶ್ನೆ. ಯಾವ ಜನತೆಗೆ ಈ ದೇಶದ ಪಾರ್ಲಿಮೆಂಟಿನ 500 ಜನ ಸದಸ್ಯರ ಮತ್ತು ರಾಜ್ಯಗಳ ವಿಧಾನಮಂಡಲಗಳ ಸದಸ್ಯರನ್ನು ಆರಿಸುವ ವಿವೇಕ ಮತ್ತು ಅನುಭವ ಮತ್ತು ತಿಳುವಳಿಕೆ, ಕಾಮನ್‌ಸೆನ್ಸ್ ಇದೆ ಎಂದು ತಿಳಿದುಕೊಂಡಿದ್ದೇವೋ ಅದೇ ಜನತೆಗೆ ಅವರ ಊರು, ಗ್ರಾಮ, ಅವರ ತಾಲ್ಲೂಕು ಮತ್ತು ಅವರ ಜಿಲ್ಲೆಗೆ ಸಂಬಂಧಪಟ್ಟ ವಿಚಾರದಲ್ಲಿ ಆಡಳಿತ ನಡೆಸಿಕೊಂಡು ಹೋಗುವ ವಿವೇಕ, ಅನುಭವ ಮತ್ತು ಜ್ಞಾನ ಇಲ್ಲವೆಂದು ಹೇಳಿದರೆ ನಮ್ಮ ದೇಶದಲ್ಲಿ ಒಂದು ಪ್ರತಿರೋಧವಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ಇಂದು ಈ ಪ್ರಜಾಪ್ರಭುತ್ವ ಮತ್ತು ಪಂಚಾಯಿತಿ ರಾಜ್ಯ ಇವು ಶಾಶ್ವತವಾಗಿರುವುದಕ್ಕೆ ಬಂದಿರುವ ವಿಚಾರವೇ ಹೊರತು ಕೇವಲ ಒಂದು ಅಲ್ಪಕಾಲದ ವಿಚಾರವಲ್ಲ. ಮಾನ್ಯ ಸದಸ್ಯರು ಮಾಡಿದ ಕೆಲವು ಮುಖ್ಯ ಸೂಚನೆಗಳನ್ನೂ ಟೀಕೆಗಳನ್ನೂ ಮಾತ್ರ ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಇಚ್ಛಿಸುತ್ತೇನೆ.

ಮೊದಲನೆಯದಾಗಿ, ಈ ಮಸೂದೆಯಲ್ಲಿ ಕಾಣಿಸಿರುವಂತೆ ಈ ಸಂಸ್ಥೆಗಳ ರಚನೆ ಎರಡು ಮಟ್ಟಗಳಲ್ಲಿ ಆಗಬೇಕೆ ಅಥವಾ ಮೂರು ಮಟ್ಟಗಳಲ್ಲಿ ಆಗಬೇಕೆ ಎನ್ನುವ ವಿಚಾರ; ಎರಡು ಅಥವಾ ಮೂರು ಮಟ್ಟಗಳಲ್ಲಾದರೆ ಅವರವರ ಸಂಬಂಧ ಯಾವ ರೀತಿ ಇರಬೇಕೆಂಬ ವಿಚಾರ. ಮಾನ್ಯ ಸದಸ್ಯರು ಕೆಲವರು ಮೂರು ಮಟ್ಟಗಳಲ್ಲಿ ಈ ಸಂಸ್ಥೆಗಳಿರಬೇಕೆಂದು ಹೇಳಿದರು, ಇನ್ನು ಕೆಲವರು ಜಿಲ್ಲಾ ಮಟ್ಟದಲ್ಲಿ ಇಂತಹ ಸಂಸ್ಥೆಯ ಅಗತ್ಯವಿಲ್ಲವೆಂದು ಹೇಳುವ ಧಾಟಿಯಲ್ಲಿ ಮಾತನಾಡಿದರು. ಈ ಮಸೂದೆಯ ಮುಖ್ಯ ಜೀವಾಳ ಈ ಮೂರು ಮಟ್ಟದ ಸಂಸ್ಥೆಗಳ ರಚನೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಈ ಮಸೂದೆಯಲ್ಲಿ ಕಾಣಿಸಿದಂತೆ ಎಕ್ಸಿಕ್ಯೂಟಿವ್ ಅಧಿಕಾರ ಇರುವಂತೆ ಒಂದು ಸಂಸ್ಥೆಯ ಅಗತ್ಯವಿಲ್ಲವೆಂದು ಭಾವಿಸಿದರೆ ಈ ಮಸೂದೆ ಈಹೊತ್ತು ನಮ್ಮ ಮುಂದೆ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಸಂಸ್ಥೆಗಳಿಗೆ ಸ್ವಲ್ಪ ಹೆಚ್ಚು ಜವಾಬ್ದಾರಿ ಅಥವಾ ಕೆಲಸವನ್ನು ವಹಿಸಬೇಕೆಂಬ ಉದ್ದೇಶ ನಮಗಿದ್ದರೂ ನಾವು ಅಡ್ಮಿನಿಸ್ಟ್ರೇಟಿವ್ ಆರ್ಡರ್ ಮೂಲಕ ಅಥವಾ ಏನಾದರೊಂದು ತಿದ್ದು

(ಶ್ರೀ ರಾಮಕೃಷ್ಣ ಹೆಗ್ಗಡೆ)

ಪಡಿಯನ್ನು ಈಗಿರುವ ಕಾಯಿದೆಗೇ ತಂದು ಮಾಡಬಹುದಾಗಿತ್ತು. ಆದರೆ ಉದ್ದೇಶ ಅದಲ್ಲ; ಈಗಿರುವ ಪರಿಸ್ಥಿತಿಯಲ್ಲಿ, ವ್ಯವಸ್ಥೆಯಲ್ಲಿ ಒಂದು ಅವಶ್ಯಕ ಬದಲಾವಣೆಯಾಗಬೇಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಾಕಷ್ಟು ಅಧಿಕಾರವುಳ್ಳ ಒಂದು ಸಂಸ್ಥೆಯು ಸ್ಥಾಪನೆಯಾಗಬೇಕೆಂಬ ಉದ್ದೇಶದಿಂದ ನಾವು ಈ ಮಸೂದೆಯನ್ನು ತಂದಿರುವುದು.

5-00 P.M.

ಈಗ ನಾನು ಮೊದಲು ಗ್ರಾಮ ಮಟ್ಟದಿಂದ ಪ್ರಾರಂಭಿಸುತ್ತೇನೆ. ಗ್ರಾಮ ಪಂಚಾಯತಿ ವಿಚಾರದಲ್ಲಿ ಸಾಮಾನ್ಯವಾಗಿ ಮಾನ್ಯ ಸದಸ್ಯರ ಹೇಳಿಕೆಗಳಲ್ಲಿ ಭಿನ್ನಾಭಿಪ್ರಾಯ ಬರಲಿಲ್ಲ. ಕೆಲವು ಸದಸ್ಯರು ಮಾತ್ರ ಅವುಗಳಿಗೆ ಇನ್ನೂ ಹೆಚ್ಚು ಅಧಿಕಾರ ಇರಬೇಕೆಂದು ಅಂದರು. ಇನ್ನು ಕೆಲವು ಸದಸ್ಯರು ಹೆಚ್ಚು ಅಧಿಕಾರ ಇರಕೂಡದು ಎಂದು ಹೇಳಿದರು. ಸಾಮಾನ್ಯವಾದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬೇಕು, ಬಹಳ ಕೆಲಸ ಒದಗಿಸಿದರೆ ಅವುಗಳ ಅಸ್ತಿತ್ವಕ್ಕೆ ಧಕ್ಕೆ ಬರಬಹುದು, ಧಕ್ಕೆ ಬರುವಂತೆ ಮಾಡಬಾರದು ಎಂದು ಒಂದು ತರಹದ ಎಚ್ಚರಿಕೆ ಕೊಟ್ಟರು. ಕಳೆದ ಅನೇಕ ವರ್ಷಗಳಿಂದ ಗ್ರಾಮ ಪಂಚಾಯತಿಗಳು ಕೆಲಸ ಮಾಡುತ್ತಾ ಬಂದಿವೆ. ಆದರೆ ಪಂಚಾಯತ್ ರಾಜ್ಯ ಕಲ್ಪನೆ ನಮ್ಮ ದೇಶದಲ್ಲಿ ಸ್ಪಷ್ಟವಾಗಿ ಮೂಡಿಬಂದ ನಂತರ ಅವುಗಳ ಸ್ಥಾಪನೆ ಈಗ ಮಾಡಲಾಗುತ್ತಿದೆ. ಪುರಾತನ ಕಾಲದಿಂದಲೂ ಪಂಚಾಯತಿಗಳು ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿವೆ. ಆದರೆ ಈ ಹಿಂದೆ ಕೆಲಸ ಮಾಡಿಕೊಂಡು ಬಂದಿರುವ ಪಂಚಾಯತಿಗಳಿಗೂ ಈಗ ಸ್ಥಾಪನೆಯಾಗಲಿರುವ ಗ್ರಾಮ ಪಂಚಾಯತಿಗಳಿಗೂ ಬಹಳ ವ್ಯತ್ಯಾಸವಿದೆ. ಇಲ್ಲಿಯವರೆಗೆ ಗ್ರಾಮ ಪಂಚಾಯತಿಗಳು ಮಾಡತಕ್ಕ ಕೆಲಸ ಅಂದರೆ ಗ್ರಾಮದ ನೈರ್ಮಲ್ಯ ಇನ್ನಿತರ ನಾಗರೀಕ ಸೌಲಭ್ಯ ಒದಗಿಸುವ ಸಣ್ಣ ಪುಟ್ಟ ಕೆಲಸ ಮಾಡುವುದು ಅವರ ಜವಾಬ್ದಾರಿಗೆ ಒಳಪಟ್ಟಿತ್ತು. ಬೇರೆ ಜವಾಬ್ದಾರಿ ವಹಿಸಿರಲಿಲ್ಲ. ಮೊಟ್ಟಮೊದಲು 1909ನೇ ಇಸವಿಯಲ್ಲಿ ಗ್ರಾಮ ಪಂಚಾಯತಿಗೆ ಒಂದು ಕಾಯಿದೆಬದ್ಧ ಸ್ವರೂಪ ಬಂದಿದೆ. ಲಾರ್ಡ್ ರಿಪ್ಪನ್ ಅವರು ಈ ದೇಶದ ವೈಸರಾಯರಾಗಿದ್ದಾಗ್ಯೆ ಮೊಟ್ಟಮೊದಲು ಸ್ಥಳೀಯ ಸಂಸ್ಥೆಗಳು ಅಂದರೆ ಪಟ್ಟಣದಲ್ಲಿ ಮುನಿಸಿಪಾಲಿಟಿ, ಗ್ರಾಮದಲ್ಲಿ ಗ್ರಾಮ ಪಂಚಾಯತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಬೋರ್ಡು ಮಾಡಬೇಕೆಂದು ಬಹಳ ಪ್ರಬಲವಾಗಿ ಆಗ್ಗೆ ಪ್ರತಿಪಾದಿಸಿದರು. ನಮ್ಮ ದೇಶ ಸ್ವತಂತ್ರವಾದ ಮೇಲೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು ಅವುಗಳನ್ನು ನಾವು ಇಂದಿನವರೆಗೆ ಮುಂದುವರಿಸಿಕೊಂಡು ಬಂದಿದ್ದೇವೆ. ಗ್ರಾಮ ಮಟ್ಟದಲ್ಲಿರತಕ್ಕಂಥ ಸಂಸ್ಥೆಗೆ ಸ್ವಲ್ಪಮಟ್ಟಿನ ಜವಾಬ್ದಾರಿ ಕೊಟ್ಟರೆ ಸಾಲದು, ಆಯಾ ಮಟ್ಟದಲ್ಲಿ ಜನತೆಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಅದರ ಶಕ್ತಿಗೆ ತಕ್ಕಂತೆ ನಿವಾರಣೆ ಮಾಡುವ ಅಧಿಕಾರ ಕೊಡಬೇಕು ಎಂದು ಆಲೋಚಿಸಿದ್ದೇವೆ. ಈ ರೀತಿ ಒಂದು ವ್ಯವಸ್ಥೆ ಇಲ್ಲದೇ ಇದ್ದರೆ ಪ್ರಜಾಪ್ರಭುತ್ವ ಪಂಚಾಯತಿ ರಾಜ್ಯ ಎಂಬ ಕನಸು ಮಾತ್ರ ಕಾಣುತ್ತೇವೆ, ಆದರೆ ನಿಜವಾಗಿ ಅದರ ಉದ್ದೇಶ ಕೈಗೂಡುವುದಿಲ್ಲ. ಇಂದಿನ ಪ್ರಜಾಪ್ರಭುತ್ವದಲ್ಲಿ ಜನತೆಗೆ ಸಾರ್ವಭೌಮತ್ವ ಇದೆ. ಒಂದು ಊರಿನಲ್ಲಿ ಬಾವಿ ಆಗಬೇಕು, ಒಂದು ಶಾಲೆ ಆಗಬೇಕು, ರಸ್ತೆ ಆಗಬೇಕು, ಊರಿನಲ್ಲಿ ಸಣ್ಣಪುಟ್ಟ ಕಲಹ ಇದ್ದರೆ ಅದನ್ನು ಬಗೆಹರಿಸಬೇಕು ಎಂದು ಹೇಳುವಂಥ ಅಧಿಕಾರ ಅವರಿಗೆ ಇಲ್ಲದೇ ಇದ್ದರೆ ಅದು ಎಂಥ ಸಾರ್ವಭೌಮತ್ವ ? ಇದು ಬಹಳ ಮುಖ್ಯವಾದ ವಿಚಾರ. ಜನತೆಗೆ ಸಾರ್ವಭೌಮತ್ವ ಇರಬೇಕು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಗ್ರಾಮ ಮಟ್ಟದಲ್ಲಿ ಜನತೆಗೆ ಅಧಿಕಾರ ಕೊಡುವ ಬಗ್ಗೆ ಈ ಮಸೂದೆಯಲ್ಲಿ ಒಂದು ಸಮಂಜಸವಾದ ದಾರಿ ಮಾಡಿಕೊಟ್ಟಿದ್ದೇವೆ. ಈಗಾಗಲೇ ಇನ್ನಿತರ ರಾಜ್ಯಗಳಲ್ಲಿ ಬೇರೆ ಬೇರೆ ಕಾಯಿದೆ ಜಾರಿಗೆ ಬಂದು ಕೆಲವು ಕಾಲವಾಯಿತು. ಅವರ ಅನುಭವ ತೆಗೆದುಕೊಂಡು ನಾವು ಕಲಿತುಕೊಳ್ಳುವುದಕ್ಕೆ ಅನುಕೂಲವಾಗಿದೆ. ಇದೊಂದು ದೊಡ್ಡ ಲಾಭ ನಮಗೆ ದೊರೆತಿದೆ. ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತಂದಿರುವ ಕಾನೂನಿನಲ್ಲಿ ಕೆಲವು ಗುಣಗಳಿವೆ ಕೆಲವು ದೋಷಗಳಿವೆ. ಅದೇ ರೀತಿ ಆಂಧ್ರದ ಕಾನೂನಿನಲ್ಲಿಯೂ ಕೂಡ ಕೆಲವು ದೋಷ ಮತ್ತು ಗುಣಗಳು ಇವೆ. ಅವುಗಳ ಸಾರವನ್ನು ತೆಗೆದುಕೊಂಡು ಈ ಮೂರು ಸಂಸ್ಥೆಗಳು ಸರಿಯಾದ ಮಟ್ಟದಲ್ಲಿ ಸರಿಯಾಗಿ ಅಧಿಕಾರ ಪಡೆದಿರಬೇಕು ಎಂದು ತೀರ್ಮಾನ ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಹೆಚ್ಚು ಅಧಿಕಾರ ಪಡೆದಿರಬೇಕು ಹೆಚ್ಚು ಜವಾಬ್ದಾರಿ ಇರಬೇಕು ಅದು ಒಂದು ಚಿಕ್ಕ ಸರಕಾರ ಆಗುವ ಹಾಗೆ ಇರಬೇಕು ಎಂದು ಮಾಡಿದೆ. ಆದರೆ ಅಧಿಕಾರ, ಕೇಂದ್ರೀಕೃತ ಮಾಡಿಲ್ಲ. ಯಾಕಂದರೆ ಅಧಿಕಾರ ವಿಕೇಂದ್ರೀಕರಣವಾಗಬೇಕೆಂಬ ಉದ್ದೇಶ ಇದೆ. ನಮ್ಮ ಪ್ರಜಾಪ್ರಭುತ್ವ ಕಟ್ಟಡ ಗಟ್ಟಿಯಾದ ತಳಹದಿಯ ಮೇಲೆ ನಿಲ್ಲಬೇಕು. ಅದರ ತಳಹದಿ ಭದ್ರವಾಗಿರಬೇಕು. ಅಂದರೆ ಇದಕ್ಕೆ ಬಲ ಬರುತ್ತದೆ. ಅಲ್ಲದೆ ತುದಿ ಕೂಡ ಸಾಮರ್ಥ್ಯ ಪಡೆಯುತ್ತದೆ. ಇದಕ್ಕಾಗಿ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ. ಈ ರೀತಿ ಮಾಡದೇ ಇದ್ದರೆ

ಅದು ಪಲ್ಟೀ ಹೊಡೆಯಬಹುದು. ಇಂಥ ಕಟ್ಟಡ ಸುರಕ್ಷಿತವಾಗಿ ಇರಲು ಸಾಧ್ಯವಿಲ್ಲ. ಆದ್ದರಿಂದ ಗ್ರಾಮ ಪಂಚಾಯತಿಗಳಿಗೆ ಎಷ್ಟರ ಮಟ್ಟಿಗೆ ಅಧಿಕಾರ ಕೊಡುವುದು ಅಗತ್ಯವಿದೆಯೋ ಅಷ್ಟನ್ನು ಕೊಡಬೇಕೆಂದು ಮಾಡಿದ್ದೇವೆ. ತಾಲ್ಲೂಕ್ ಮಟ್ಟದಲ್ಲಿ ಕೇವಲ ರಚನೆಯಲ್ಲಿ ಮಹತ್ವದ ಬದಲಾವಣೆ ಇದೆ. ಕೊಡತಕ್ಕಂಥ ಅಧಿಕಾರದಲ್ಲಿ ಬಹು ಹೆಚ್ಚಿನ ಭಾಗ ಅಧಿಕಾರ ಅವರಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ವಿಚಾರದಲ್ಲಿ ಅವರು ಬಹಳ ಆಬ್ಜೆಕ್ಟಿವ್ ಆಗಿ ಮಾತನಾಡಿದರು ಮತ್ತು ಬಹಳ ಉತ್ತಮ ಸಲಹೆಗಳನ್ನು ಮಾಡಿದರು. ತಾಲ್ಲೂಕ್ ಬೋರ್ಡು ಮತ್ತು ಗ್ರಾಮ ಪಂಚಾಯತಿಗಳು ಅತಿ ನಿಕಟ ಸಂಬಂಧವುಳ್ಳ ಸಂಸ್ಥೆಯಾಗಿರುವುದರಿಂದ ತಾಲ್ಲೂಕು ಬೋರ್ಡಿಗೆ ಹೆಚ್ಚು ಜವಾಬ್ದಾರಿ ಕೊಡಬೇಕಾದುದು ಅಗತ್ಯ. ಅಲ್ಲದೆ ಗ್ರಾಮ ಪಂಚಾಯತಿಗಳು ನೇರವಾಗಿ ಜಿಲ್ಲಾ ಪರಿಷತ್ತಿನ ಮೋರೆ ನೋಡುತ್ತಾ ಕುಳಿತು ಕೊಳ್ಳುವುದು ಸರಿಯಲ್ಲ. ತಾಲ್ಲೂಕ ಮಟ್ಟದಲ್ಲಿ ಇರತಕ್ಕ ಸಂಸ್ಥೆಗೆ ಸಾಕಷ್ಟು ಅಧಿಕಾರ ಹಣ ಒದಗಿಸ ಬೇಕೆಂಬುದು ಈ ಮಸೂದೆಯ ಉದ್ದೇಶವಾಗಿದೆ. ಆದರೆ ಇದರ ರಚನೆಯ ವಿಚಾರದಲ್ಲಿ ಬಹಳ ಭಿನ್ನಾಭಿಪ್ರಾಯ ಬಂದಿದೆ. ಇಲ್ಲಿಯವರೆಗೆ ತಾಲ್ಲೂಕ್ ಬೋರ್ಡ್ ಸದಸ್ಯರು ಎಲ್ಲರೂ ಪ್ರತ್ಯಕ್ಷವಾಗಿ ಚುನಾವಣೆಯಲ್ಲಿ ಆರಿಸಿ ಬರುತ್ತಾ ಇದ್ದರು. ಈ ಮಸೂದೆ ಪ್ರಕಾರ ಬಹುಭಾಗ ಸದಸ್ಯರು ಪ್ರತ್ಯಕ್ಷ ಚುನಾವಣೆಯಲ್ಲಿ ಆರಿಸಿ ಇನ್ನುಳಿದವರು ಅಪ್ರತ್ಯಕ್ಷ ಚುನಾವಣೆಯಲ್ಲಿ ಅಂದರೆ ಆಯಾಯ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಸದಸ್ಯರು ಇನ್ನುಳಿದ ಸದಸ್ಯರನ್ನು ಆರಿಸಿ ಕಳಿಸಬಹುದು ಎಂದಿದೆ. ಪ್ರತ್ಯಕ್ಷ ಚುನಾವಣೆಯಲ್ಲಿ ಏನು ಅನನುಕೂಲತೆ ಇದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅಪ್ರತ್ಯಕ್ಷ ಚುನಾವಣೆ ಒದಗಿಸುವಲ್ಲಿ ಎರಡು ಮುಖ್ಯ ಕಾರಣ ಇವೆ. ಯಾವ ಪ್ರಮಾಣದಲ್ಲಿ ಅಪ್ರತ್ಯಕ್ಷ ಚುನಾವಣೆ ಇದೆ ಎಂಬುದನ್ನು ನಾವು ವಿಚಾರ ಮಾಡೋಣ. ಪ್ರಜಾಪ್ರಭುತ್ವದಲ್ಲಿ ನಿರ್ಮಾಣವಾದ ಸಂಸ್ಥೆಯಲ್ಲಿ ಪ್ರತಿಯೊಂದರಲ್ಲಿಯೂ ಒಂದಿಲ್ಲಾ ಒಂದು ರೀತಿಯಿಂದ ಮೇಲಿನ ಸಂಸ್ಥೆಗೆ ಸಂಬಂಧ ಇರುತ್ತದೆ. ನಮ್ಮ ದೇಶದ ಲೆಜಿಸ್ಲೇಚರ್ ನಲ್ಲಿ ಕೂಡ ಲೋಕಲ್ ಬಾಡೀಜ, ಲೋಕಲ್ ಅಥಾರಿಟೀಜ ಪ್ರಾತಿನಿಧ್ಯ ಇದ್ದೇ ಇದೆ. ಅದರಂತೆ ಪಾರ್ಲಿಮೆಂಟಿನಲ್ಲಿ ಕೂಡ ನಮ್ಮ ಲೆಜಿಸ್ಲೇಚರದಿಂದ ಚುನಾವಣೆ ಮಾಡಿ ಕಳಿಸಲ್ಪಟ್ಟ ಪ್ರತಿನಿಧಿಗಳು ಅಲ್ಲಿ ಇರುವುದರಿಂದ ಸ್ವಲ್ಪಮಟ್ಟಿಗೆ ಪ್ರಾತಿನಿಧ್ಯ ಇದೆ. ಅಪ್ರತ್ಯಕ್ಷ ಚುನಾವಣೆ ಅಗತ್ಯ ಎಂದು ನಾನು ಭಾವಿಸುತ್ತೇನೆ. ಮೇಲೆ ಇರತಕ್ಕ ಸಂಸ್ಥೆಗಳು ಕೆಳಗಿನ ಸಂಸ್ಥೆ ಗಳಿಗೆ ಸಹಾಯ ಸಹಕಾರ ಕೊಟ್ಟು ಅವು ಪೂರಕವಾಗಿರಬೇಕು. ಆದುದರಿಂದ ಮೇಲಿನ ಸಂಸ್ಥೆಯಲ್ಲಿ ಕೆಳಗಿನ ಸಂಸ್ಥೆಯ ಪ್ರಾತಿನಿಧ್ಯ ಇರದೇ ಹೋದರೆ ಒಂದಲ್ಲ ಒಂದು ರೀತಿಯಲ್ಲಿ ಮೇಲಿನ ಸಂಸ್ಥೆಯ ಬಗ್ಗೆ ಕಂಪ್ಲೇಂಟ್ ಮಾಡುವುದಕ್ಕೆ ಅವಕಾಶ ದೊರೆಯುತ್ತದೆ. ಆ ದೃಷ್ಟಿಯಿಂದ ಇದನ್ನು ಹೀಗೆ ಮಾಡಿದ್ದೇವೆ. ಬೇರೆ ದೃಷ್ಟಿ ಇಲ್ಲ. ಜಿಲ್ಲಾ ಪರಿಷತ್ತು ಮಾಡಿರುವದರಲ್ಲಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರ ಸಮಾವೇಶವಾಗುತ್ತದೆ. ಎಲ್ಲ ಪಂಚಾಯತಿ ಅಧ್ಯಕ್ಷರು ತಾಲ್ಲೂಕ್ ಬೋರ್ಡ್ ಸದಸ್ಯರು ಆಗತಕ್ಕಂಥಾದ್ದು ಸಾಧ್ಯವಿಲ್ಲ. ಈಗಾಗಲೇ ನಮ್ಮ ದೇಶದ 13 ರಾಜ್ಯಗಳಲ್ಲಿ ಪಂಚಾಯತಿ ರಾಜ್ಯ ಅನುಷ್ಠಾನಕ್ಕೆ ಬಂದಿದೆ. ಈ ರಾಜ್ಯಗಳ ಕಾನೂನಿನಲ್ಲಿಯ ಉದ್ದೇಶ ಒಂದೇ ಇದೆ. ಅಪ್ರತ್ಯಕ್ಷ ಚುನಾವಣೆ ತಾಲ್ಲೂಕ ಮಟ್ಟದ ಸಂಸ್ಥೆಯಲ್ಲಿ ಇರಬೇಕೆಂದು ಭಾವಿಸಲಾಗಿದೆ. ಆ ರೀತಿ ರಚನೆ ಮಾಡಲಾಗಿದೆ. ಅದ್ದರಿಂದ ಈ ಅಪ್ರತ್ಯಕ್ಷ ಚುನಾವಣೆ ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಅನಿಷ್ಟವಾಗು ವಂಥಾದ್ದು ನಿಜವಾದರೂ, ಒಂದು ವಿಧದಲ್ಲಿ ಚುನಾವಣೆಯೆ ಅಪರಿಹಾರ್ಯ ಅನಿಷ್ಟ (necessary evil). ಚುನಾವಣೆ ಅನಿಷವೆಂದು ಹೇಳುವುದಾದರೂ ಅದನ್ನು ಕಿತ್ತುಹಾಕುವುದಕ್ಕೆ ಬರುವುದಿಲ್ಲ. ಡೆಮೊಕ್ರಸಿಯಲ್ಲಿ ಅದು ಅನಿವಾರ್ಯ. ಆದರೆ ಈ ಪ್ರತ್ಯಕ್ಷ ಚುನಾವಣೆ ಆವಶ್ಯಕವೆ ಇಲ್ಲವೆ, ಅನ್ನುವುದನ್ನು ಸೆಲೆಕ್ಟ್ ಕಮಿಟಿಗೆ ಬಿಟ್ಟು ಬಿಡೋಣ.

ಇನ್ನುಮುಂದೆ ಈ ಜಿಲ್ಲಾ ಮಟ್ಟದ ಬಗ್ಗೆ ನಾನು ಆಗಲೇ ಹೇಳಿದೆ. ಇದು ಮಸೂದೆಯ ತಿರುಳು : ಕಳೆದ 3-4 ವರ್ಷಗಳ ನಮ್ಮ ಪಂಚಾಯಿತಿ ರಾಜ್ ಸಂಸ್ಥೆಗಳ ಅನುಭವದಲ್ಲಿ ಏನೇನು ನಮ್ಮ ದೃಷ್ಟಿಗೆ ಬಿದ್ದಿದೆಯೆಂದರೆ-ಇದು ನಮ್ಮ ಕೇವಲ ಅನುಭವದಿಂದಲೇ-ಅಲ್ಲ ಎಲ್ಲಾ ತಾಲ್ಲೂಕು ಬೋರ್ಡು ಮತ್ತು ಪಂಚಾಯತಿ ಅನುಭವದಿಂದ-ಈ ಸಂಸ್ಥೆಗಳಿಗೆ ತಾಲ್ಲೂಕು ಮಟ್ಟ ಮತ್ತು ಗ್ರಾಮ ಮಟ್ಟಕ್ಕೆ ಅಧಿಕಾರ ವನ್ನು ಹಂಚುವಾಗ ತಾಲ್ಲೂಕು ಮಟ್ಟಕ್ಕಿಂತ ಮೇಲೆ ಆದರೆ ಜಿಲ್ಲಾ ಮಟ್ಟಕ್ಕಿಂತ ಕೆಳಗೆ ಇರುವಂಥ ಸಮಸ್ಯೆಗಳು ಈ ತಾಲ್ಲೂಕು ಬೋರ್ಡುಗಳನ್ನು ಬಾಧಿಸುತ್ತವೆ. ಮತ್ತು ಈ ಸಮಸ್ಯೆಗಳನ್ನು ನಿವಾರಿ ಸಲಿಕ್ಕೆ ಅಧಿಕಾರವಿರುವಂಥ ಒಂದು ಸಂಸ್ಥೆ ಜಿಲ್ಲಾ ಮಟ್ಟದಲ್ಲಿ ಇಲ್ಲದಿದ್ದರೆ ಗ್ರಾಮ ಮತ್ತು ತಾಲ್ಲೂಕು ಬೋರ್ಡು ಸಂಸ್ಥೆ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ನಮ್ಮ ಸರಕಾರ ಮತ್ತು ಈ ಸಂಸ್ಥೆಗಳ ಸಂಬಂಧ ನೇರವಾಗಿರತಕ್ಕದ್ದು, ಈ ಒಂದು ದೃಷ್ಟಿಯಿಂದ ಮುಂದೆ ಅದು ನೇರವಾಗಿರುತ್ತದೆ. ಆದರೆ ಈ ಮೂರು ಸಂಸ್ಥೆಗಳೂ ಅಸ್ತಿತ್ವಕ್ಕೆ ಬಂದಿದ್ದರೂ ಅವುಗಳಿಂದ ಯಾವ ರೀತಿಯಿಂದ ಒಂದು ಸಾಮರಸ್ಯದಿಂದ ಕೆಲಸವಾಗಬೇಕೊ ಆ ರೀತಿ ಕೆಲಸವಾಗುತ್ತಿಲ್ಲ. ಒಂದೇ ಒಂದು

(ಶ್ರೀ ರಾಮಕೃಷ್ಣ ಹೆಗ್ಗಡೆ)

ಉದಾಹರಣೆಯನ್ನು ಮಾನ್ಯ ಸದಸ್ಯರಿಗೆ ಹೇಳಬೇಕೆಂದು ಬಯಸುತ್ತೇನೆ. ಈಗ ಈ ಮಸೂದೆಯಲ್ಲಿ ಸೆಕಂಡರಿ ಮತ್ತು ಪ್ರೈಮರಿ ವಿದ್ಯಾಭ್ಯಾಸವನ್ನು ಈ ಪಂಚಾಯತ್‌ರಾಜ್ ಸಂಸ್ಥೆಗೆ ವಹಿಸಬೇಕು ಅಂತ ಮಾಡಿದ್ದೇವೆ. ಇದಕ್ಕೆ ಎಲ್ಲಾ ಸದಸ್ಯರ ಒಪ್ಪಿಗೆ ಬೆಂಬಲ ಬಿದ್ದಿದೆ. ಈಗ ನಾವು ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ನನ್ನು ಈ ಸಂಸ್ಥೆಗಳಿಗೆ ಒಪ್ಪಿಸುವಾಗ ಜಿಲ್ಲಾ ಮಟ್ಟದಲ್ಲಿ ಒಂದು ಸಂಸ್ಥೆ ಇದ್ದರೆ ಅದಕ್ಕೆ ತಕ್ಕಂಥ ಸಿಬ್ಬಂದಿ ಇರುವುದರಿಂದ ಮತ್ತು ಎಲ್ಲ ತಾಲ್ಲೂಕುಗಳೊಡನೆಯೂ ಪರಸ್ಪರ ವ್ಯವಹಾರ ಸಂಯೋಜನೆ ಮಾಡುವ ಅಧಿಕಾರವಿರುವುದರಿಂದ ಜಿಲ್ಲಾ ಮಟ್ಟದಲ್ಲಿಯೇ ಸರಕಾರದ ಅನೇಕ ಕೆಲಸಗಳನ್ನು ನಿರ್ವಹಿಸುವಂಥ ಅನುಕೂಲ ಒದಗುತ್ತದೆ. ಆದ್ದರಿಂದ ಈ ಜಿಲ್ಲಾ ಮಟ್ಟದ ಸಂಸ್ಥೆ ಇರುವಂಥಾದ್ದು ಈ ಎರಡು ಸ್ಥಾನಿಕ ಸಂಸ್ಥೆಗಳಿಗೂ ಯಾವ ತರಹ ಅನಾನುಕೂಲವೂ ಇಲ್ಲವೆಂದು ನಾನು ನಮ್ರತೆಯಿಂದ ಹೇಳಲಿಕ್ಕೆ ಬಯಸುತ್ತೇನೆ.

ದಿ ಸೆಂಟ್ರಲೈಜೇಷನ್ ಎಷ್ಟರ ಮಟ್ಟಿಗೆ ಅವಶ್ಯಕತೆ ಇದೆ ಅನ್ನುವುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದನ್ನು ನಾನು ಒಂದು ಉದಾಹರಣೆಯಿಂದ ಪುಷ್ಟೀಕರಿಸಬಹುದು. ನಮ್ಮ ಜಿಲ್ಲೆಯ ಮುಂದಗೂಡ ತಾಲ್ಲೂಕಿಗೆ ಕೆಲವು ವರ್ಷಗಳ ಹಿಂದೆಯೇ ಸರಕಾರದವರು ಒಂದು ಮೊಬೈಲ್ ಡಿಸ್ಪೆನ್ಸರಿ ಕೊಟ್ಟರು. ಆ ಮೊಬೈಲ್ ಡಿಸ್ಪೆನ್ಸರಿಗೆ ಒಂದು ವ್ಯಾನು ಮತ್ತು ಎಲ್ಲಾ ತರಹದ ಸೌಕರ್ಯವೂ ಇದೆ. ಅದರಲ್ಲಿ 3-4 ಜನ ನೌಕರರೂ, ಒಬ್ಬ ಡಾಕ್ಟರೂ ಇರುತ್ತಾರೆ, ಔಷಧಿ ಇರುತ್ತದೆ. ಅವರು ಊರಿಂದೂರಿಗೆ ಹೋಗಿ ರೋಗಗಳಿಗೆ ಶುಶ್ರೂಷೆ ಒದಗಿಸುತ್ತಿದ್ದರು. ಆದರೆ ಕಳೆದ ಎರಡು ವರ್ಷಗಳಿಂದ ಆ ಮೊಬೈಲ್ ಡಿಸ್ಪೆನ್ಸರಿಗೆ ಡಾಕ್ಟರು ಇಲ್ಲ. ಕಳೆದ ಒಂದೂವರೆ ವರ್ಷದಿಂದ ವ್ಯಾನು ದುರಸ್ತಿ ಇಲ್ಲ ಔಟ್-ಅಫ್-ಅರ್ಡರ್ ಆಗಿದೆ. ಈಗ ಒಂದೂವರೆ ವರ್ಷದಿಂದ ಅದನ್ನು ದುರಸ್ತಿ ಮಾಡುವಂತ ಕೆಲಸ ನಮ್ಮ ಹತ್ತಿರವಾಗಿಲ್ಲ. ಮೂರು ಜನ ನೌಕರರೂ ಸುಮಾರು 4 ವರ್ಷದಿಂದ ಸರಕಾರದ ಹಣವನ್ನು ತಮ್ಮ ಸಂಬಳಕ್ಕಾಗಿ ತೆಗೆದುಕೊಳ್ಳುತ್ತಾ ಇದ್ದಾರೆ. ಇದು ಸೆಂಟ್ರಲೈಸ್ಡ್ ಅಡ್ಮಿನಿಷ್ಟ್ರೇಷನ್ನಿನಿಂದ ಬರತಕ್ಕಂತಹ ದೋಷ. ಜಿಲ್ಲಾ ಮಟ್ಟದಲ್ಲಿಯೇ ಒಂದು ಸಂಸ್ಥೆ ಇದ್ದರೆ ಆ ಜಿಲ್ಲೆ ಮಟ್ಟದ ಸಂಸ್ಥೆಗೆ ಅಧಿಕಾರವನ್ನು ಕೊಟ್ಟು, ಡಾಕ್ಟರು ಇಲ್ಲ, ಟೀಚರು ಇಲ್ಲ, ಇನ್ನು ಯಾವುದೂ ಅಧಿಕಾರ ಇಲ್ಲದಿದ್ದರೆ, ಅವರನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದರೆ ಈ ತೊಂದರೆಗೆ ಅವಕಾಶವಿರುತ್ತಿರಲಿಲ್ಲ. ಅವರೇ ನೇಮಕ ಮಾಡುತ್ತಿದ್ದರು. ನೂರಾರು ಮೈಲಿ ದೂರವಿರತಕ್ಕಂಥ ಬೆಂಗಳೂರಿನಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸೆನ್ನು ಆಗಲಿ, ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸ್ ಅಗಲಿ, ಅಥವಾ ಮಂತ್ರಿಗಳೇ ಆಗಲಿ ಬೇಗ ರಿಲೀಫ್ ಕೊಡುವುದಿಲ್ಲ, ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಯಾವ ಸಮಸ್ಯೆಯೂ ಶೀಘ್ರವಾಗಿ ಪರಿಹಾರವಾಗುವುದಿಲ್ಲ. ಎಷ್ಟು ಜನರಿಗೆ ತೊಂದರೆಯಾಗುತ್ತಿದೆ ಅನ್ನುವ ಚಿತ್ರ ಇಷ್ಟು ದೂರದಲ್ಲಿರುವ ನಮ್ಮ ಕಣ್ಣಿಗೆ ಬರುವುದಿಲ್ಲ. ಹಳ್ಳಿಗಳ ಸ್ಥಿತಿಯ ಬಗ್ಗೆ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಬೇಕಾದಷ್ಟು ಹೇಳಬಹುದು, ಮಂತ್ರಿಗಳಿಗೆ ಕೂಡ ಅವರ ಬಗ್ಗೆ ಬೇಕಾದಷ್ಟು ಅಭಿಮಾನವಿರಬಹುದು, ಅವರ ಒಂದು ದೊಡ್ಡ ವ್ಯವಹಾರದಲ್ಲಿ, ಈ ಸಣ್ಣ ಪುಟ್ಟ ವಿಷಯಗಳ ಬಗ್ಗೆ ಅವರ ಗಮನ ಸಾಕಷ್ಟು ಪ್ರಮಾಣದಲ್ಲಿ ಹೋಗುವುದಿಲ್ಲ. ಆದ್ದರಿಂದ ಮೊಬೈಲ್ ಡಿಸ್ಪೆನ್ಸರಿಯೇ ಆಗಲಿ, ಸ್ಕೂಲು ಕಟ್ಟಡವೇ ಆಗಲಿ, ಯಾವುದಾದರೂ ಬೇರೆ ರೀತಿಯ ಅವಶ್ಯಕವಿದ್ದಂತೆ ಕೆಲಸವೇ ಆಗಲಿ ಎಲ್ಲದಕ್ಕೂ ಈ ವಾದ ಈಕ್ವಲ್ ಫೋರ್ಸಿನಿಂದ ಅನ್ವಯಿಸುತ್ತದೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಸಾಕಷ್ಟು ಅಧಿಕಾರವುಳ್ಳಂಥ ಒಂದು ಸಂಸ್ಥೆ ಇದ್ದರೆ ಈ ಪಂಚಾಯತಿ ರಾಜ್ಯಕ್ಕೆ ಯಾವ ಹೊರೆಯೂ ಇಲ್ಲ ಆದ್ದರಿಂದ ಬಹಳ ಒಳ್ಳೆಯದಾಗುತ್ತದೆಂದು ಬಹಳ ವಿನಯದಿಂದ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧಿಕಾರ ವಿಕೇಂದ್ರಿಕರಣದ ವಿರುದ್ಧ ಕೆಲವರು ಒಂದು ಮಾತು ಹೇಳಿದರು ಅವೇನೆಂದರೆ ದುಡ್ಡು ದುರುಪಯೋಗವಾಗುತ್ತದೆಂದು. ಇನ್ನು ಅನೇಕ ತರಹ ಟೀಕೆಗಳು ಬಂದಿವೆ. ಜಿಲ್ಲಾಮಟ್ಟದ ಸಂಸ್ಥೆಗೆ ಅಧಿಕಾರ ಕೊಟ್ಟರೆ ನೌಕರರುಗಳ ಪಾಡು ಬಹಳ ಕಷ್ಟವಾಗುತ್ತದೆ, ತಮತಮಗೆ ಆಗದವರನ್ನು ಟ್ರಾನ್ಸ್‌ಫರ್ ಮಾಡುತ್ತಾರೆ, ಅವರಿಗೆ ಕಿರುಕಳ ಕೊಡಬಹುದು, ಎಂದು ಈ ರೀತಿಯಾಗಿ ಅನೇಕ ಟೀಕೆಗಳು ಬಂದಿವೆ. ಇವೆಲ್ಲಕ್ಕೂ ಉತ್ತರ ಕೊಡಲ ಹೋಗುವುದಕ್ಕೆ ಅವಶ್ಯಕವಿಲ್ಲ. ಇದಕ್ಕೆ ಒಂದೇ ಮಾತಿನಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ದೋಷಗಳೂ ಯಾವ ಸಂಸ್ಥೆಯೇ ಆಗಲಿ, ಅದು ಯಾವ ಮಟ್ಟದಲ್ಲಿಯೇ ಇರಲಿ, ಎಲ್ಲಾ ಮಟ್ಟದಲ್ಲಿಯೂ ಕೂಡ ಈ ತರಹ ದೋಷಗಳು ಕಂಡುಬರುತ್ತವೆ. It is only a matter of degree. ನಮ್ಮಷ್ಟಕ್ಕೆ ನಾವೇ ಒಂದು ಪ್ರಶ್ನೆಯನ್ನು ಕೇಳಿಕೊಳ್ಳೋಣ: Are we free from these evils? ನಾವು ಏನು ಟೀಕೆಗಳನ್ನು ಮಾಡಿದ್ದೇವೆಯೋ ಅವುಗಳಿಂದ ಸದಸ್ಯರಾದ ನಾವೇ ಸ್ವತಂತ್ರವಿದ್ದೇವೆಯೋ ಎಂಥೆಂಥ ಕೆಲಸಗಳನ್ನು ಮಾಡಿಲ್ಲ? ಅಧಿಕಾರಿಗಳ ಟ್ರಾನ್ಸಫರ್ ವಿಷಯದಲ್ಲಿ ಕೈಹಾಕಿದ್ದೇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯ ಸರಕಾರಕ್ಕೆ ಕೊಟ್ಟಂಥ 125 ಕೋಟಿ ರೂಪಾಯಿಯಲ್ಲಿ ಸುಮಾರು

8-10 ಕೋಟಿ ರೂಪಾಯಿಯಷ್ಟು ಖರ್ಚಾಗಲಿಲ್ಲ, ಲ್ಯಾಪ್ಸ್ ಆಯಿತು. ಯಾವ ಸರಕಾರ ಬಂದರೂ ಕೂಡ ಯುನೈಟೆಡ್ ಅಪೋಜಿಶನ್ ಪಾರ್ಟಿ ಅಥವಾ ಸಂಯುಕ್ತ ಸಮಾಜವಾದ ಪಕ್ಷ ಬಂದರೂ ಕೂಡ ಹೆಚ್ಚು ಹೆಚ್ಚು ಅಧಿಕಾರ ಮಟ್ಟದಲ್ಲಿ ಕೇಂದ್ರಿಕೃತವಾದರೆ ಈ ಲೋಪಕ್ಕೆ ಹೆಚ್ಚು ಹೆಚ್ಚು ಅವಕಾಶವಾಗುತ್ತದೆ. ನಾನು ಇಷ್ಟು ಹೇಳುತ್ತೇನೆ: ಎಲ್ಲೆಲ್ಲಿ ದೊಡ್ಡ ಪ್ರಮಾಣದ ಕೆಲಸ ಮಾಡುತ್ತೇವೆ ಅಲ್ಲೆಲ್ಲಾ ನಿಜವಾಗಿಯೂ ದೊಡ್ಡ ತರಹದ ದೋಷ ಬರುವುದು ಸ್ವಾಭಾವಿಕ. ಒಂದು ಪಂಚಾಯ್ತಿಯ ಬಜೆಟ್ 15-20 ಸಾವಿರ ರೂಪಾಯಿ ಇದ್ದರೆ, ಅದರಲ್ಲಿ ಹೆಚ್ಚು ಹೆಚ್ಚು ಅಂದರೆ ಶೇಕಡ 10ರಷ್ಟು, ಅಂದರೆ 1,500 ರೂಪಾಯಿಯಷ್ಟು ಅಪವ್ಯಯವಾಗಬಹುದು: ಬೇರೆ ತರಹ ಇರೆಗ್ಯುಲರ್ ಎಕ್ಸ್‌ಪೆಂಡಿಚರೂ ಆಗಬಹುದು. ಆದರೆ 250 ಕೋಟಿ ರೂಪಾಯಿ ಖರ್ಚು ಮಾಡುವ ಒಂದು ಆರ್ಗನೈಸೇಷನ್ನಿನಲ್ಲಿ, 5-10 ಪರ್ಸೆಂಟೆಂದರೆ ಎಷ್ಟು ದೊಡ್ಡ ಪ್ರಮಾಣದ್ದಾಯಿತು ?

ಆದ್ದರಿಂದ ಯಾವಾಗಲೂ ನಮ್ಮ ಪ್ರಜಾಪ್ರಭುತ್ವದ ಇಂಟರೆಸ್ಟಿನಲ್ಲಿ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ಈ ಅಧಿಕಾರವನ್ನು ನಾವು ಹಂಚಿಕೊಡುವುದರಲ್ಲಿ ಹಿತ ಇದೆಯೇ ಹೊರತು ಕೇಂದ್ರೀಕರಿಸುವುದರಲ್ಲಿ ಹಿತ ಇಲ್ಲ, ಮಾನ್ಯ ಶ್ರೀಮಾನ್ ಗೋಪಾಲಗೌಡರು ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರಿಗೆ ಪುನಃ ಕೃತಜ್ಞತೆಯನ್ನು ವ್ಯಕ್ತಮಾಡಲಿಕ್ಕೆ ಬಯಸುತ್ತೇನೆ.

ಮತ್ತೊಂದು ಬಹಳ ಮಹತ್ವದ ವಿಚಾರ ಎಂದರೆ ಇದರ ಆರ್ಥಿಕ ಸ್ಥಿತಿಯ ಬಗ್ಗೆ. ಮಾನ್ಯ ಸದಸ್ಯರು ಬಹಳವಾಗಿ ಈಗಿರುವಂತಹ ಆರ್ಥಿಕ ಅನುಕೂಲತೆ ಸಾಲದು, ಇನ್ನೂ ಹೆಚ್ಚು ಕೊಡಬೇಕೆಂದು ಪ್ರತಿಪಾದನೆ ಮಾಡಿದ್ದಾರೆ. ಈ ಸಮಯದಲ್ಲಿ ಹೇಳಬೇಕಾದರೆ ಈ ಮಸೂದೆಯಲ್ಲಿ 100ಕ್ಕೆ 97 ರಷ್ಟು ಭಾಗ ಕಂದಾಯವನ್ನು ಈ ಸಂಸ್ಥೆಗಳಿಗೆ ಹಂಚಿ ಕೊಡುವುದು ಅಲ್ಲದೆ ಬೇರೆ ಬೇರೆ ಮಟ್ಟದ ಸಂಸ್ಥೆಗಳಿಗೆ ಈ ಕಂದಾಯದ ಮೇಲೆ ಒಂದು ರೂಪಾಯಿಗೆ ಇಂತಿಷ್ಟು ಭಾಗ ಸೆಸ್ ಹಾಕುವಂತಹ ಅಧಿಕಾರವನ್ನು ಕೊಟ್ಟಿದೆ. ಇದರಿಂದ ಎಲ್ಲಾ ಆರ್ಥಿಕ ಅನುಕೂಲತೆ ಆಯಿತು ಎಂದು ನಾನು ಹೇಳುವುದಿಲ್ಲ, ಇದರ ಹೊರತಾಗಿ ರಾಜ್ಯ ಸರ್ಕಾರ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವಂತಹ ಸ್ಕೀಂಗಳನ್ನು ಹಂಚಿ ಹಾಕುವಾಗ ಮತ್ತು ಬೇರೆ ಬೇರೆ ಪ್ರಾಜೆಕ್ಟುಗಳನ್ನು ಅವರಿಗೆ ವರ್ಗಾವಣೆ ಮಾಡುವಾಗ ಅದಕ್ಕೆ ಸಂಬಂಧಪಟ್ಟ ಹಣವನ್ನೂ ಕೂಡ ಅವುಗಳಿಗೆ ಟ್ರಾನ್ಸ್‌ಫರ್ ಮಾಡುತ್ತೇವೆ. ಆದ್ದರಿಂದ ನಾವು ಈ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯಲ್ಲಿ ಬಹಳ ನಿರಾಶದಾಯಕವಾದ ಚಿತ್ರವನ್ನು ಮಾಡುವಂತಹ ಅಗತ್ಯ ಕಾಣುವುದಿಲ್ಲ. ಇದರ ಹೊರತಾಗಿ ಸಂತಾನಂ ಕಮಿಟಿ ಎಂದು ಹೇಳಿ ಒಂದು ಕಮಿಟಿಯನ್ನು ಮಾಡಿದ್ದರು. ಅವರು ಈ ವಿಚಾರವನ್ನು ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಬಹಳ ಮುಖ್ಯವಾದಂತಹ ಸೂಚನೆಗಳನ್ನು ಮಾಡಿದ್ದಾರೆ. ಒಂದನೆಯದು ಪ್ರತಿ ವ್ಯಕ್ತಿಗೆ ತಲೆ ಒಂದಕ್ಕೆ ಕನಿಷ್ಟ 10 ರೂಪಾಯಿ ಖರ್ಚಾಗುವ ಹಾಗೆ ಕೇಂದ್ರ ಸರ್ಕಾರದವರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನು ಒದಗಿಸಬೇಕು ಎಂದರೆ ಸುಮಾರು 400 ಕೋಟಿ ರೂಪಾಯಿಗಳನ್ನು ಪಂಚಾಯ್ತಿ ರಾಜ್ಯ ಸಂಸ್ಥೆಗಳಿಗಾಗಿ ಒದಗಿಸಬೇಕೆಂಬುದು. ಮೊದಲನೆಯದಾಗಿ ಮಾಡಿದ ಸೂಚನೆ. ಎರಡನೆಯದು ಪ್ರತಿಯೊಂದು ರಾಜ್ಯದಲ್ಲೂ ಪಂಚಾಯ್ತಿ ಫೈನಾನ್ ಕಾರ್ಪೋರೇಷನ್ ಅಂತ ಹೇಳಿ ಒಂದರಿಂದ 5 ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಸ್ಥಾಪನೆ ಮಾಡಬೇಕೆಂದು ಸೂಚನೆ ಮಾಡಿದ್ದಾರೆ. ಮೊದಲನೆಯ ಸೂಚನೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ರೂಪುರೇಷೆ ಸ್ಪಷ್ಟವಾಗಿ ತಯಾರಾಗುವವರೆಗೂ ಏನೂ ಹೇಳುವುದಕ್ಕೆ ಸಾಧ್ಯವಿಲ್ಲ. ಎರಡನೆಯ ಸೂಚನೆಯನ್ನು ಕೇಂದ್ರ ಸರ್ಕಾರದ ಮಾನ್ಯ ಪಂಚಾಯತ್ ರಾಜ್ಯ ಮಂತ್ರಿಗಳು ಮತ್ತು ನಮ್ಮ ರಾಜ್ಯ ಸರ್ಕಾರದವರು ಅದನ್ನು ಒಪ್ಪಿಕೊಂಡಿದ್ದೇವೆ. ಆದ್ದರಿಂದ ಇವುಗಳ ಆರ್ಥಿಕ ಸ್ಥಿತಿಯಲ್ಲಿ ಒಂದು ನಿರಾಶಾದಾಯಕ ವಾತಾವರಣ ನನಗೇನೂ ಕಾಣಿಸುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಈಗಿನ ಪರಿಸ್ಥಿತಿಯಲ್ಲಿ ಇವತ್ತು ಏನು ಕೊಡುತ್ತಾ ಇದ್ದೇವೆ, ಅದರ ಆಧಾರದ ಮೇಲೆ ಹೇಳುವುದಾದರೆ ನಮ್ಮ ಇಡೀ ಭಾರತ ದೇಶದಲ್ಲಿ ನಮ್ಮ ಮೈಸೂರಿನಲ್ಲಿ ಕೊಡುವುದು ಅತಿ ಅಲ್ಪ. ಮಹಾರಾಷ್ಟ್ರದಲ್ಲಿ ಸುಮಾರು 13-14 ರೂಪಾಯಿ ಒಂದು ತಲೆಗೆ ಖರ್ಚು ಮಾಡಿದರೆ ನಾವು 3 ರೂಪಾಯಿನಷ್ಟು ಮಾತ್ರ ಖರ್ಚು ಮಾಡುತ್ತಾ ಇದ್ದೇವೆ, ನಮಗಿಂತ ಕಡಿಮೆ ಇರುವುದು ಉತ್ತರ ಪ್ರದೇಶ. ಬಾಕಿ ಎಲ್ಲಾ ರಾಜ್ಯಗಳಲ್ಲೂ ನಮಗಿಂತ ಎರಡಷ್ಟು ಹೆಚ್ಚು ಹಣವನ್ನು ಪಂಚಾಯ್ತಿ ರಾಜ್ಯ ಸಂಸ್ಥೆಗಳು ತಲೆ ಒಂದಕ್ಕೆ ಖರ್ಚು ಮಾಡುತ್ತಾ ಇದ್ದಾರೆ. ಆದ್ದರಿಂದ ಮಾನ್ಯ ಸದಸ್ಯರಿಗೆ ನಿವೇದನ ಮಾಡಿಕೊಳ್ಳುತ್ತೇನೆ. ಈ ವಿಚಾರವನ್ನು ಆಲೋಚನೆ ಮಾಡುವಾಗ ನಾವು ಇಷ್ಟು ಮಾತ್ರ ತಿಳಿದುಕೊಳ್ಳಬೇಕು. ಲ್ಯಾಂಡ್ ರೆವಿನ್ಯೂ ಹಂಚಬೇಕಾದರೆ ಯಾವ ಆಧಾರದ ಮೇಲೆ ಹಂಚಬೇಕೆಂಬುದರ ಬಗ್ಗೆ ಬಹಳವಾಗಿ ಚರ್ಚೆ ಆಯಿತು. ಈ ಮಸೂದೆಯಲ್ಲಿ ಸೂಚನೆ ಮಾಡಿರತಕ್ಕ ಪ್ರಕಾರ ಹಂಚಬೇಕೇ ಅಥವಾ ಈಗ ಇದ್ದಂಥ ಪದ್ಧತಿ ಪ್ರಕಾರ ಇಂತಿಷ್ಟು ಭಾಗ ಅಲ್ಲಲ್ಲೇ ಬರತಕ್ಕ ಲ್ಯಾಂಡ್ ರೆವಿನ್ಯೂವನ್ನು ಅಲ್ಲಲ್ಲೇ ಹಂಚಬೇಕೇ ಮತ್ತು ರಾಜ್ಯ ಸರ್ಕಾರದ ಹತ್ತಿರ ನೂರಕ್ಕೆ 10-15ರಷ್ಟು

(ಶ್ರೀ ರಾಮಕೃಷ್ಣ ಹೆಗ್ಡೆ)

ರಿಸರ್ವ್ ಇಟ್ಟು ಈಕ್ವಲೈಸೇಷನ್ ಗ್ರ್ಯಾಂಟ್ ಆಗಿ ಕೊಡಬೇಕೇ ಎನ್ನುವುದನ್ನು ಪುನಃ ವಿಮರ್ಶೆ ಮಾಡೋಣ. ಈ ಮಸೂದೆಯಲ್ಲಿ ಈಗಿರತಕ್ಕ ಪ್ರಾವಿಜನ್ ಏನೆಂದರೆ ನಮ್ಮ ಮೈಸೂರು ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಲ್ಯಾಂಡ್ ರೆವಿನ್ಯೂ ರೇಟ್ ಒಂದೇ ರೀತಿಯಲ್ಲಿ ಇಲ್ಲ, ಅದು ಭೂಗುಣದ ಮೇಲೆ ಇರುವುದರಿಂದ ಕೆಲವು ಕಡೆ 8 ಆಣೆ ಇದೆ, ಕೆಲವು ಕಡೆ 8 ರೂಪಾಯಿ, 10 ರೂಪಾಯಿ, 12 ರೂಪಾಯಿ ಇದೆ. ಆದ್ದರಿಂದ ಆಯಾಯಾ ಪ್ರದೇಶದ ಕಂದಾಯವನ್ನು ಆಯಾಯಾ ಪ್ರದೇಶದವರಿಗೇ ಕೊಡಬೇಕೆಂದರೆ ಅದು ಮೂಲಭೂತವಾದ ತತ್ವಕ್ಕೆ ವಿರೋಧವಾಗುತ್ತದೆ. ಅದೇನೆಂದರೆ ರಾಜ್ಯದಲ್ಲಿರತಕ್ಕ ಎಲ್ಲ ಜಿಲ್ಲೆಯ ಜನರಿಗೂ ಸಮಾನವಾದಂತಹ ನ್ಯಾಯವನ್ನು ಮಾಡಬೇಕು, ಸಮಾನವಾದ ಟ್ರೀಟ್‌ಮೆಂಟನ್ನು ಕೊಡಬೇಕು ಎಂಬ ತತ್ವಕ್ಕೆ ವಿರೋಧವಾಗುತ್ತದೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಬಯಸುವುದಿಲ್ಲ. ಪುನಃ ಪರಿಶೀಲನೆ ಮಾಡೋಣ, ಯಾವ ರೀತಿಯಿಂದ ಅತಿ ಸಮರ್ಪಕವಾದ ವ್ಯವಸ್ಥೆಯಾಗುತ್ತದೆಯೋ ಅದನ್ನು ತರಲಿಕ್ಕೆ ನಾನು ಸಿದ್ಧನಾಗಿದ್ದೇನೆ.

ಬಹಳವಾಗಿ ಚರ್ಚೆ ಆದಂತಹ ವಿಚಾರ ಎಂದರೆ ಈ ಮಾನ್ಯ ಸಭೆಯ ಸದಸ್ಯರಿಗೆ ಅಲ್ಲಿ ಸ್ಥಾನ ಏನು ಎಂಬುದು ? ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಅವರಿಗೆ ಸ್ಥಾನ ಇರಬೇಕೇ ಬೇಡವೇ ? ಅವನ್ನು ಏಕೆ ಹಾಕಲಿಲ್ಲ ? ಓಟಿನ ಅಧಿಕಾರ ಇರಬೇಕೇ, ಬೇಡವೇ ? ಇದರಲ್ಲೂ ಕೂಡ ಎರಡು ತರಹ ವಾದ ಮಾಡಬಹುದು. ಶ್ರೀಮಾನ್ ಗೋಪಾಲ ಗೌಡರು ಒಂದು ತರಹದಿಂದ ಈ ಬಿಲ್ಲಿನ ಪರವಾಗಿ ವಾದ ಮಾಡಿದ್ದಾರೆ. ಗೋಪಾಲ ಗೌಡರು ಮತ್ತು ಎಂ. ಆರ್. ಪಾಟೀಲ್ ಅವರಿಬ್ಬರನ್ನು ಬಿಟ್ಟರೆ ಬಾಕಿಯವರೆಲ್ಲಾ ಇದರಲ್ಲಿ ಶಾಸನ ಸಭಾ ಸದಸ್ಯರು ಇರಲೇಬೇಕು ಮತ್ತು ಅವರಿಗೆ ಮತದ ಅಧಿಕಾರ ಇರಲೇಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಬಹಳ ಚರ್ಚೆ ಮಾಡಲಿಕ್ಕೆ ನಾನು ಬಯಸುವುದಿಲ್ಲ. ತಮ್ಮೆಲ್ಲರ ಅಭಿಪ್ರಾಯ ಇರಬೇಕೆಂದರೆ ಇದ್ದೇ ಇರುತ್ತಾರೆ. ಅದಕ್ಕೆ ನನ್ನ ವೈಯಕ್ತಿಕವಾದ ಆಕ್ಷೇಪಣೆ ಏನೂ ಇಲ್ಲ. ಆದರೆ ಒಂದು ಮಾತಿನಲ್ಲಿ ಹೇಳುವುದಾದರೆ ಯಾವ ಉದ್ದೇಶಕ್ಕಾಗಿ ಇದನ್ನು ತೆಗೆದು ಹಾಕಿದ್ದೇವೆ ಎಂಬುದನ್ನು ವಿವರಿಸುವುದು ಅಗತ್ಯ. ಮೊದಲನೆಯದಾಗಿ ಈ ಮಸೂದೆ ಒಂದು ಬೇಸಿಕ್ ಪ್ರಿನ್ಸಿಪಲ್ ಮೇಲೆ ಸಿದ್ಧವಾಗಿದೆ. ಅದೇನು ಎಂದರೆ ಸ್ಟೇಟ್ ಆಕ್ಟಿವಿಟೀಸ್ ಸರ್ಕಾರದ ಕಾರ್ಯಕ್ರಮವನ್ನು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಒಂದು ಸ್ಟೇಟ್ ಸೆಕ್ಟರ್ ಮತ್ತೊಂದು ಲೋಕಲ್ ಸೆಕ್ಟರ್. ಲೋಕಲ್ ಸೆಕ್ಟರ್‌ನಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸವಾಗಬೇಕೋ ಅದರ ಜವಾಬ್ದಾರಿ ಲೋಕಲ್ ಸಂಸ್ಥೆಗಳಿಗೆ ಇದೆ, ಮತ್ತು ಸ್ಟೇಟ್ ಸೆಕ್ಟರ್‌ನಲ್ಲಿ ಆಗತಕ್ಕ ಯೋಜನೆಗಳು ಆಗಲಿ, ದೊಡ್ಡ ದೊಡ್ಡ ಸ್ಕೀಂಗಳು ಆಗಲಿ, ಪ್ರಾಜೆಕ್ಟುಗಳಾಗಲಿ ಇಂಥಾದ್ದೆಲ್ಲ ನಮ್ಮ ರಾಜ್ಯ ಸರ್ಕಾರದ ಸೆಕ್ಟರ್‌ನಲ್ಲಿ ಆಗುತ್ತದೆ. ಆದ್ದರಿಂದ ಶಾಸನ ಸಭಾ ಸದಸ್ಯರ ಹೆಚ್ಚು ಗಮನ, ಹೆಚ್ಚು ಆಸ್ಥೆ, ಹೆಚ್ಚು ಸಮಯ ಬಹಳ ಮುಖ್ಯವಾದಂತಹ ಸ್ಟೇಟ್ ಸೆಕ್ಟರ್‌ನಲ್ಲಿ ಕೊಡುವುದಕ್ಕೆ ಅನುಕೂಲವಾಗಬೇಕು ಎಂಬುದು ಒಂದನೆಯದು. ಎರಡನೆಯದು ಈ ಸ್ಥಾನಿಕ ಸಂಸ್ಥೆಗಳು ಹೊಸದಾಗಿ ಬೆಳೆಯುತ್ತಾ ಇರತಕ್ಕ ಸಂಸ್ಥೆಗಳು ಇದರಲ್ಲಿ ಲೀಡರ್‌ಷಿಪ್ ಬೆಳೆಯಬೇಕಾದರೆ ಒಂದು ಚುನಾವಣೆಯಾಗಿ ಮತ್ತೊಂದು ಚುನಾವಣೆಯಾಗುವ ಹೊತ್ತಿಗೆ ಬೆಳೆದೇ ಬೆಳೆಯುತ್ತದೆ. ನಮ್ಮ ಶಾಸನ ಸಭೆ ಮತ್ತು ಪಾರ್ಲಿಮೆಂಟಿಗೆ ಮೂರು ಚುನಾವಣೆಗಳು ಆಗಿವೆ. ಹೊಸದಾಗಿ ಬೆಳೆಯುತ್ತಾ ಇರತಕ್ಕ ಸಂಸ್ಥೆಗಳು ಬೇರೆ ಯಾವ ತರಹದ ಪ್ರಭಾವಕ್ಕೂ ಒಳಗಾಗದೆ ಬೆಳೆಯಲಿಕ್ಕೆ ಒಳ್ಳೆಯ ಪೂರ್ಣವಾದ ಅವಕಾಶವಿರಬೇಕೆಂದು ಹೇಳುವಂತಹದು. ಅದರ ಅರ್ಥ ಶಾಸನ ಸಭಾ ಸದಸ್ಯರು ಅಲ್ಲಿ ಹೋಗಿ ಹಾಗೆ ಹೀಗೆ ಮಾಡುತ್ತಾರೆ ಅಥವಾ ಕೈ ಹಾಕುತ್ತಾರೆ—ಅದು ಬಹಳ ಆಕ್ಷೇಪಣೀಯ ಎಂದು ಹೇಳುತ್ತಾ ಇಲ್ಲ—ಅವರು ಅಲ್ಲಿ ಹೋಗಿ ಇದ್ದರೆ ಸಾಕು ಅಲ್ಲಿ ಎಲ್ಲ ರೀತಿಯಲ್ಲೂ ಸಹಕಾರ ಮಾಡಿದರೂ ಸಹ ಅವರ ಮೇಲೆ ಒಂದು ತರಹದ ಡಿಪೆಂಡೆನ್ಸಿ ಅಲ್ಲಿಯ ಸ್ಥಾನಿಕ ಜನರ ಮನೋವೃತ್ತಿಯಲ್ಲಿ ಬೆಳೆಯುತ್ತದೆ ಎಂಬ ಉದ್ದೇಶದಿಂದ ಇದನ್ನು ತೆಗೆದು ಹಾಕಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶಕ್ಕೂ ಅಲ್ಲ. ತಾಲ್ಲೂಕು ಬೋರ್ಡಿನಲ್ಲಾಗಲಿ, ಜಿಲ್ಲಾ ಪರಿಷತ್ತಿನಲ್ಲಾಗಲೀ ಅವರು ಇರಲೇ ಬೇಕು ಎಂಬ ಅಭಿಪ್ರಾಯ ನಾಳೆ ಎಲ್ಲಾ ಸದಸ್ಯರಿಂದಲೂ ಬಂದರೆ ಅದನ್ನು ಒಪ್ಪಿಕೊಳ್ಳಲಿಕ್ಕೆ ನನಗೇನೂ ಆಕ್ಷೇಪಣೆ ಇಲ್ಲ.

ಇನ್ನು ನ್ಯಾಯ ಪಂಚಾಯಿತ್ತು ; ಇದರ ವಿಚಾರದಲ್ಲಿ ಕೆಲವೊಂದು ಸದಸ್ಯರನ್ನು ಬಿಟ್ಟರೆ ಬಹಳ ವಿರೋಧ ಕಂಡುಬಂದಿದೆ. ನಿಜವಾಗಿಯೂ ನೋಡಿದರೆ ಇಷ್ಟೊಂದು ವಿರೋಧಕ್ಕೆ ಕಾರಣವೇನೋ ಗೊತ್ತಾಗುವುದಿಲ್ಲ. ಈ ನ್ಯಾಯ ಪಂಚಾಯಿತ್ತಿಯನ್ನು ಇವತ್ತು ಈ ದೇಶದಲ್ಲಿ ಪ್ರಥಮವಾಗಿ ಈ ಬಿಲ್ಲಿನ ಮುಖಾಂತರ ತರಲಿಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ, ನಮ್ಮ ಮೈಸೂರು ದೇಶದ ಕೆಲವೊಂದು ಭಾಗದಲ್ಲಿ ಇದು ಇದೆ. ಮದರಾಸ್ ಮತ್ತು ಪಂಜಾಬ್ ಈ ಮೂರು ರಾಜ್ಯಗಳನ್ನು ಬಿಟ್ಟರೆ ಇನ್ನುಳಿದ ಎಲ್ಲಾ ರಾಜ್ಯಗಳಲ್ಲೂ ನ್ಯಾಯ ಪಂಚಾಯಿತ್ತುಗಳು ಸ್ಥಾಪನೆಯಾಗಿ ಕೆಲಸ ಮಾಡುತ್ತಾ ಇವೆ.

5-30 P.M.

ಆಂಧ್ರ ಪ್ರದೇಶ, ಅಸ್ಸಾಂ, ಬಿಹಾರ, ಗುಜರಾತ್, ಕೇರಳ, ಜಮ್ಮು ಕಾಶ್ಮೀರ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಒರಿಸ್ಸ, ವೆಸ್ಟ್ ಬೆಂಗಾಲ್, ಹಿಮಾಚಲ ಪ್ರದೇಶ, ಮುಂತಾದ ಪ್ರದೇಶಗಳಲ್ಲದೆ, ಮೈಸೂರಿನ ಕೆಲವು ಪಂಜಾಬು ಭಾಗಗಳು ಮುಂತಾದ ಕಡೆ ಇಲ್ಲ. ಮದ್ರಾಸಿನಲ್ಲಿ ಇದರ ಬಗ್ಗೆ ಕಾನೂನು ತರಬೇಕೆಂಬ ಪ್ರಯತ್ನವಿದೆ. ಇಡೀ ನಮ್ಮ ದೇಶದಲ್ಲಿ ನ್ಯಾಯ ಪಂಚಾಯಿತಿ ರಚನೆಯಾಗಬೇಕಾದ ಅವಶ್ಯಕತೆ ಇದೆ. ಹಾಗೆ ಮಾಡದಿದ್ದರೆ ಇತರರಿಗಿಂತ ನಮ್ಮವರು ಬಹಳ ಹಿಂದುಳಿದವರು, ಅನುಭವವಿಲ್ಲದವರು ಎಂಬ ಭಾವನೆ ಬರಲು ಅವಕಾಶವಾಗುತ್ತದೆ, ಅದಲ್ಲದೆ ನಾವು ಈ ರೀತಿ ಮಾಡದಿದ್ದರೆ ಜನರಿಗೆ ಅಧಿಕಾರ ಕೊಡಲು ಒಪ್ಪಿದಿರುವವರು ನಾವು ಎಂದು ಆಡಿಕೊಳ್ಳಲು ಆಸ್ಪದವಾಗುತ್ತದೆ. ಅದಕ್ಕೆ ಅವಕಾಶವಿರಬಾರದು. ಬ್ರಿಟಿಷರ ಕಾಲದಲ್ಲಿ ಜನರನ್ನು ತಪ್ಪು ಮಾಡಿದಾಗ ಕಳುಹಿಸುತ್ತಿದ್ದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲೇ ಜಮೀನು ಕಂದಾಯದ ವಸೂಲ ಅಧಿಕಾರವನ್ನು ಜನತೆಗೆ ಕೊಟ್ಟಿರುವಾಗ ನಾವು ಸುಮ್ಮನಿರುವುದು ಹೇಗೆ? ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಕೆಲವು ಪುಸ್ತಕಗಳನ್ನು ಉಲ್ಲೇಖಿಸಿ ಹೇಳಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಹಿಂದೆ ನಡೆದಿರುವುದನ್ನು ಬ್ರಿಟಿಷರು ಮತ್ತು ಬೇರೆ ದೇಶದವರು ಇಲ್ಲಿ ಬಂದು ಸ್ಟಡಿಮಾಡಿ ಬರೆದಿದ್ದಾರೆ. 1884ನೆಯ ಇಸವಿಯಲ್ಲಿ ಮೊಟ್ಟ ಮೊದಲು ಮದ್ರಾಸಿನಲ್ಲ ನ್ಯಾಯಪಂಚಾಯಿತಿ ವ್ಯವಸ್ಥೆಯಾಗಬೇಕೆಂದು ತಿಳಿದು ಕಾಯಿದೆ ಮಾಡಿದರು. ಆಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಈ ಕಾಯಿದೆ ಬಂತು. ಬೊಂಬಾಯಿ ರಾಜ್ಯದಲ್ಲಿ 1933ನೆಯ ಇಸವಿಯಲ್ಲಿ ಈ ಕಾನೂನು ಮಾಡಿದರು. ಬ್ರಿಟಿಷರು ಯಾವ ಕಾಲದಲ್ಲ ಈ ದೇಶದ ಸ್ವಾತಂತ್ರ್ಯ ಕೊಟ್ಟರೆ ದೇಶ ನಿರ್ನಾಮವಾಗುತ್ತದೆ, ತಮ್ಮ ಹಳ್ಳಿಗಳನ್ನು ನೋಡಿಕೊಳ್ಳುವ ಸಾಮರ್ಥ್ಯ ಅವರಿಗಿಲ್ಲ ಎಂದು ವಾದಮಾಡುತ್ತಿದ್ದ ಕಾಲದಲ್ಲೇ ಈ ಹಳ್ಳಿ ಜನರಿಗೆ ಕೆಲವು ರಾಜ್ಯಗಳಲ್ಲಿ ಸ್ವಾತಂತ್ರ್ಯ ಕೊಟ್ಟಿರುವಾಗ ಸ್ವಾತಂತ್ರ್ಯ ನಮ್ಮ ಭಾರತಕ್ಕೆ ಬಂದು 18 ವರ್ಷಗಳಾದ ಮೇಲೆ ಈ ಮಸೂದೆ ತಂದರೆ ಹಳ್ಳಿಯವರಿಗೆ ಅಧಿಕಾರ ಕೊಡುವುದು ಬೇಡವೆಂದರೆ ಅದು ಯಾವ ರೀತಿಯ ನ್ಯಾಯವೆಂಬುದನ್ನು ವಿಚಾರ ಮಾಡಬೇಕು. ಹತ್ತು ವರ್ಷಗಳ ನಂತರ ಸರಿಯಾದ ಕಾಲ ಬರುತ್ತದೆ ಎಂದು ನೀವು ಹೇಳುತ್ತೀರಿ. ಪ್ರಜಾಪ್ರಭುತ್ವದಲ್ಲಿ ಎಲ್ಲಕ್ಕೂ ಮೂಲಭೂತವಾದ ಹಕ್ಕು ತಪ್ಪುಮಾಡುವುದು. ಆ ಹಕ್ಕನ್ನು ಹಳ್ಳಿಗರಿಗೆ ಕೊಡದೇ ಹೋದರೆ ಅವರು ಹೇಗೆ ಕಲಿಯಲು ಸಾಧ್ಯ! ಒಂದಲ್ಲ ಒಂದು ಸಲ ಅವರು ತಪ್ಪುದಾರಿಗೆ ಹೋದರೂ ಅವರು ಸ್ವಲ್ಪ ಕಾಲದಲ್ಲಿ ಅರಿತುಕೊಳ್ಳಲು ಅವಕಾಶವಾಗುತ್ತದೆ, ಎಂದಿದ್ದರೂ ಅದು ಆಗಬೇಬೇಕು, ಅವರು ತಮ್ಮ ಜವಾಬ್ದಾರಿ ಅರ್ಥಮಾಡಿಕೊಂಡು ತಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕಾದ್ದು ಅವಶ್ಯಕ. ಎಲ್ಲದರಲ್ಲೂ ರಾಜಕೀಯವಿದೆ, ಎಂದು ಏನಾದರೂ ಒಂದು ದೋಷ ಹುಡುಕುತ್ತಾ ಹೋದರೆ ಎಂದು ಅವರು ನಿಜವಾಗಿಯೂ ನಾಗರೀಕರಾಗುವುದು? ಮತ್ತು ಈ ಮಸೂದೆಯಲ್ಲಿ ಎಲ್ಲಾ ಕಡೆಯೂ ನ್ಯಾಯ ಪಂಚಾಯಿತಿಯನ್ನು ಸ್ಥಾಪನೆ ಮಾಡಬೇಕೆಂದು ಹೇಳಿಲ್ಲ. ಮೊದಲು ವಾತಾವರಣ ಚೆನ್ನಾಗಿರುವ ಕಡೆ ಸ್ಥಾಪಿಸಲು ಡಿಸ್‌ಕ್ರೀಷನ್ ಇದೆ. ಇದರ ಬಗ್ಗೆ ಕೇವಲ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಹೊರಡಿಸಲಾಗುವುದು. ನಂತರ ಅಬ್ಜೆಕ್ಷನ್ಸ್ ಕರೆದು ಯಾವ ಪ್ರದೇಶದಲ್ಲಿ ಸ್ಥಾಪಿಸಬೇಕೆಂದಿದೆಯೋ ಅಲ್ಲಿಂದ ಆಕ್ಷೇಪಣೆಗಳು ಬಂದರೆ ಅಲ್ಲಿ ಸ್ಥಾಪಿಸುವುದಿಲ್ಲ. ಜಗಳವಿಲ್ಲದಿರುವ ಕಡೆ ಜಗಳ ಹುಟ್ಟುವಂತೆ ಮಾಡಬೇಕೆಂಬ ಉದ್ದೇಶವಿಲ್ಲ. ಒಬ್ಬ ಸಾಮಾನ್ಯ ಕೂಲಿ ಒಂದು ಗದ್ದೆಯಲ್ಲಿ ದುಡಿಯಬಹುದು. ಅವನಿಗೆ ಅಲ್ಲಿಂದ 70 ರೂಪಾಯಿ ಬರಬೇಕಾದರೆ ಅದನ್ನು ಕ್ಲೈಮ್ ಮಾಡುವುದಕ್ಕೆ ಅವನು ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಹೋಗಬೇಕು, ಇಲ್ಲದಿದ್ದರೆ ಡಿವಿಜನಲ್ ಹೆಡ್‌ಕ್ವಾರ್ಟರಿಗೆ ಹೋಗಿ ಖರ್ಚುಡಬೇಕು, ಇಲ್ಲದಿದ್ದರೆ ಬರಬೇಕಾದ್ದನ್ನು ಬಿಟ್ಟುಬಿಡಬೇಕು. ಈ ದಿವಸ ಅಂಥವರಿಗೆ ನ್ಯಾಯ ಸಿಕ್ಕುತ್ತಿಲ್ಲ. ಇಲ್ಲಿ ಅನೇಕ ವಕೀಲರಿದ್ದಾರೆ, ಸೆಷನ್ಸ್ ಕೋರ್ಟನ್ನು ಸೀನ್ ಆಫ್ ಅಫೆನ್ಸ್ ಇರುವ ಕಡೆ ಕಂಡಕ್ಟ್ ಮಾಡಬೇಕೆಂಬ ವಚನ ಬಹಳ ಕಾಲದಿಂದ ಇದೆ. ಆ ಜಾಗಕ್ಕೇ ಹೋದರೆ ಸಂಬಂಧಪಟ್ಟ ಸಾಕ್ಷಿ ಎಲ್ಲರ ಎದುರಿಗೆ ಸುಳ್ಳು ಹೇಳುವುದಕ್ಕಾಗುವುದಿಲ್ಲ, ಇವತ್ತು ಅಫೆನ್ಸ್ ಆಗುವುದು ಒಂದೆರಡು ವರ್ಷಗಳ ಮೇಲೆ ಅಫೆನ್ಸ್ ಆದ ಜಾಗದಿಂದ 200 ಮೈಲಿ ದೂರವಿರುವ ಕಡೆ ವಿಚಾರಣೆಗೆ ಬರುತ್ತದೆ, ಬಹಳ ಕಾಲವಾಗುವುದರಿಂದ ವಿಷಯಗಳು ಸರಿಯಾಗಿ ನೆನಪಿರುವುದಿಲ್ಲ; ಆದುದರಿಂದ ಸರಿಯಾಗಿ ಸಾಕ್ಷಿ ಹೇಳುವುದಿಲ್ಲ. ಆದುದರಿಂದ ಆಯಾ ಹಳ್ಳಿಯ ಜನರ ಎದುರಿಗೇ ತೀರ್ಮಾನ ಮಾಡುವುದು ಉತ್ತಮ. ಹಾಗೆ ಮಾಡಿದರೆ ಜನರಿಗೂ ಸಮಾಧಾನವಾಗುವುದು, ಹಾಗೆ ತೀರ್ಮಾನಮಾಡುವ ಅಧಿಕಾರ ಕೊಟ್ಟರೂ ಡಕಾಯ್ತಿ ಕೇಸು, ಮರ್ಡರ್ ಕೇಸು ಮುಂತಾದುವುಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನೇನೂ ಕೊಡುತ್ತಿಲ್ಲ. ಬಹಳ ಸಾಮಾನ್ಯ ಅಧಿಕಾರ ಮಾತ್ರ ಕೊಡುತ್ತಿದ್ದೇವೆ. ದಯೆಯಿಟ್ಟು ಕಲಮುಗಳನ್ನು ಮಾನ್ಯ ಸದಸ್ಯರು ಚೆನ್ನಾಗಿ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಓದಿನೋಡಬೇಕು. ಮತ್ತೊಂದು ಈಗ ಪಂಚಾಯಿತಿ ಆಕ್ಟ್ ಪ್ರಕಾರ ಕೆಲವು ಕಲಮುಗಳನ್ನು ಉಲ್ಲಂಘಿಸಿದರೆ ಶಿಕ್ಷೆಮಾಡಲು ಅವಕಾಶವಿದೆ. ಅದರ ತೀರ್ಮಾನವೆಲ್ಲಾಗಬೇಕು ? ಕೋರ್ಟುಗಳಿಗೆ ಹೋಗಬೇಕು. ಅಲ್ಲಿಗೆ ಹೋದರೆ ಜಾಗ್ರತೆ ನ್ಯಾಯ ದೊರೆಯುವುದಿಲ್ಲ. ಶೀಘ್ರವಾಗಿ ನ್ಯಾಯ ದೊರೆಯಬೇಕಾದ್ದು ಅಗತ್ಯ. ಈ ಎರಡು ತತ್ವಗಳನ್ನು ಒಪ್ಪಲೇಬೇಕು. ಆದುದರಿಂದ ಮಾನ್ಯ ಸದಸ್ಯರು ವ್ಯಕ್ತಮಾಡಿರುವ ಭಯಕ್ಕೆ ಅವಕಾಶವಿಲ್ಲವೆಂಬುದು ಮಸೂದೆಯನ್ನೆಲ್ಲಾ ಚೆನ್ನಾಗಿ ಓದಿದರೆ ಗೊತ್ತಾಗುತ್ತದೆ. ಸಿಕ್ಕಾಪಟ್ಟೆ ತೀರ್ಮಾನವಾಗಬೇಕೆಂದೇನೂ ಮಾಡಿರುವುದಿಲ್ಲ. ಡಿಸ್ಟ್ರಿಕ್ಟ್ ಕೋರ್ಟು ಅಥವಾ ಸೆಷನ್ಸ್ ಕೋರ್ಟು ತಾನಾಗಿ ಅಥವಾ ಅಪ್ಲಿಕೇಷನ್ ಮೇಲೆ ಅಥವಾ ಯಾವುದಾದರೂ ಅಕ್ರಮ ಗಮನಕ್ಕೆ ಬಂದಾಗ ಪಂಚಾಯಿತಿ ಮುಂದಿರುವ ಕೇಸಿನ ಇತ್ಯರ್ಥ ಮಾಡುವಿಕೆಯನ್ನು ನಿಲ್ಲಿಸಬಹುದು, ತೀರ್ಮಾನ ಸಸ್ಪೆಂಡ್ ಮಾಡಬಹುದು. ಇಂಥ ಸೂಪರ್‌ವಿಷನ್ ಮತ್ತು ಕಂಟ್ರೋಲನ್ನು ಮೇಲಿನ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ಮತ್ತೊಂದು ಮಾತು ಹೇಳುವುದು, ಕೆಲವು ಪ್ರದೇಶಗಳಲ್ಲಿ ಜಗಳವಿದೆ. ಕೆಲವೊಂದು ಪ್ರದೇಶಗಳಲ್ಲಿ ಪಾಲಿಟಿಕ್ಸ್ ಅಥವಾ ಕಮ್ಯುನಲ್ ಪಾಲಿಟಿಕ್ಸ್ ಅಥವಾ ರಾಜಕೀಯ ಇಂಥಾ ಯಾವುದೇ ಒಂದು ಅಡಚಣೆ ಇರತಕ್ಕ ಕಡೆಗೆ ಈ ಅಧಿಕಾರವನ್ನು ಕೊಡತಕ್ಕದ್ದು ಸೂಕ್ತವಲ್ಲವೆಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ—ಅಂಥ ವಾತಾವರಣ ಎಲ್ಲಿಯೂ ಇಲ್ಲ. ಆದರೆ ಹಾಗೂ ದೇಶದಲ್ಲಿ ಎಲ್ಲಿಯಾದರೊಂದು ಕಡೆ ಅಂಥ ತೊಂದರೆ ಇದ್ದರೆ ಅಲ್ಲಿಗೆ ಕೊಡತಕ್ಕದ್ದು ಬೇಡ ಎಂದು ಹೇಳುವುದಗಲ್ಲಿ ಸ್ವಲ್ಪ ಅರ್ಥವಿದೆ. ಅದಕ್ಕೆ ಬದಲಾಗಿ ಇದನ್ನು ದೇಶದಲ್ಲೆಲ್ಲೂ ಜಾರಿಗೆ ತರುವುದೇ ಬೇಡ ಎಂದು ಹೇಳತಕ್ಕದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇಂಥಾ ಒಂದು ಪಂಚಾಯಿತಿ ನಮಗೆ ಬೇಕೆಂದು ಯಾರು ಒಂದು ಒಮ್ಮತದಿಂದ ಚುನಾವಣೆಯಲ್ಲಿ ಆರಿಸಿ ಬರುತ್ತಾರೋ ಅಂಥಲ್ಲಿಗಾದರೂ ಕೊಡಿ ಎಂದು ಹೇಳಬಹುದಾಗಿತ್ತು. ಅದನ್ನೂ ಸಹಾ ಹೇಳಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇಷ್ಟು ಹೇಳಿದಮೇಲೆ ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ನಾನು ಇಲ್ಲಿಯವರೆಗೂ ಮಾನ್ಯ ಸದಸ್ಯರುಗಳೆಲ್ಲಾ ಎತ್ತಿದ್ದ ಆಕ್ಷೇಪಣೆಗಳಿಗೆ ಸಾಕಷ್ಟು ಉತ್ತರಗಳನ್ನು ಹೇಳಿದ್ದೇನೆಂದು ನಾನು ಭಾವಿಸುತ್ತೇನೆ. ಇನ್ನು ಕಡೆಯದಾಗಿ ಅನೇಕ ಮಾನ್ಯ ಸದಸ್ಯರುಗಳು ಇದರಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಅನೇಕ ಉಪಯುಕ್ತ ಸಲಹೆಗಳನ್ನಿತ್ತಿದ್ದಾರೆ. ಅವರೆಲ್ಲರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The question is :

"That the Mysore Panchayat Raj Bill, 1964, be taken into consideration".

The motion was adopted.

Motion to refer to a Joint Select Committee.

Sri RAMAKRISHNA HEGDE.—Sir, I beg to move :

"That the Mysore Panchayat Raj Bill, 1964, be referred to a Joint Select Committee consisting of a total number of 20 members, 15 members from the Legislative Assembly and 5 members from the Legislative Council, that the concurrence of the Legislative Council be obtained therefor and that the

following members of this House shall be members of the Joint Select Committee, namely :—

Sriyuths :—

1. G. V. Gowda
2. B. P. Kadam
3. Siddaiah Kasimath
4. B. Bhaskar Setty
5. T. N. Madappa Gowda
6. A. Sharanappa
7. D. M. Siddaiah
8. N. Huchmasty Gowda
9. R. Muniswamaiah
10. M. R. Patil
11. R. S. Hegde
12. B. L. Gowda
13. A. J. Doddameti
14. R. S. Patil
15. Smt. Basavarajeswari

DEPUTY SPEAKER.—The question is :

"That the Mysore Panchayat Raj Bill, 1964, be referred to a Joint Select Committee consisting of a total number of 20 members, 15 members from the Legislative Assembly and 5 members from the Legislative Council, that the concurrence of the Legislative Council be obtained therefor and that the following members of this House shall be members of the Joint Select Committee, namely :—

Sriyuths :—

1. G. V. Gowda
2. B. P. Kadam
3. Siddaiah Kasimath
4. B. Bhaskar Setty
5. T. N. Madappa Gowda
6. A. Sharanappa
7. D. M. Siddaiah
8. N. Huchmasty Gowda
9. R. Muniswamaiah
10. M. R. Patil
11. R. S. Hegde
12. B. L. Gowda
13. A. J. Doddameti
14. R. S. Patil
15. Smt. Basavarajeswari."

The motion was adopted.

Mr. DEPUTY SPEAKER.—Under sub-rule (2) of Rule 240 of the Rules of Procedure and Conduct of Business in the Mysore Legislative Assembly, I nominate the Minister in charge of the Department to which the Bill relates *i.e.* the Minister for Development, Panchayat Raj and Co-operation and the Minister for Law as the Members of the Joint Select Committee.

MYSORE APPROPRIATION (No. 3) BILL, 1964.

Motion to consider.

Sri B. D. JATTI (Minister for Finance).—Sir, I beg to move :

" That the Mysore Appropriation (No. 3) Bill, 1964 be taken into consideration."